# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 07.12.2011 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಜಿ. ಮಂಜುನಾಥರಾಜು – ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ, |
| ಜಿ. ಮಂಜುನಾಥ – ಸದಸ್ಯರು | ಜಂಟಿ ಆಯುಕ್ತರು (ಕಲ್ಯಾಣ) |
| ಲತಾ. ಕೆ – ಸದಸ್ಯರು | ಉಪ ಆಯುಕ್ತರು (ಆಸ್ಥಿಗಳು) |
| ಎಂ.ಸಿ. ಶ್ರೀನಿವಾಸ್ – ಸದಸ್ಯರು | ಮುಖ್ಯ ಲೆಕ್ಕಾಧಿಕಾರಿ, |
| ವಿ. ವಾಗೀಶ್ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಕೆ.ಆರ್.ಪುರಂ/ರ.ಮೂ.ಸೌ.ಬೊಮ್ಮನಹಳ್ಳಿ) |
| ಮಂಜುನಾಥ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೆಚ್.ಎ.ಎಲ್/ರ.ಮೂ.ಸೌ.ಬೊಮ್ಮನಹಳ್ಳಿ) |
| ಎಲ್. ನಾಗರತ್ನ – ಸದಸ್ಯರು | ಸಹಾಯಕ ಅಭಿಯಂತರರು (ಮಹಾಲಕ್ಷ್ಮೀಪುರಂ) |
| ವರಲಕ್ಷ್ಮಿ. ಜೆ – ಸದಸ್ಯರು | |
| ಆಶಾ ಸುರೇಶ್ – ಸದಸ್ಯರು | |
| ಎನ್. ಜಯಪಾಲ – ಸದಸ್ಯರು | |
| ಲಾವಣ್ಯಗಣೇಶ್‌ರೆಡ್ಡಿ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/173/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 16–07–2011ರಲ್ಲಿ ವಿವರಿಸಿರುವಂತೆ, ಬೊಮ್ಮನಹಳ್ಳಿ ವಲಯದ ಹೆಚ್.ಎಸ್.ಆರ್ ಬಡಾವಣೆಯ 14ನೇ ಮುಖ್ಯರಸ್ತೆಯ 17ನೇ ಅಡ್ಡರಸ್ತೆಯಿಂದ 27ನೇ ಅಡ್ಡರಸ್ತೆವರೆಗೆ 775.00ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸುವ ಕಾಮಗಾರಿಗೆ 170.00 ಲಕ್ಷಗಳಿಗೆ 2009–10ರ PWD SR ಸೂಚಿಯಂತೆ ತಯಾರಿಸಿ ಕಾಮಗಾರಿಯ ಸಂಖ್ಯೆ : 000-10N-P-R-E-AS-046 ರಲ್ಲಿ (000-10-N-P-R-E-AS-075) ಕಂಡಿಕೆ (9) ರಲ್ಲಿ ಹಾಗೂ (44) ಆಯುಕ್ತರ ಅನುಮೋದನೆ ಪಡೆಯಲಾಗಿದ್ದು, ಅದರಂತೆ ಗುತ್ತಿಗೆ ಕರೆದು ಗುತ್ತಿಗೆದಾರರಾದ ಶ್ರೀ ಆರ್. ಲೋಕೇಶ್ ರವರಿಗೆ ಕಾಮಗಾರಿಯನ್ನು ಕೈಗೊಳ್ಳಲು ಕಾಯಾದೇಶವನ್ನು ಕಂಡಿಕೆ (51–52) ರಲ್ಲಿ ನೀಡಲಾಗಿತ್ತು.

ಸದರಿ ಕಾಮಗಾರಿಗೆ ನೀಡಲಾದ work code ನವೀಕರಿಸಲು ನಿಗಧಿತ Revalidation ನಮೂನೆಯಲ್ಲಿ ಭರ್ತಿ ಮಾಡಿ ಕಾಮಗಾರಿ ಸಂಖ್ಯೆಯನ್ನು ನವೀಕರಣಗೊಳಿಸಲು ಮುಖ್ಯ ಲೆಕ್ಕಾಧಿಕಾರಿಗಳಿಗೆ ಕಂಡಿಕೆ (93) ರಲ್ಲಿ ಕಡತವನ್ನು ಕಳುಹಿಸಲಾಗಿತ್ತು. ನಮೂನೆಯನ್ನು ಪರಿಶೀಲಿಸಿ job code No: 001802 ನೀಡಿ ಕೈಗೊಳ್ಳುವ ಕಾಮಗಾರಿಗೆ ಟಿವಿಸಿಸಿ ರವರಿಂದ ಕಾಮಗಾರಿಯ ಅಂದಾಜಿಗೆ ಫ್ರೀ ಆಡಿಟ್ ಮಾಡಿಸಿದ ನಂತರ ನವೀಕರಿಸಿದ ಕಾಮಗಾರಿಯ ಸಂಕೇತವನ್ನು ನೀಡಲಾಗುವುದು ಎಂದು ತಿಳಿಸಿ ಕಡತವನ್ನು ಹಿಂದಿರಿಗಿಸಿರುತ್ತಾರೆ. (ಪುಟ ಸಂಖ್ಯೆ : 34)ದಿನಾಂಕ : 07–05–2011ರ ಮಾನ್ಯ ಬೊಮ್ಮನಹಳ್ಳಿ ಶಾಸಕರ ಪತ್ರ (ಪುಟ ಸಂಖ್ಯೆ 36) ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀ ಎಲ್.ರಮೇಶ್ ವಾರ್ಡ್ ಸಂಖ್ಯೆ 187 ಪುಟ್ಟೇನಹಳ್ಳಿ ಪತ್ರದ ಅನುಸಾರವಾಗಿ ಮಾನ್ಯ ಆಯುಕ್ತರು, ಶಾಸಕರು ಹಾಗೂ ಸದಸ್ಯರು ಕೋರಿರುವ ರಸ್ತೆಗೆ ಅಂದಾಜನ್ನು ತಯಾರಿಸಿ, ಮೂಲ ಅಂದಾಜನ್ನು ಸದರಿ ರಸ್ತೆಗೆ ಕಾಮಗಾರಿಯನ್ನು ಸ್ಥಳ ಬದಲಾವಣೆ ಮಾಡಿ ಟೆಂಡರ್ ಕರೆಯಲು ಬರುವುದಿಲ್ಲ.

ಅದರಂತೆ ಈಗ ಜೆ.ಪಿ.ನಗರದ ಪಾಂಡುರಂಗ ಲೇಔಟ್ ರಸ್ತೆಗಳಿಗೆ Side Drain ಅಳವಡಿಸಿ, ವೆಂಕಟಾದ್ರಿ ಲೇಔಟ್ 1ನೇ ಮುಖ್ಯ ಹಾಗೂ ಅಡ್ಡ ರಸ್ತೆಗೆ ಉದ್ದ –90 ಮೀಟರ್‌ಗೆ ಅಭಿವೃದ್ಧಿಪಡಿಸುವ ಕಾಮಗಾರಿಯ ಅಂದಾಜನ್ನು PWD ದರ ಸೂಚಿ 2010–11ರಂತೆ ರೂ.170.00 ಲಕ್ಷಗಳಿಗೆ ತಯಾರಿಸಲಾಗಿರುತ್ತದೆ. ಸದರಿ ರಸ್ತೆಯು ಸಬ್–ಆರ್ಟೀರಿಯಲ್ ರಸ್ತೆಯಾಗಿದ್ದು ವಾರ್ಡ್ ವತಿಯಿಂದ ಕೈಗೊಳ್ಳಲು ಬರುವುದಿಲ್ಲ.

ಸದರಿ ಅಂದಾಜನ್ನು ಟಿವಿಸಿಸಿ ರವರಿಂದ ದಿನಾಂಕ : 15-06-2011 ರಂದು ಸ್ಥಳ ಪರಿಶೀಲನೆ ಮಾಡಲಾಗಿದೆ. ಪ್ರಸ್ತುತ ರಸ್ತೆಯು ಬನ್ನೇರುಘಟ್ಟ ರಸ್ತೆಗೆ ಮುಖ್ಯ ಸಂಪರ್ಕ ಕಲ್ಪಿಸುವ ರಸ್ತೆಯಾಗಿದ್ದು, ವಾಹನ ಸಂಚಾರ ದಟ್ಟಣೆಯು ಅತ್ಯಂತ ಹೆಚ್ಚಾಗಿದ್ದು, ಪಾದಚಾರಿಗಳು ಚಲಿಸುವುದು ಬಹಳ ಕಷ್ಟಕರವಾಗಿರುತ್ತದೆ. ಈಗಿರುವ BS slab Drain ಶಿಥಿಲಗೊಂಡು, depleted ಸ್ಥಿತಿಯಲ್ಲಿದ್ದು, ಪೂರ್ಣ ಪ್ರಮಾಣದ ಹೂಳು ತುಂಬಿದ್ದು Drain ಆಳವು ಸುಮಾರು 1.00 ಮೀಟರ್ ನಿಂದ 1.10 ಇರುತ್ತದೆ. ಇದರಿಂದ ಪಾದಚಾರಿಗಳು Drain ನಲ್ಲಿ ಬೀಳುವ ಸಂಭವವಿರುತ್ತದೆ. ಆದ್ದರಿಂದ ಸ್ಥಳೀಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀ.ಎಲ್. ರಮೇಶ್ ರವರು (ವಾರ್ಡ್ 187, ಪುಟ್ಟೇನಹಳ್ಳಿ ವಾರ್ಡ್) ಸ್ಥಳ ಪರಿಶೀಲನೆ ನಡೆಸಿ ರಸ್ತೆ ಮೂಲಭೂತ ಸೌಕರ್ಯ ರವರಿಂದ ಸಮಗ್ರವಾಗಿ ಹೊಸದಾಗಿ RCC drain ನ್ನು ಹಾಗೂ Cover slab ಅಳವಡಿಸಿ ಪಾಡುರಂಗ ಹಾಗೂ ವೆಂಕಟಾದ್ರಿ ಲೇಔಟ್ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಕೋರಿರುವ ಪತ್ರವನ್ನು ಮಾನ್ಯ ಬೊಮ್ಮನಹಳ್ಳಿ ಶಾಸಕರಿಗೆ ಪತ್ರ ಬರೆದಿರುತ್ತಾರೆ. ಮಾನ್ಯ ಶಾಸಕರು ರವರ ಪತ್ರದಲ್ಲಿ ಪಾಂಡುರಂಗ ಲೇಔಟ್ ರಸ್ತೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಮಾನ್ಯ ಆಯುಕ್ತರಿಗೆ ಕೋರಿದ್ದು, ಮಾನ್ಯ ಆಯುಕ್ತರ ಟಿಪ್ಪಣಿ ಅನ್ವಯ ಮೂಲ ಅಂದಾಜನ್ನು ಬದಲಾವಣೆ ಮಾಡಿ ಮರು ಟೆಂಡರ್ ಕರೆಯಲು ಸೂಚಿಸಿದ್ದಾರೆ.

ಸದರಿ ಕಾಮಗಾರಿಯನ್ನು ಕೈಗೊಳ್ಳಲು ಹಾಲಿ ನೀಡಲಾದ work code ಬಳಸಿಕೊಂಡು ಸದರಿ ಕಾಮಗಾರಿಗೆ ಮರು ಟೆಂಡರ್ ಕರೆಯಲು ಪ್ರಸ್ತಾಪಿಸಲಾಗಿದೆ. ಈಗಾಗಲೇ ನೀಡಿರುವ ಗುತ್ತಿಗೆ ಕರಾರನ್ನು ರದ್ದುಪಡಿಸಿ ಮರು ಟೆಂಡರ್‌ನ್ನು ಕರೆಯಲಾಗುವುದು ಆದ್ದರಿಂದ ಈ ಕೆಳಕಂಡ ಅಂಶಗಳಿಗೆ

- ಬದಲಾವಣೆ ಮಾಡಿರುವ ಸ್ಥಳದ ಕಾಮಗಾರಿಯ ಅಂದಾಜು ರೂ.170.00 ಲಕ್ಷಗಳಿಗೆ ಅನುಮೋದನೆ
- ಮರುಟೆಂಡರ್ ಕರೆಯಲು ಅನುಮೋದನೆ ಕೋರಿ ಕಡತವನ್ನು ಮಂಡಿಸಲಾಗಿತ್ತು.

ಮುಂದುವರೆದು ಕಂಡಿಕೆ (134) ಮಾನ್ಯ ಆಯುಕ್ತರವರು ಸದರಿ ಕಾಮಗಾರಿಯ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಸೂಚಿಸಿರುತ್ತಾರೆ.

ಮಾನ್ಯ ಶಾಸಕರಾದ ಶ್ರೀ.ಎಸ್.ಸತೀಶ್ ರೆಡ್ಡಿ (ಬೊಮ್ಮನಹಳ್ಳಿ ವಿಧಾನ ಸಭಾಕ್ಷೇತ್ರ) ಹಾಗೂ ಶ್ರೀ ಎಲ್.ರಮೇಶ್ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು (ವಾರ್ಡ್ ಸಂಖ್ಯೆ : 187 ಪುಟ್ಟೇನಹಳ್ಳಿ) ರವರು ಸಹ ಮಾನ್ಯ ಆಯುಕ್ತರಿಗೆ ಸದರಿ ಕಾಮಗಾರಿ ಕೈಗೊಳ್ಳಲು ಮನವಿ ಮಾಡಿರುತ್ತಾರೆ.

ಆದ್ದರಿಂದ ಸದರಿ ಕಾಮಗಾರಿಗೆ 2011-12 ಸಾಲಿನ ಆಯವ್ಯಯದಲ್ಲಿ ರೂ.170.00 ಲಕ್ಷಗಳ ಅಂದಾಜು ಮೊತ್ತಕ್ಕೆ ಅನುದಾನ ಒದಗಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :-* ದಿನಾಂಕ : 16-07-2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

## *02]. ವಿಷಯದ ಸಂಖ್ಯೆ :-ತೆಆಸ್ಥಾಸ/226/2011-12*

ಆಯುಕ್ತರ ಟಿಪ್ಪಣಿ ದಿನಾಂಕ ಃ 02-08-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ (ಯೋಜನೆ) ರವರು ಕಡತದ ಕಂಡಿಕೆ ಸಂಖ್ಯೆ 19 ರಲ್ಲಿ ನಮೂದಿಸಿರುವ 6 ಕಾಮಗಾರಿಗಳ ಒಟ್ಟು ಮೊತ್ತ ರೂ.599.41 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡುವ ಸಲುವಾಗಿ 2011-12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಮುಖ್ಯ ಅಭಿಯಂತರರ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕಂಡಿಕೆ ಸಂಖ್ಯೆ 24 ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

2011-12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ, ಲೆಕ್ಕ ಶೀರ್ಷಿಕೆ ಮೂಲ ಭೂತ ಸೌಕರ್ಯಗಳು ಮುಖ್ಯ ರಸ್ತೆ/ಆರ್ಟೆರಿಯಲ್/ಉಪ ಆರ್ಟೆರಿಯಲ್ ರಸ್ತೆಗಳು ಪಿ.ಸಂಖ್ಯೆ 2019 ರಲ್ಲಿ ಒಟ್ಟು 6 ಕಾಮಗಾರಿಗಳ ಮೊತ್ತ ರೂ.599.41 ಲಕ್ಷಗಳ ಅನುದಾನವನ್ನು ಒದಗಿಸಿಕೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**-ಮುಂದೂಡಿದೆ-**

## *03]. ವಿಷಯದ ಸಂಖ್ಯೆ :-ತೆಆಸ್ಥಾಸ/236/2011-12*

ಆಯುಕ್ತರ ಟಿಪ್ಪಣಿ ದಿನಾಂಕ : 05–08–2011ರಲ್ಲಿ ವಿವರಿಸಿರುವಂತೆ, ಶ್ರೀ ಎಂ ಹನುಮಂತೇಗೌಡ, ಮಾನ್ಯ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 72 ಇವರು ಮುದ್ದಯ್ಯನ ಪಾಳ್ಯ ರಿಂಗ್ ರಸ್ತೆಗೆ ಹಾದು ಹೋಗುವ ರಸ್ತೆಯಲ್ಲಿ ಪ್ರತಿ ನಿತ್ಯ ಅಪಘಾತಗಳು ಸಂಭವಿಸುತ್ತಿದ್ದು, ಕೂಡಲೇ ಸೇತುವೆ ನಿರ್ಮಾಣ ಮಾಡುವ ಕಾಮಗಾರಿಯ ಅಂದಾಜು ಮೊತ್ತ ರೂ.89.00 ಲಕ್ಷಗಳಿಗೆ ಅನುಮೋದನೆ ನೀಡಲು ಕೋರಿದ್ದು, ಕಾರ್ಯಪಾಲಕ ಅಭಿಯಂತರರು – ರಸ್ತೆ ಮೂಲಭೂತ ಸೌಕರ್ಯ ಇವರು ತುರ್ತು ಕಾಮಗಾರಿಗಳ ಅನುದಾನದಲ್ಲಿ ಜಾಬ್ ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುತ್ತಾರೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸುವ ಅವಶ್ಯವಿದ್ದು, 2010–11ನೇ ಸಾಲಿನ ಆಯವ್ಯಯದಲ್ಲಿ ಮೇಲ್ಕಂಡ ಕಾಮಗಾರಿಗೆ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಅಡಿ ಸೂಕ್ತ ಅನುದಾನ ಒದಗಿಸಿಕೊಂಡು ಅನುಷ್ಟಾನಗೊಳಿಸುವುದರ ಬಗ್ಗೆ ಹಾಗೂ ಜಾಬ್ ಸಂಖ್ಯೆ ನೀಡುವುದರ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**<u>–ಮುಂದೂಡಿದೆ–</u>**

## ***04]. ವಿಷಯದ ಸಂಖ್ಯೆ :–ತೆಆಸ್ಥಾಸ/237/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಎನ್. ಎಸ್. ನಂದೀಶರೆಡ್ಡಿ ರವರು ಹೆಚ್.ಎ.ಎಲ್. ಏರ್‌ಪೋರ್ಟ್ ವಾರ್ಡ್ 87ರ ಅನ್ನಸಂದ್ರಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸಾರ್ವಜನಿಕರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ರೂ.300.00 ಲಕ್ಷಗಳ ಅನುದಾನವನ್ನು ಮತ್ತು ವಾರ್ಡ್ 87ರ ನೆಲ್ಲೂರುಪುರದಿಂದ ರೆಡ್ಡಿಪಾಳ್ಯ ಎಲ್.ಬಿ.ಶಾಸ್ತ್ರಿನಗರ ಮೂಲಕ ವಿಭೂತಿಪುರ ಕೆರೆವರೆಗೆ ರಾಜಕಾಲುವೆ ಕಾಮಗಾರಿಗಳನ್ನು ಕೈಗೊಳ್ಳಲು ರೂ.400.00 ಲಕ್ಷ ಒಟ್ಟು ರೂ.700.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕೆಂದು ಕೋರಿ ಪತ್ರವನ್ನು ಸಲ್ಲಿಸಿರುತ್ತಾರೆ. ಪತ್ರವನ್ನು ಲಗತ್ತಿಸಿದೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸದರಿ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂದಿಸಿದಂತೆ ಅನುದಾನದ ಮೊತ್ತ ರೂ.700.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸುವ ಸಲುವಾಗಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**<u>–ಮುಂದೂಡಿದೆ–</u>**

## ***05]. ವಿಷಯದ ಸಂಖ್ಯೆ :–ತೆಆಸ್ಥಾಸ/253/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/07/11–12, ದಿನಾಂಕ : 21–06–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ.64 (4), ಮಲ್ಲೇಶ್ವರಂ ರಲ್ಲಿನ ಕಾಡುಮಲ್ಲೇಶ್ವರ 7ನೇ ಮುಖ್ಯರಸ್ತೆಯಲ್ಲಿ 30X65 ಅಡಿ ಅಳತೆಯ ಪಾಲಿಕೆಯ ಖಾಲಿ ನಿವೇಶನವನ್ನು ಶ್ರೀ.ಅಯ್ಯಪ್ಪ ದೇವಸ್ಥಾನ ನಿರ್ಮಿಸಲು ಮೊದಲಿಗೆ ಗುತ್ತಿಗೆಗೆ ನೀಡಿದ್ದು, ಅನಂತರದಲ್ಲಿ 9000 ಚ.ಅಡಿಗಳ ನಿವೇಶನವನ್ನು ವಾರ್ಷಿಕ ಗುತ್ತಿಗೆ ಮೊತ್ತ ರೂ.500/– ಗಳಂತೆ ದಿನಾಂಕ:02–08–1978 ರಿಂದ 01–08–2008ರ ವರೆಗೆ 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿಲಾಗಿದ್ದು, ಇದರ ಅವಧಿಯು ಸಹಾ 01–08–2008ಕ್ಕೆ ಮುಕ್ತಾಯವಾಗಿದ್ದು, ಈಗ ಸದರಿ ಶ್ರೀ.ಅಯ್ಯಪ್ಪ ಸ್ವಾಮಿ ಟ್ರಸ್ಟ್ ರವರು 99 ವರ್ಷಗಳ ಅವಧಿಗೆ ಗುತ್ತಿಗೆ ವಿಸ್ತರಿಸಬೇಕೆಂದು ಕೋರಿರುತ್ತಾರೆ.

ಪ್ರಸ್ತುತ ಸ್ಥಳವು ರಸ್ತೆ ಅಗಲೀಕರಣಕ್ಕೆ ಅವಶ್ಯವಿದೆಯೆಂದು ಕಂಡು ಬಂದಿದ್ದು, ನಂತರದಲ್ಲಿ ಸದ್ಯಕ್ಕೆ ಅದರ ಅವಶ್ಯಕತೆ ಇರುವುದಿಲ್ಲವೆಂದು ತಿಳಿಸಿ ಒಂದು ವೇಳೆ ಸದರಿ ಸ್ಥಳ ರಸ್ತೆ ಅಗಲೀಕರಣಕ್ಕೆ ಬೇಕಾದಲ್ಲಿ ಇದರಂತೆ ಷರತ್ತು ವಿಧಿಸಿ ಗುತ್ತಿಗೆ ಮುಂದುವರೆಸಲು ಕ್ರಮ ತೆಗೆದುಕೊಳ್ಳಬಹುದೆಂದು ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ) ರವರು ಕಂಡಿಕೆ 79 ರಲ್ಲಿ ವರದಿ ನೀಡಿರುತ್ತಾರೆ.

ಪ್ರಸ್ತುತ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಲಾಗಿ ಇದು ಒಟ್ಟು 9000 ಚ.ಅಡಿ ಜಾಗವಿದ್ದು, ಸುಮಾರು. 3800.94 ಚದರ ಅಡಿಯಲ್ಲಿ ದೇವಸ್ಥಾನ ನಿರ್ಮಾಣ ಮಾಡಿದ್ದು, 1817.78 ಚ.ಅಡಿ ಜಾಗದಲ್ಲಿ ಕಟ್ಟಡ ನಿರ್ಮಾಣ ಕಾರ್ಯ ನಡೆದಿದ್ದು, ಈಗ ಸ್ಥಗಿತಗೊಂಡಿದ್ದು ಇನ್ನು 359.25 ಚದರ ಅಡಿ ಜಾಗದಲ್ಲಿ ದೇವಸ್ಥಾನದ ಕಛೇರಿ ಕಟ್ಟಡವಿರುವುದಾಗಿ ತಿಳಿದು ಬರುತ್ತದೆ.

ಪ್ರಸ್ತುತ ಸ್ವತ್ತಿನ ಗುತ್ತಿಗೆ ಅವಧಿಯು ದಿನಾಂಕ:01-08-2008ಕ್ಕೆ ಮುಕ್ತಾಯವಾಗಿದ್ದು, ಸರ್ಕಾರದ 2007ರ ಮಾರ್ಗಸೂಚಿ ದರದಂತೆ ಪ್ರಸ್ತುತ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ ರೂ.3500/-ಗಳಾಗಿದ್ದು ಇದರಂತೆ 9000 ಚದರ ಅಡಿ ಜಾಗಕ್ಕೆ 3500X9000=3,15,00,000 ರೂ ಆಗುತ್ತದೆ. ಶೇ 10% ರಷ್ಟು ವಾರ್ಷಿಕ ಗುತ್ತಿಗೆ ದರ ರೂ. 31,50,000/- ಗಳಾಗುತ್ತದೆ. ಹಾಗೂ ಮಾಸಿಕ ಗುತ್ತಿಗೆ ದರವು ರೂ.2,62,500/- ಆಗುತ್ತದೆ ಎಂದು ತಿಳಿಸಿ ಗುತ್ತಿಗೆ ಅವಧಿ ನವೀಕರಣಕ್ಕೆ ವಲಯಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಮತ್ತು ಕ್ರಯಕ್ಕೆ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲಿನ ವಿವರಗಳ ಹಿನ್ನೆಲೆಯಲ್ಲಿ ಶ್ರೀ.ಅಯ್ಯಪ್ಪ ಸ್ವಾಮಿ ಟ್ರಸ್ಟ್ ರವರಿಗೆ ಕರಾರು ನೊಂದಾಯಿಸಿದ ದಿನಾಂಕದಿಂದ 5 ವರ್ಷದ ಅವಧಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 21-06-2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 26-07-2011ರ ನಿರ್ಣಯ.

## -ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ-

## *06]. ವಿಷಯದ ಸಂಖ್ಯೆ :-ತೆಆಸ್ಥಾಸ/287/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಉಆ(ಜಾ)ಪಿಆರ್/2492/10-11, ದಿನಾಂಕ : 02-08-2011ರಲ್ಲಿ ವಿವರಿಸಿರುವಂತೆ, ದಿನಾಂಕ : 02-08-2011ರ ಮಾನ್ಯ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ॥ಎಸ್.ಎ.ಎಸ್. ಅಡ್ವರ್‌ಟೈಸರ್ಸ್ ಸಂಸ್ಥೆಯವರು ದಿನಾಂಕ:08.02.2011ರಂದು ಪೂಜ್ಯ ಮಹಾಪೌರರಿಗೆ ಪತ್ರವನ್ನು ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ 30 ಸ್ಥಳಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿ.ಪಿ.ಪಿ) ದಡಿಯಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಿ ಸಾರ್ವಜನಿಕರ ಉಪಯೋಗಕ್ಕಾಗಿ ಅವಕಾಶ ಕಲ್ಪಿಸಲಾಗುವುದೆಂದು ಇದರ ವಿರುದ್ಧವಾಗಿ 500 ಅಡಿಗಳ ವಾಣಿಜ್ಯ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು ಕೋರಿರುತ್ತಾರೆ. ಅದರಂತೆ, ಪೂಜ್ಯ ಮಹಾಪೌರರವರು ನಿಯಾಮಾನುಸಾರ ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ.

ಉಪ ಆಯುಕ್ತರು (ಜಾಹೀರಾತು)ರವರು ಈ ಕೆಳಕಂಡ ಸ್ಥಳಗಳನ್ನು ಸ್ಥಳ ತನಿಖೆ ಮಾಡಿ ಭಾವಚಿತ್ರದೊಂದಿಗೆ ವರದಿ ಮಾಡಿರುತ್ತಾರೆ. ಸ್ಥಳಗಳ ವಿವರ ಈ ಕೆಳಕಂಡಂತಿದೆ..

| ಕ್ರ. ಸಂ. | ಸ್ಥಳಗಳ ವಿವರ | ಸಂ. |
|---|---|---|
| 1. | ಎಂ.ಜಿ. ರಸ್ತೆ ಶಂಕರ್‌ನಾಗ್ ಥಿಯೇಟರ್ ಎದುರು | 1 |
| 2. | ಟ್ರಿನಿಟಿ ಚರ್ಚ್ ಸರ್ಕಲ್ | 1 |
| 3. | ಕಾಮರಾಜ ರಸ್ತೆ, ಸಿಗ್ನಲ್ ಹತ್ತಿರ | 1 |
| 4. | ರಿಚ್‌ಮಂಡ್ ರಸ್ತೆ, ಕೆ.ಎಸ್.ಆರ್.ಪಿ. ಕಾಂಪೌಂಡ್ | 1 |
| 5. | ರೆಸಿಡೆನ್ಸಿ ರಸ್ತೆ, ಬಿಷಪ್ ಕಾಟನ್ ಸ್ಕೂಲ್ ಕಾಂಪೌಂಡ್ | 1 |
| 6. | ಕೋರಮಂಗಲ ರಿಂಗ್ ರಸ್ತೆ, ಸೋನಿ ವರ್ಲ್ಡ್ ಎದುರು | 1 |
| 7. | ಕೋರಮಂಗಲ ರಿಂಗ್ ರಸ್ತೆ, ಈಜೀಪುರ ಜಂಕ್ಷನ್ | 1 |

| | | |
|---|---|---|
| 8. | ಕೋರಮಂಗಲ ರಿಂಗ್ ರಸ್ತೆ, ಡೆಲ್ ನಂತರ | 1 |
| 9. | ಡಿಕೆನ್ಸನ್ ರಸ್ತೆ, ಕಲ್ಯಾಣ್ ಜುವೆಲ್ಲರ್ಸ್ ಎದುರು | 1 |
| 10. | ಸಿದ್ದಾಪುರ ಮುಖ್ಯರಸ್ತೆ ಬಸ್ ಸ್ಟಾಪ್ ಹತ್ತಿರ | 1 |
| 11. | ಜಯನಗರ 4ನೇ ಬ್ಲಾಕ್, ಕೂಲ್ ಜಾಯಿಂಟ್ ಸರ್ಕಲ್ ಹತ್ತಿರ, ವಿಜಯ ಕಾಲೇಜ್ ಕಾಂಪೌಂಡ್ | 1 |
| 12. | ಸಂಜಯ್ ಗಾಂಧಿ ಆಸ್ಪತ್ರೆ ಕಾಂಪೌಂಡ್ ಮುಂದೆ | 1 |
| 13. | ಜಯನಗರ ರಿಂಗ್ ರಸ್ತೆ, ಮಾರೇನಹಳ್ಳಿ ಪೆಟ್ರೋಲ್ ಬಂಕ್ ಪಕ್ಕ | 1 |
| 14. | ರೇಸ್ ಕೋರ್ಸ್ ರಸ್ತೆ | 1 |
| 15. | ಸ್ಯಾಂಕಿ ರಸ್ತೆ, ಮಾರುತಿ ಷೋ ರೂಂ ಪಕ್ಕದಲ್ಲಿ | 1 |
| 16. | ಮೇಖ್ರಿ ಸರ್ಕಲ್ ಏರ್ ಫೋರ್ಸ್ ಸ್ಟೇಷನ್ ಮುಂದೆ | 1 |
| 17. | ಬನ್ನೇರುಘಟ್ಟ ಮುಖ್ಯರಸ್ತೆ, ಜಯದೇವ ಆಸ್ಪತ್ರೆ ಎದುರು | 1 |
| 18. | ಮಲ್ಲೇಶ್ವರಂ ಮಂತ್ರಿ ಸ್ಕ್ವೇರ್ ಪಕ್ಕದಲ್ಲಿ | 1 |
| 19. | ಮಲ್ಲೇಶ್ವರಂ 18ನೇ ಕ್ರಾಸ್, ಬಸ್ ಸ್ಟಾಪ್ ಎದುರು | 1 |
| 20. | ಬಸವೇಶ್ವರನಗರ ಮುಖ್ಯರಸ್ತೆ, ವಲ್‌ಸಲಾ ಟ್ರಾವೆಲ್ಸ್ ಎದುರು | 1 |
| 21. | ಹಳೇ ಏರ್‌ಪೋರ್ಟ್ ರಸ್ತೆ, ಟೋಟಲ್ ಮಾಲ್ ಪಕ್ಕದಲ್ಲಿ: | 1 |
| 22. | ಇಂದಿರಾನಗರ 100 ಅಡಿ ರಸ್ತೆ, ನ್ಯೂ ಹಾರಿಜನ್ ಸ್ಕೂಲ್ ಹತ್ತಿರ | 1 |
| 23. | ಸಿ.ಎಂ.ಹೆಚ್ ರಸ್ತೆ | 1 |
| 24. | ಹಡ್ಸನ್ ಸರ್ಕಲ್, ಕಸ್ತೂರಿಬಾ ರಸ್ತೆ | 1 |
| 25. | ಆರ್.ಟಿ. ನಗರ ಮುಖ್ಯರಸ್ತೆ, ಕೆ.ಎಫ್.ಸಿ. ಪಕ್ಕದಲ್ಲಿ | 1 |
| 26. | ಆಡುಗೋಡಿ ಪೋಲೀಸ್ ವಸತಿ ಗೃಹ | 1 |
| 27. | ಬಳ್ಳಾರಿ ರಸ್ತೆ, ಸಿಬಿಐ ಬಸ್ ಬೇ ಎದುರು: | 1 |
| 28. | ಪ್ಯಾಲೇಸ್ ರಸ್ತೆ, ಮಹೇಂದ್ರ ಷೋರೂಂ ಎದುರು | 1 |
| 29. | ಕೋರಮಂಗಲ, ಪಾಸ್ ಪೋರ್ಟ್ ಆಫೀಸ್ ಎದುರು | 1 |
| 30. | ಜಯನಗರ 1ನೇ ಬ್ಲಾಕ್, ರಾಣಿ ಸರಳಾದೇವಿ ಸ್ಕೂಲ್ ಕಾಂಪೌಂಡ್ | 1 |

ದಿನಾಂಕ:08.02.2011ರ ಪೂಜ್ಯ ಮಹಾಪೌರರ ಪತ್ರದಲ್ಲಿ ಮೆ॥ಎಸ್.ಎ.ಎಸ್. ಅಡ್ವರ್‌ಟೈಸರ್ಸ್ ಸಂಸ್ಥೆಯವರು ನಗರದ 54 ವಿವಿಧ ಸ್ಥಳಗಳಲ್ಲಿ ಪಿ.ಪಿ.ಪಿ. ಅಡಿಯಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಕೋರಿದ್ದು, ಇದರ ಬಗ್ಗೆ ನಿಯಾಮಾನುಸಾರ ಕ್ರಮ ವಹಿಸಲು ತಿಳಿಸಿರುತ್ತಾರೆ. ಅದರಂತೆ, ಸಾರ್ವಜನಿಕ ಶೌಚಾಲಯಗಳನ್ನು ಬಿ.ಓ.ಟಿ ಆಧಾರದ ಮೇಲೆ ನಿರ್ಮಿಸಲು ಕೆ.ಟಿ.ಪಿ.ಪಿ ಕಾಯ್ದೆಯಂತೆ ಟೆಂಡರ್ ಕರೆದು ಟೆಂಡರ್‌ನಲ್ಲಿ ಯಶಸ್ವಿಯಾದ ಬಿಡ್‌ದಾರರಿಗೆ ಈ ಕೆಳಕಂಡ ಷರತ್ತುಗಳೊಂದಿಗೆ ಅನುಮೋದನೆ ನೀಡಬಹುದಾಗಿದೆ.

**ಷರತ್ತುಗಳು:**

1. ಪ್ರತಿ ಶೌಚಾಲಯಕ್ಕೆ ವಾರ್ಷಿಕವಾಗಿ ರೂ.50,000/-ಗಳಂತೆ ಲೈಸನ್ಸ್ ಶುಲ್ಕವನ್ನು ಪಾವತಿಸುವುದು.
2. ಪಾಲಿಕೆಯು ನಿಗಧಿಪಡಿಸುವ ಶುಲ್ಕವನ್ನು ಸಾರ್ವಜನಿಕರಿಂದ ವಸೂಲಿ ಮಾಡತಕ್ಕದ್ದು. (Pay and use)

3. ಕೆ.ಟಿ.ಪಿ.ಪಿ ಆಧಾರದ ಟೆಂಡರ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
4. ಶೌಚಾಲಯಗಳ ಮೇಲೆ ಪಾಲಿಕೆಯು ಅನುಮೋದಿಸಿದ ನಕ್ಷೆಗೆ ಅನುಸಾರವಾಗಿ 300 ಚದರ ಅಡಿಗಳಿಗೆ ಮೀರದಂತೆ ವಾಣಿಜ್ಯ ಜಾಹೀರಾತುಗಳನ್ನು ಅಳವಡಿಸುವುದು.
5. ಜಾಹೀರಾತು ಬೈಲಾಗಳು–2006ರಂತೆ ಜಾಹೀರಾತು ತೆರಿಗೆಯನ್ನು ನಿಯಮಾನುಸಾರ ಪಾವತಿಸುವುದು ಮತ್ತು ಬೈಲಾ ನಿಯಮಗಳಿಗೆ ಬದ್ಧರಾಗಿರತಕ್ಕದ್ದು.
6. ಶೌಚಾಲಯಗಳನ್ನು ನಿರ್ಮಿಸುವ ಮೊದಲು ಪಾಲಿಕೆಯ ತಾಂತ್ರಿಕ ವಿಭಾಗದಿಂದ ಶೌಚಾಲಯದ ನಕ್ಷೆಯನ್ನು ಸಲ್ಲಿಸಿ ಅನುಮೋದಿಸಿಕೊಳ್ಳುವುದು.
7. ಶೌಚಾಲಯಗಳ ನಿರ್ಮಾಣಗಳ ಸ್ಥಳಗಳಲ್ಲಿ ನೀರಿನ ಸರಬರಾಜಿಗಾಗಿ ಬೋರ್‌ವೇಲ್‌ಗಳನ್ನು ಒದಗಿಸುವ ಜವಾಬ್ದಾರಿ ಹೊಂದಿರತಕ್ಕದ್ದು.
8. ಶೌಚಾಲಯಗಳನ್ನು ನಿರ್ಮಿಸುವ ಸ್ಥಳಗಳನ್ನು ಸಂಬಂಧಪಟ್ಟ ಮುಖ್ಯ ಅಭಿಯಂತರರಿಂದ ಗುರುತಿಸಿಕೊಂಡು ಇವರ ಉಸ್ತುವಾರಿಯಲ್ಲಿ ಶೌಚಾಲಯಗಳನ್ನು ನಿರ್ಮಿಸುವುದು.
9. ಅನುಮತಿ ಅವಧಿ ಮುಗಿದ ನಂತರ ನಿರ್ಮಿಸಿರುವ ಎಲ್ಲಾ ಸಾರ್ವಜನಿಕ ಶೌಚಾಲಯಗಳನ್ನು ಉತ್ತಮ ಸ್ಥಿತಿಯಲ್ಲಿ ನಗರ ಪಾಲಿಕೆಗೆ ಹಸ್ತಾಂತರಿಸುವುದು.
10. ಟೆಂಡರ್ ಪ್ರಕಟಣೆಯ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.

**ದಿನಾಂಕ:31.03.2011ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನ ವಿಷಯದ ಸಂಖ್ಯೆ:299/2010–11ರಂತೆ "ಆಯುಕ್ತರವರ ದಿನಾಂಕ:25.03.2011ರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, 10 ವರ್ಷಗಳ ಕಾಲಾವಧಿಗೆ ಪಿ.ಪಿ.ಪಿ. ಆಧಾರದ ಮೇಲೆ ಷರತ್ತುಗಳಿಗೆ ಒಳಪಟ್ಟು ನೀಡುವ ಮಾರ್ಪಾಡಿ ನೊಂದಿಗೆ, ಹೆಚ್ಚಿನ ಕಾಲಾವಧಿಗೆ ಅನುಮತಿ ನೀಡಲು ಸರ್ಕಾರದ ಅನುಮೋದನೆ ಕೋರಲು ಸಭೆಯು ತೀರ್ಮಾನಿಸುತ್ತಾ, ಪಟ್ಟಿಯಲ್ಲಿರುವ 54 ಸ್ಥಳಗಳಿಗೆ ಬದಲಾಗಿ, 30 ಸ್ಥಳಗಳಿಗೆ ಮಾತ್ರ ನೀಡಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಪರಿಶೀಲಿಸಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧವಾಗಿ ಒಪ್ಪುವುದೆಂದು" ತೀರ್ಮಾನಿಸಲಾಗಿರುತ್ತದೆ.** ಅದರಂತೆ, ಈ ಮೇಲ್ಕಂಡ ಅಂಶಗಳ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 02–08–2011 ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09–08–2011ರ ನಿರ್ಣಯ.

**<u>ನಿರ್ಣಯ:</u>** ದಿನಾಂಕ 09–08–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.

## *07]. ವಿಷಯದ ಸಂಖ್ಯೆ :–ತೆಅಸ್ಥಾಸ/305/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 28–09–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 160 ರ 07 ಕಾಮಗಾರಿಗಳ ಅಂದಾಜು ಮೊತ್ತ ರೂ. 138.76 ಲಕ್ಷಗಳಿಗೆ ಶ್ರೀ ಎಂ ಶ್ರೀನಿವಾಸ್, ಮಾನ್ಯ ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ರವರು 2011–12 ನೇ ಸಾಲಿನ ಆಯವ್ಯಯದ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಅನುಮೋದನೆ ನೀಡಲು ತಮ್ಮ ಪತ್ರದ ಮುಖಾಂತರ ಕೋರಿರುತ್ತಾರೆ.

2011–12 ನೇ ಸಾಲಿನ ಕರಡು ಆಯವ್ಯಯ ಮಂಡಿಸುವ ಮುನ್ನ ಅಗತ್ಯ ತುರ್ತು ಕಾಮಗಾರಿಗಳಿಗಾಗಿ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಜಾಬ್ ಸಂಖ್ಯೆ ನೀಡಿರುವ ಮೊತ್ತ ರೂ. 6600.00 ಲಕ್ಷಗಗಳು ಹಾಗೂ ಚಾಲ್ತಿ ಕಾಮಗಾರಿಗಳಿಗೆ ರೂ. 8500.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.

( ರೂ. ಲಕ್ಷಗಳಲ್ಲಿ)

| 2011–12 ರ ಕರಡು ಆಯವ್ಯಯದಲ್ಲಿ ಒಟ್ಟಾರೆ ಮೀಸಲಿಟ್ಟ ಅನುದಾನ (6600+8500) | 2011–12 ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ ಜಾಬ್ ನಂಬರ್ ನೀಡಿರುವ ಮೊತ್ತ | ಜಾಬ್ ಸಂಖ್ಯೆ ನೀಡಲು ಸ್ಥಾಯಿ ಸಮಿತಿ ಮತ್ತು ಮಾನ್ಯ ಆಯುಕ್ತರವರಿಂದ ಅನುಮೋದಿತ ಮೊತ್ತ | ಜಾಬ್ ನೀಡುವುದರ ಬಗ್ಗೆ ಅನುಮೋದನೆಗೆ ಮಂಡಿಸಿರುವ ಮೊತ್ತ | ರಸ್ತೆ ಗುಂಡಿ ಮುಚ್ಚಲು ಜೆಟ್ ಪ್ಯಾಕರ್ ಮಿಸನ್ ಖರೀದಿಸಲು ಮೀಸಲಿಡಲು ಮೌಖಿಕವಾಗಿ ಸೂಚಿಸಿರುವ ಮೊತ್ತ | ಬಾಕಿ ಇರುವ ಮೊತ್ತ |
|---|---|---|---|---|---|
| 8500.000 | 2533.420 | 1383.77 | 485.08 | 2500.00 | 1597.73 |

2011–12 ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ 7 ಕಾಮಗಾರಿಗಳ ಅಂದಾಜು ಮೊತ್ತ ರೂ. 138.76 ಲಕ್ಷಗಳಿಗೆ "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕಶೀರ್ಷಿಕೆಯಡಿ ಜಾಬ್ ಸಂಖ್ಯೆ ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *08]. ವಿಷಯದ ಸಂಖ್ಯೆ :–ತೆಆಸ್ಥಾಸ/308/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)54/2011–12, ದಿನಾಂಕ : 28–09–2011ರಲ್ಲಿ ವಿವರಿಸಿರುವಂತೆ, ಶ್ರೀ ಎಸ್. ಸಿ. ಅಶೋಕ್, ಸಂಸ್ಥಾಪಕ ಅಧ್ಯಕ್ಷರು, ಸ್ನೇಹ ಗಂಗ ಕ್ರಿಯೇಷನ್ಸ್ (ರಿ) ನಂ. 154, 3ನೇ ಮುಖ್ಯ ರಸ್ತೆ, ಆರ್.ಆರ್.ಲೇ ಔಟ್, ನಾಗದೇವನಹಳ್ಳಿ, ಜ್ಞಾನಭಾರತಿ ಅಂಚೆ, ಬೆಂಗಳೂರು–560 056 ರವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ತಮ್ಮ ಸಂಸ್ಥೆಯ ವತಿಯಿಂದ ಮಹಿಳೆಯರಿಗಾಗಿ ಅನೇಕ ವಿಧಧ ತರಬೇತಿಗಳಾದ ಹೊಲಿಗೆ ತರಬೇತಿ, ನಿಟ್ಟಿಂಗ್ ತರಬೇತಿ, ಎಂಬ್ರಾಯಿಡರಿ ತರಬೇತಿ, ಮೇಣದಬತ್ತಿ ತಯಾರಿಕೆಯ ತರಬೇತಿ, ಸೌಂದರ್ಯವರ್ಧಕ ತರಬೇತಿ, ಫ್ಯಾಷನ್ ಡಿಸೈನ್, ಗಣಕ ಯಂತ್ರದ (ಕಂಪ್ಯೂಟರ್) ತರಬೇತಿ ಹಾಗೂ ಇನ್ನೂ ಮುಂತಾದ ಸ್ವಯಂ ಉದ್ಯೋಗ ಕಲ್ಪಿಸುವ ತರಬೇತಿಗಳನ್ನು ಮತ್ತು ಸಂಗೀತ ಶಾಲೆಯನ್ನು ಉಚಿತವಾಗಿ ನಡೆಸಿಕೊಂಡು ಬಂದಿರುವುದಾಗಿ ತಿಳಿಸಿ ಸುಮಾರು 160 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದು 12 ಜನ ಶಿಕ್ಷಕರುಗಳು ಕಾರ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ. ವಿದ್ಯಾರ್ಥಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಬೇಕಾಗುವ ಉಪಕರಣಗಳು ಅಥವಾ ಉಪಕರಣಗಳಿಗಾಗಿ ಪಾಲಿಕೆ ವತಿಯಿಂದ ಸಹಾಯಧನ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಮುಂದುವರೆದಂತೆ, **ಸದರಿ ಸಂಸ್ಥೆಯವರು ಈಗಾಗಲೇ ಮನವಿ ಸಲ್ಲಿಸಿ, ತಮ್ಮ ಸಂಘದ ವತಿಯಿಂದ ಸ್ನೇಹ ಗಂಗ ಕ್ರಿಯೇಷನ್ಸ್ (ರಿ) ಆವರಣದಲ್ಲಿ ಎರಡು ದಿನಗಳ "ದಲಿತ ಕಲಾ ಮಹೋತ್ಸವ" ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ತಿಳಿಸಿ, ಪಾಲಿಕೆಯ ವತಿಯಿಂದ 2011–12 ನೇ ಸಾಲಿಗೆ ಅನುದಾನ ಮಂಜೂರು ಮಾಡಬೇಕೆಂದು ಕೋರಿದ್ದು,** ಪಾಲಿಕೆಯ ಕೊಡುಗೆ ಮತ್ತು ಸಹಾಯಾನುದಾನ ಲೆಕ್ಕ ಶೀರ್ಷಿಕೆಯಡಿಯಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಗಣಿಸುವ ಕುರಿತು **ಉಲ್ಲೇಖದನ್ವಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಈಗಾಗಲೇ ಟಿಪ್ಪಣಿ**ಯನ್ನು ಮಂಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :–*** **ದಿನಾಂಕ : 28–09–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಘಕ್ಕೆ ಸಮಿತಿಯಿಂದ ಈಗಾಗಲೇ ವಿಷಯದ ಸಂಖ್ಯೆ ತೆ.ಆ.ಸ್ಥಾ.ಸ/272/2011–12, ದಿನಾಂಕ : 26–09–2011ರಲ್ಲಿ ಅನುದಾನವನ್ನು ಮಂಜೂರು ಮಾಡಲಾಗಿರುವುದರಿಂದ ಅದರಂತೆ ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *09]. ವಿಷಯದ ಸಂಖ್ಯೆ :–ತೆಆಸ್ಥಾಸ/310/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)45/2011–12, ದಿನಾಂಕ : 30–09–2011ರಲ್ಲಿ ವಿವರಿಸಿರುವಂತೆ, ಶ್ರೀ ಬಿ. ರುದ್ರೇಶ್, ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ (ರಿ), ನಂ. 208, ಮಿಲೇನಿಯಂ ಶಾಲೆ ಎದುರು, ಆರ್.ಎಂ.ವಿ. 2ನೇ ಹಂತ, ರಾಜಗೋಪಾಲ ರಸ್ತೆ, ಸಂಜಯನಗರ ಅಂಚೆ, ನಾಗಶೆಟ್ಟಿ ಹಳ್ಳಿ, ಬೆಂಗಳೂರು – 560 094. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆ ಸಾಂಸ್ಕೃತಿಕ ನೆಲೆಗಟ್ಟಿಗಾಗಿ ಸಮಾಜದ ಉನ್ನತಿಗಾಗಿ ಶಿಕ್ಷಣದ ಪ್ರಗತಿಗಾಗಿ ಪರ್ಯಾಯಗಳನ್ನು ಹುಡುಕುವ ಮೂಲಕ ಸಮಾನತೆಯ ಮತ್ತು ಜನಪರಂಪರೆಯ ಸಮಾಜ ನಿರ್ಮಾಣಕ್ಕಾಗಿ ಕಾರ್ಯನಿರ್ವಹಿಸುತ್ತಿದ್ದು, ಸಾಂಸ್ಕೃತಿಕ ಸಂಸ್ಥೆಯೆಂದು ಹೆಸರು ಮಾಡಿರುವುದಾಗಿ ತಿಳಿಸಿರುತ್ತಾರೆ. ಕಳೆದ 20 ವರ್ಷಗಳಿಂದ ರಂಗಭೂಮಿ, ಪೌರಾಣಿಕ, ಜನಪದ ಸಾಹಿತ್ಯ, ಪರಿಸರ, ಶಿಕ್ಷಣ ಗ್ರಾಮೀಣಾಭಿವೃದ್ಧಿ ಮುಂತಾದ ಎಲ್ಲಾ ರಂಗಗಳಲ್ಲೂ ಕೆಲಸ ಮಾಡುತ್ತಿರುವ ನಾಡಿನ ಸಾಹಿತಿ, ಚಿಂತಕರ, ಕಲಾವಿದರ ಮೆಚ್ಚುಗೆ ಪಡೆದಿರುವುದಾಗಿ ತಿಳಿಸಿರುತ್ತಾರೆ. ಪ್ರತಿ ವರ್ಷದಂತೆ ಈ ವರ್ಷವೂ ತಮ್ಮ ವೇದಿಕೆ ವತಿಯಿಂದ ನಾಟಕೋತ್ಸವ–2011 ಕಾರ್ಯಕ್ರಮವನ್ನು ನಯನ ರಂಗಮಂದಿರ ಮತ್ತು ರವೀಂದ್ರ ಕಲಾ ಕ್ಷೇತ್ರದಲ್ಲಿ ದಿನಾಂಕ 05.09.2011 ಮತ್ತು 06.09.2011 ರಂದು ಎರಡು ದಿನಗಳ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಈ ಎರಡು

ದಿನಗಳಲ್ಲಿ ಎರಡು ನಾಟಕ ಮತ್ತು ಒಂದು ರಂಗ ಗೀತೆ ಕಾರ್ಯಕ್ರಮ ಮಾಡುತ್ತಿದ್ದು ಈ ಮೂರು ಕಾರ್ಯಕ್ರಮಗಳಿಗೂ ಪಾಲಿಕೆ ವತಿಯಿದ ಪ್ರಾಯೋಜನೆ/ಧನ ಸಹಾಯ ಮಾಡಬೇಕೆಂದು ಕೋರಿರುತ್ತಾರೆ.

ಪೂಜ್ಯ ಮಹಾಪೌರರು ಹಾಗೂ ಶ್ರೀ ಎನ್.ಎಂ. ಕೃಷ್ಣ ಮೂರ್ತಿ ಸದಸ್ಯರು ವಾರ್ಡ್–19 (ಸಂಜಯ್ ನಗರ) ರವರು ಟಿಪ್ಪಣಿ ಬರೆದು ಸದರಿ ಸಂಘಕ್ಕೆ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *10]. ವಿಷಯದ ಸಂಖ್ಯೆ :–ತೆಆಸ್ಥಾಸ/311/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)59/2011–12, ದಿನಾಂಕ : 30–09–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಜಯಲಕ್ಷ್ಮೀ ನಾಗೇಂದ್ರ, ಅಧ್ಯಕ್ಷರು, ವಿಜಯ ಮ್ಯೂಸಿಕ್ ಸ್ಕೂಲ್ (ರಿ) ನಂ. 65, 10ನೇ ಮುಖ್ಯ ರಸ್ತೆ, 2ನೇ ಕ್ರಾಸ್, ಜ್ಞಾನ ಜ್ಯೋತಿ ನಗರ ವಿಶ್ವ ವಿದ್ಯಾನಿಲಯ, ಬೆಂಗಳೂರು–560056 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಏಳು ಸ್ವರವು ಸಂಗೀತವಾದಂತೆ ಹತ್ತು ಗಾಯಕ ಪ್ರತಿಭೆಗಳು ಒಂದು ಗೂಡಿ ವಿಜಯ ಸಂಗೀತ ಶಾಲೆ ರೂಪುಗೊಂಡಿರುವುದಾಗಿ ತಿಳಿಸಿರುತ್ತಾರೆ. ಈಗಾಗಲೇ ಹಲವಾರು ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಕನ್ನಡ ನಾಡಿನ ಮನೆ ಮಾತಾಗಿರುವ ತಮ್ಮ ಸಂಸ್ಥೆ ದಿನಾಂಕ 1999 ಸ್ಥಾಪನೆಯಾಗಿ ಇಂದಿನವರೆಗೂ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಅಂದರೆ ಟ್ಯಾಲೆಂಟ್ಸ್ ಡೇ, ವಾರ್ಷಿಕೋತ್ಸವ, ಸಪ್ತಸ್ವರ ಸಂಗೀತ ಸಂಜೆ, ಭವನೋತ್ಸವ ಮತ್ತು ಸಂಸ್ಥಾಪಕರ ದಿನಾಚರಣೆ ಹೀಗೆ ವರ್ಷದಲ್ಲಿ ಹಲವಾರು ಕಾರ್ಯಕ್ರಮಗಳು ಹಮ್ಮಿಕೊಳ್ಳುತ್ತಿದ್ದು, ತಮ್ಮ ಸಂಸ್ಥೆಯಲ್ಲಿ ಎಲ್ಲಾ ತರಗತಿಗಳು ಅಂದರೆ ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಸುಗಮ ಸಂಗೀತ, ಹಾರ್ಮೋನಿಯಂ, ಪಿಟೀಲು, ಗಿಟಾರ್, ಕೀ ಬೋರ್ಡ್, ವೀಣೆ, ಮೃದಂಗ, ತಬಲ ನೃತ್ಯ ಮತ್ತು ಚಿತ್ರಕಲೆ ಹೀಗೆ ಹಲವಾರು ತರಗತಿಗಳು ಎಲ್ಲಾ ತರಹದ ಮಕ್ಕಳಿಗೆ ಕಲ್ಪಿಸಲಾಗುತ್ತಿದ್ದು, ತಮ್ಮ ಶಾಲೆಯಲ್ಲಿ ಅಗತ್ಯಕ್ಕೆ ಬೇಕಾದ ಮೂಲ ಸಲಕರಣೆ ಹಾಗೂ ವಾದ್ಯೋಪಕರಣಗಳು ಅನಾನುಕೂಲವಾಗಿದ್ದು ಹಾಗೂ ಸಂಸ್ಥೆಯಲ್ಲಿ ಅಗತ್ಯ ಬೇಕಾದ ವಸ್ತುಗಳು ಅನಾನುಕೂಲವಿದ್ದು ತುಂಬಾ ದುಃಸ್ಥಿತಿಯನ್ನು ಎದುರಿಸಲಾಗುತ್ತಿದೆ ಎಂದು ತಿಳಿಸುತ್ತಾ, ಇದಲ್ಲದೆ ಉಪಾಧ್ಯಾಯರ ಸಂಭಾವನೆಯನ್ನು ಮತ್ತು ಸಂಸ್ಥೆಯ ಸಿಬ್ಬಂಧಿಯ ಸಂಭಾವನೆಯನ್ನು ಸಂಸ್ಥೆಯು ಭರಿಸುವುದರಿಂದ ತಮ್ಮ ಶಾಲೆಯು ತುಂಬಾ ಆರ್ಥಿಕ ತೊಂದರೆಯಲ್ಲಿದ್ದು, ವಾದ್ಯಗಳು ಮತ್ತು ಅಗತ್ಯ ಸಾಮಾಗ್ರಿ ವಸ್ತುಗಳನ್ನು ಪಾಲಿಕೆ ವತಿಯಿಂದ ಒದಗಿಸಬೇಕೆಂದು ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

*ನಿರ್ಣಯ :–* **ದಿನಾಂಕ : 30–09–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.40,000/– (ನಲವತ್ತು ಸಾವಿರ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *11]. ವಿಷಯದ ಸಂಖ್ಯೆ :–ತೆಆಸ್ಥಾಸ/312/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)43/2011–12, ದಿನಾಂಕ : 30–09–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಗೀತಾ ಬಾಲಿ, ನೃತ್ಯ ನಿರ್ದೇಶಕಿ ಮತ್ತು ಕಾರ್ಯದರ್ಶಿ, ಗೀತಾ ನೃತ್ಯ ಶಾಲಾ (ರಿ) ನಂ. 140, 4ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜೆ.ಪಿ. ನಗರ, 3ನೇ ಹಂತ, (ವಿಜಯಾ ಬ್ಯಾಂಕ್ ರಸ್ತೆ) ಬೆಂಗಳೂರು – 560 078 ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ತಾವು ಪರಿಶಿಷ್ಟ ವರ್ಗಕ್ಕೆ ಸೇರಿದ ಹೆಸರಾಂತ ನೃತ್ಯ ಕಲಾವಿದೆ. ತಮ್ಮ ನೃತ್ಯ ಶಾಲೆಯು 4ನೇ ಅಕ್ಟೋಬರ್ 1988 ರಲ್ಲಿ ಸ್ಥಾಪನೆಯಾಗಿದ್ದು, ಸುಮಾರು 50 ವರ್ಷಗಳಿಂದ ಅನೇಕ ವಿದ್ಯಾರ್ಥಿಗಳಿಂದ ನೃತ್ಯ ಶಿಕ್ಷಣವನ್ನು ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೆ ರಮಣ ಮಹರ್ಷಿ ಅಂಧರ ಶಾಲೆಯಲ್ಲಿ ಅಂಧ ಮಕ್ಕಳಿಗೆ ನೃತ್ಯ ಶಿಕ್ಷಣವನ್ನು ಸಹಾ ಕೊಟ್ಟಿರುತ್ತೇನೆಂದು, ತರಬೇತಿ ನೀಡಿದ ವಿದ್ಯಾರ್ಥಿಗಳ ಪ್ರದರ್ಶನವನ್ನು ವೀಕ್ಷಿಸಿ ಅನೇಕ ಗಣ್ಯರು ಮತ್ತು ವಿಮರ್ಶಕರು ಮುಕ್ತ ಕಂಠದಿಂದ ಪ್ರಶಂಸಿರುತ್ತಾರೆಂದು ತಿಳಿಸಿರುತ್ತಾರೆ. ತಾನು ಭರತನಾಟ್ಯ ಮತ್ತು ಕೂಚಿಪುಡಿ ನೃತ್ಯದಲ್ಲಿ ಪರಿಣಿತಿ ಹೊಂದಿದ್ದು ದೇಶದಾದ್ಯಂತ ಸಾವಿರಕ್ಕೂ ಹೆಚ್ಚು ನೃತ್ಯ ಪ್ರದರ್ಶನಗಳನ್ನಿತ್ತು ಗಣ್ಯರಿಂದ ಪ್ರಶಂಸೆ ಗಳಿಸಿದ್ದು, ತನ್ನ ನೃತ್ಯ ಸೇವೆಗಾಗಿ ಕರ್ನಾಟಕದಿಂದ ರಾಜ್ಯೋತ್ಸವ ಪ್ರಶಸ್ತಿ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ–2009, ವಿಶೇಷ ಶಿಕ್ಷಕರ ಪ್ರಶಸ್ತಿ–2003, ಡಾ॥ ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ–2001, ಹಾಗೂ ಕೆಂಪೇಗೌಡ ಪ್ರಶಸ್ತಿ–2001 ಅನ್ನು ಪಡೆದಿರುವುದಾಗಿ ತಿಳಿಸಿ ತಮ್ಮ ಸಂಸ್ಥೆಯ ವತಿಯಿಂದ ಹಮ್ಮಿಕೊಂಡಿರುವ 2 ದಿನಗಳ "ನಾದ ನೃತ್ಯಾಂಜಲಿ" ನೃತ್ಯ ಕಾರ್ಯಕ್ರಮವನ್ನು ದಿನಾಂಕ 23, 24ರ ಡಿಸೆಂಬರ್ 2011ರಂದು ಆಯೋಜಿಸಿದ್ದು, ಪಾಲಿಕೆಯಿಂದ ರೂ. 6.00 ಲಕ್ಷಗಳ ಧನ ಸಹಾಯವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸದರಿ ನೃತ್ಯ ಶಾಲೆಗೆ **2010–11** ನೇ ಸಾಲಿಗೆ **ರೂ. 25,000/–** (ಇಪ್ಪತ್ತೈದು ಸಾವಿರ) ಗಳ ಅನುದಾನ/ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *12]. ವಿಷಯದ ಸಂಖ್ಯೆ :–ತೆಆಸ್ಥಾಸ/320/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)58/2011–12, ದಿನಾಂಕ : 03–10–2011ರಲ್ಲಿ ವಿವರಿಸಿರುವಂತೆ, ಶ್ರೀ ಎಸ್. ಹರೀಶ್. ಬಿ.ಇ. ಮಾನ್ಯ ಉಪ ಮಹಾಪೌರರು, ಟಿಪ್ಪಣಿ ಬರೆದು ಶ್ರೀ ಚಾಮರಾಜ್, ಸ್ಥಾಪಕರು, ಚಾಮರಾಜ್ ಕಲಾ ಮಂದಿರ, ಹೆಚ್. ಪಾರ್ವತಮ್ಮ ಹೀರೇಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ರವರು ನೀಡಿರುವ ಮನವಿ ಮತ್ತು ದಾಖಲೆಗಳನ್ನು ಲಗತ್ತಿಸುತ್ತಾ, ಸದರಿಯವರು ಚಾನ್ ಕೀ ಕರಾಟೆ ಆರ್ಟ್ ಅಕಾಡೆಮಿ(ರಿ) ಹಾಗೂ ಕಲಾ ಮಂದಿರ ಸಂಸ್ಥೆಯು ಹೆಚ್. ಪಾರ್ವತಮ್ಮ ಹಿರೇಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ಇಲ್ಲಿ ಸುಮಾರು 20 ವರ್ಷಗಳಿಂದಲೂ ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಯ ಮುಖಾಂತರ ಅನೇಕ ಬಡ ಮಕ್ಕಳ ಕಲ್ಯಾಣಕ್ಕಾಗಿ ದುಡಿಯುತ್ತಿರುವುದಾಗಿ ಪ್ರಸ್ತಾಪಿಸಿ, **ಮಾ:ಅನಿಲ್**, ನಂದಿನಿ ಬಡಾವಣೆ ಇವರು ದಿನಾಂಕ 26–06–2011 ರಂದು ನಗರದ ನಾಗರಭಾವಿ ವೃತ್ತದಿಂದ ಡಾ: ರಾಜ್ ಕುಮಾರ್ ಪುಣ್ಯ ಭೂಮಿ ಕಂಠೀರವ ಸ್ಟುಡಿಯೋ, ಇಲ್ಲಿಯವರೆಗೆ 8 ಕಿ.ಮೀ ದೂರದವರೆಗೆ **"ನಾನ್ ಸ್ಟಾಫ್ ಡಬಲ್ ಹ್ಯಾಂಡ್ ಕಾರ್ಟ್ ವೀಲ್"** ನ್ನು ಕೇವಲ 1 ಗಂಟೆ 14 ನಿಮಿಷದಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿ ಲಿಮ್ಕಾ ಪುಸ್ತಕದಲ್ಲಿ ದಾಖಲೆ ನಿರ್ಮಿಸಿ, ಈ ಮೂಲಕ ರಾಜ್ಯದ ಗೌರವವನ್ನು ಎತ್ತಿ ಹಿಡಿದಿರುತ್ತಾರೆ. ಇವರು ಬಡ ಕುಟುಂಬದಿಂದ ಬಂದವರಾಗಿರುತ್ತಾರೆ. ಪಾಲಿಕೆ ವತಿಯಿಂದ ಆತನ ಕುಟುಂಬಕ್ಕೆ ಆರ್ಥಿಕ ಸಹಾಯವನ್ನು ಮಹಾನಗರ ಪಾಲಿಕೆ ವತಿಯಿಂದ ಕೊಡಿಸಿ ಕೊಡಲು ಕೋರಿಕೊಂಡಿರುತ್ತಾರೆಂದು ತಿಳಿಸಿ, ಶ್ರೀ ಚಾಮರಾಜ್, ಸ್ಥಾಪಕರು, ಚಾಮರಾಜ್ ಕಲಾ ಮಂದಿರ, ಹೆಚ್. ಪಾರ್ವತಮ್ಮ ಹೀರೇಮಠ ನಿಲಯ, ನಂದಿನಿ ಬಡಾವಣೆ ಮುಖ್ಯರಸ್ತೆ, ಬೆಂಗಳೂರು ಇವರು ನೀಡಿರುವ ಪತ್ರವನ್ನು ಪರಿಗಣಿಸಿ ಧನ ಸಹಾಯ ಮಾಡಲು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಸಂಘ–ಸಂಸ್ಥೆಗಳಿಗೆ ಧನ ಸಹಾಯ/ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಆದರೆ ವೈಯ್ಯಕ್ತಿಕ

ಮಂಜೂರಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವಿರುವುದಿಲ್ಲ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/– ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ. ಆದರೆ, ವಿವೇಚನಾತ್ಮಕ ಅಧಿಕಾರದಿಂದ ಕ್ರೀಡಾಪಟುಗಳಿಗೆ ಹಲವು ಪ್ರಕರಣಗಳಲ್ಲಿ ಕನಿಷ್ಠ ರೂ. 10,000/– ದಿಂದ ಗರಿಷ್ಠ ರೂ. 1.00 ಲಕ್ಷಗಳ ವರೆಗೆ ಧನ ಸಹಾಯವನ್ನು ಮಂಜೂರು ಮಾಡಿರುವ ಉದಾಹರಣೆಗಳಿರುತ್ತವೆ.

ಪ್ರಸಕ್ತ 2011–12 ನೇ ಸಾಲಿನ ಮಹಾನಗರ ಪಾಲಿಕೆಯ ಆಯವ್ಯಯವು ಮಂಡನೆಯಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಕ್ರೀಡಾಪಟುವಿಗೆ ರೂ. 10,000/– ಗಳ (ಹತ್ತು ಸಾವಿರಗಳು) ಸಹಾಯಧನವನ್ನು ಮಂಜೂರು ಮಾಡುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *13]. ವಿಷಯದ ಸಂಖ್ಯೆ :–ತೆಆಸ್ಥಾಸ/321/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)64/2011–12, ದಿನಾಂಕ : 10–10–2011ರಲ್ಲಿ ವಿವರಿಸಿರುವಂತೆ, ಶ್ರೀ ಗುರುದೇವ ನಾರಾಯಣ ಕುಮಾರ್, ಅಧ್ಯಕ್ಷರು, ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ (ನೋ), ನಂ. 619/620, 13ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು – 560 040. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಪ್ರತಿ ವರ್ಷದಂತೆ ಈ ವರ್ಷವೂ ಕನ್ನಡ ಚಳವಳಿಯ ಧೀಮಂತ ನಾಯಕರು, ಮಾಜಿ ಶಾಸಕರು ಆಗಿದ್ದ ಜಿ. ನಾರಾಯಣ ಕುಮಾರ್ ಸ್ಥಾಪಿತ ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಆಶ್ರಯದಲ್ಲಿ ನವೆಂಬರ್ 1 2011 ರಿಂದ ಒಂದು ತಿಂಗಳ ಕಾಲ ಅದ್ದೂರಿ "ಕನ್ನಡ ರಾಜ್ಯೋತ್ಸವ" ವನ್ನು ಕೆಂಪೇಗೌಡ ರಸ್ತೆಯಲ್ಲಿರುವ "ಬನ್ನಪ್ಪ ಪಾರ್ಕ್ ಆಟದ ಮೈದಾನ" ದಲ್ಲಿ ಕಾರ್ಯಕ್ರಮಗಳನ್ನು ನಡೆಸುತ್ತೇವೆಂದು ನವೆಂಬರ್ 1 ರಂದು ನಾಡಿನ ವೈಭವವನ್ನು ಸಾರುವ ಮೆರವಣಿಗೆಯಲ್ಲಿ ಜಾನಪದ ತಂಡಗಳು, ಸ್ತಬ್ಧ ಚಿತ್ರಗಳು, ಕಲಾವಿದರು ಪಾಲ್ಗೊಳ್ಳುವರು, ನವೆಂಬರ್ 1 ರಿಂದ ಸತತವಾಗಿ ಒಂದು ತಿಂಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತದೆಂದು ತಿಳಿಸುತ್ತಾ, ಪ್ರತಿ ವರ್ಷವು ಮಹಾನಗರ ಪಾಲಿಕೆ ಧನ ಸಹಾಯವನ್ನು ನೀಡುತ್ತಿರುವುದು ಸರಿಯಷ್ಟೆ, ಈ ವರ್ಷವು ರಾಜ್ಯೋತ್ಸವ ಕಾರ್ಯಕಲಾಪಗಳಿಗೆ ಮತ್ತು ಕಾರ್ಯಕ್ರಮದ ವ್ಯವಸ್ಥೆಗೆ ಬಹಳ ಖರ್ಚು ವೆಚ್ಚ ತಗುಲುತ್ತಿರುವುದು ಮಹಾನಗರ ಪಾಲಿಕೆ ವತಿಯಿಂದ ರೂ. 20.00 (ಇಪ್ಪತ್ತು ಲಕ್ಷ) ಧನ ಸಹಾಯವನ್ನು ನೀಡಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ 2010–11 ನೇ ಸಾಲಿಗೆ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಪಾಲಿಕೆ ವತಿಯಿಂದ ರೂ. 1.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *14]. ವಿಷಯದ ಸಂಖ್ಯೆ :–ತೆಆಸ್ಥಾಸ/322/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ)ಪಿಎಸ್‌ಆರ್(4)88/2011–12, ದಿನಾಂಕ : 10–10–2011ರಲ್ಲಿ ವಿವರಿಸಿರುವಂತೆ, ಅಧ್ಯಕ್ಷರು, ಶ್ರೀ ಜಯದುರ್ಗಾ ಮತ್ತು ಮಾರಿಯಮ್ಮ ದೇವಸ್ಥಾನ ಟ್ರಸ್ಟ್ (ರಿ), ನಂ. 1/ಎ, ಕೋರಮಂಗಲ 3ನೇ ಹಂತ, 80 ಅಡಿ ರಸ್ತೆ, ಶ್ರೀ ಜಯದುರ್ಗಾ ಮಾರಿಯಮ್ಮ ದೇವಸ್ಥಾನ ರಸ್ತೆ, ಕಮರ್ಷಿಯಲ್ ಟ್ಯಾಕ್ಸ್ ಆಫೀಸ್ ಎದುರು, ಬೆಂಗಳೂರು – 560 047 ರವರು ಮನವಿ ಸಲ್ಲಿಸಿ ಶಾಂತಿ ನಗರ ವಿಧಾನ ಸಭಾ ಕ್ಷೇತ್ರ (ಬಿ.ಬಿ.ಎಂ.ಪಿ. ವಾರ್ಡ್ ನಂ.116 ನೀಲಸಂದ್ರ) ವ್ಯಾಪ್ತಿಯಲ್ಲಿ

ಬರುವ ಕೋರಮಂಗಲ 3ನೇ ಹಂತ, 80 ಅಡಿ ರಸ್ತೆ, ಶ್ರೀ ಜಯದುರ್ಗಾ ಮಾರಿಯಮ್ಮ ದೇವಸ್ಥಾನಕ್ಕೆ ಕಳೆದ ವರ್ಷ ಅನುದಾನ ಮಂಜೂರು ಮಾಡುವಂತೆ ಅಗತ್ಯವಾದ ಮಾಹಿತಿಗಳೊಂದಿಗೆ ಮನವಿ ಸಲ್ಲಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಅನುದಾನ ಮಂಜೂರಾತಿ ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದಿಲ್ಲ. ಸದರಿ ದೇವಸ್ಥಾನದ ಕಟ್ಟಡ ಕಾಮಗಾರಿಯ ಒಟ್ಟು ಅಂದಾಜು ವೆಚ್ಚ ರೂ. 27.00 ಲಕ್ಷಗಳಾಗಿದ್ದು, ಹಣಕಾಸಿನ ಕೊರತೆಯಿಂದಾಗಿ ದೇವಸ್ಥಾನದ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿರುತ್ತವೆ. ಈ ಪ್ರದೇಶದಲ್ಲಿ ಪರಿಶಿಷ್ಟ ಜಾತಿ/ಪಂಗಡದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದು (ಕೊಳಚೆ ಪ್ರದೇಶ) ಆರ್ಥಿಕ ಸಹಾಯವಿಲ್ಲದೆ ದೇವಸ್ಥಾನ ಅಭಿವೃದ್ಧಿಗೆ ಅನಾನುಕೂಲ ಉಂಟಾಗಿರುತ್ತದೆ ತಿಳಿಸಿ, ಪಾಲಿಕೆ ವತಿಯಿಂದ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸದರಿ ದೇವಸ್ಥಾನಕ್ಕೆ ರೂ. 10.00 (ಹತ್ತು ಲಕ್ಷ ರೂಪಾಯಿಗಳು ಮಾತ್ರ) ಗಳ ಅನುದಾನವನ್ನು ಮಂಜೂರು ಮಾಡುವ ಮೂಲಕ ದೇವಸ್ಥಾನದ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಸಹಾಯ ಮಾಡಬೇಕೆಂದು ಕೋರಿರುತ್ತಾರೆ.

2010–11 ನೇ ಸಾಲಿನಲ್ಲಿ ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಲೆಕ್ಕ ಶೀರ್ಷಿಕೆಯಡಿಯಲ್ಲಿ ಮೀಸಲಿರಿಸಲಾಗಿದ್ದ ರೂ. 10.00 ಕೋಟಿಗಳು ಹಂಚಿಕೆಯಾಗಿದ್ದರ ಹಿನ್ನೆಲೆಯಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 28–03–2011 ರಂದು ನಡೆದ ಸಭೆಯ ನಡವಳಿಗಳು ವಿಷಯದ ಸಂಖ್ಯೆ : ತೆಆಸ್ಥಾಸ/335/2010–11 ರಲ್ಲಿ ಸದರಿ ಸಂಸ್ಥೆಯ ಪ್ರಸ್ತಾವನೆಯನ್ನು ಕೈಬಿಡಲಾಗಿರುತ್ತದೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *15]. ವಿಷಯದ ಸಂಖ್ಯೆ :–ತೆಆಸ್ಥಾಸ/325/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)66/2011–12, ದಿನಾಂಕ : 10–10–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ನಗರದ ವಿವಿಧ ಸಂಘ ಸಂಸ್ಥೆಗಳಿಗೆ (ಗ್ರಾಂಟ್–ಇನ್–ಏಡ್) ಹಣವನ್ನು ಬಿಡುಗಡೆ ಮಾಡುವಾಗ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರದ ಸಂಖ್ಯೆ: ನಅಇ 108 ಎಂಎನ್‌ಯು 03 ದಿನಾಂಕ: 27.05.2003 ರ ಪತ್ರದಲ್ಲಿ ಪ್ರತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಅನುಮೋದನೆಯನ್ನು ಪಡೆದ ನಂತರವೇ ಪಾವತಿಸಲು ಹಾಗೂ ಪ್ರತಿ ವರ್ಷ ಒಂದೇ ಸಂಸ್ಥೆಗೆ ಈ ಅನುದಾನ ನೀಡದಂತೆ ಆದೇಶಿಸಿರುತ್ತದೆ. ಸರ್ಕಾರದ ಪತ್ರದ ಸಂಖ್ಯೆ ನಅಇ 108 ಎಂಎನ್‌ಯು 2003 ದಿನಾಂಕ 01.08.2003 ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ವಿವಿಧ ಸಂಘ–ಸಂಸ್ಥೆಗಳಿಗೆ ವಾರ್ಷಿಕ ಹಾಗೂ ಮಾಸಿಕ ಅನುದಾನ ನೀಡುವ ಬಗ್ಗೆ ಯಾವುದೇ ನಿರ್ದಿಷ್ಠವಾದ ಮಾರ್ಗಸೂಚಿಗಳನ್ನು ರಚಿಸಿರುವುದಿಲ್ಲವಾದ ಕಾರಣ ಸಂಘ–ಸಂಸ್ಥೆಗಳಿಗೆ ಸಹಾಯಾನುದಾನ ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದಂತೆ ಸೂಕ್ತ ಮಾರ್ಗಸೂಚಿಗಳನ್ನು ರಚಿಸಿಕೊಂಡು ವಿವಿಧ ಸಂಘ–ಸಂಸ್ಥೆಗಳಿಗೆ ಪಾಲಿಕೆಯ ಹಂತದಲ್ಲಿಯೇ ಈ ಬಾಬ್ತಿಗೆ ಅನುಮೋದಿತ ಆಯವ್ಯಯ ಮಿತಿಯಲ್ಲಿ ಅನುದಾನವನ್ನು ಮಂಜೂರು ಮಾಡಲು ಸೂಚನೆ ನೀಡಿರುತ್ತದೆ.

ಈ ಹಿನ್ನೆಲೆಯಲ್ಲಿ ನಗರದ ಯಾವುದೇ ಸಂಘ ಸಂಸ್ಥೆಗಳಿಗೆ ವಾರ್ಷಿಕ ಹಾಗೂ ಮಾಸಿಕ ಅನುದಾನವನ್ನು ಬಿಡುಗಡೆ ಮಾಡುವಾಗ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ತಯಾರಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ಮಂಡಿಸಲಾದ ಸಮಸಂಖ್ಯೆಯ ಟಿಪ್ಪಣಿ ದಿನಾಂಕ: 25.11.2003 ರಂತೆ ಟಿಪ್ಪಣಿಯನ್ನು ಮಂಡಿಸಿದ್ದು, ಸದರಿ ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಗಳಲ್ಲಿ "ಈಗಾಗಲೇ ಸಹಾಯ ಧನ ಕೋರಿರುವ ಸಂಘ ಸಂಸ್ಥೆಗಳಿಗೆ ಅನುದಾನವನ್ನು ನೀಡುವುದು ಹಾಗೂ ಟಿಪ್ಪಣಿಯಲ್ಲಿ ಮಂಡಿಸಿರುವ ಮಾರ್ಗಸೂಚಿಗಳನ್ನು 2004–05 ನೇ ಸಾಲಿನಿಂದ ಕಡ್ಡಾಯವಾಗಿ ಪಾಲಿಸುವುದು" ಎಂಬುದಾಗಿ ನಿರ್ಣಯವನ್ನು ಕೈಗೊಳ್ಳಲಾಗಿರುತ್ತದೆ.

ಅದರಂತೆ, ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ಏಸಿ(ಎ)ಪಿಆರ್ 1991/03–04 ದಿನಾಂಕ 18.03.2004 ರ ಆಯುಕ್ತರವರ ಕಛೇರಿ ಆದೇಶದಂತೆ ಸಂಘ ಸಂಸ್ಥೆಗಳಿಗೆ ಗ್ರಾಂಟ್–ಇನ್–ಏಡ್ ಹಣವನ್ನು ಬಿಡುಗಡೆ ಮಾಡಲು ನಗರ ಪಾಲಿಕೆಯಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ.

1. ಅನುದಾನಕ್ಕಾಗಿ ಅರ್ಜಿ ಸಲ್ಲಿಸುವ ಯಾವುದೇ ಒಂದು ಸಂಘ/ಸಂಸ್ಥೆಯು ನೊಂದಾಯಿತ ಸಂಸ್ಥೆಯಾಗಿರಬೇಕು ಹಾಗೂ ಸದರಿ ಸಾಲಿನ ಅಥವಾ ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿ ಸಲ್ಲಿಸಬೇಕು.
2. ಕನಿಷ್ಠಪಕ್ಷ ಹಿಂದಿನ ಮೂರು ವರ್ಷಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು/ಸಭೆ ಸಮಾರಂಭಗಳು/ಸಾರ್ವಜನಿಕ ಸೇವೆ ಇತ್ಯಾದಿ ನಡೆಸಿರುವ ಬಗ್ಗೆ ದಾಖಲೆ ಸಲ್ಲಿಸಬೇಕು.
3. ಸದರಿ ಸಂಸ್ಥೆಯ ಇರುವಿಕೆಯ ಬಗ್ಗೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿ ಅಥವಾ ಆರೋಗ್ಯ ವೈದ್ಯಾಧಿಕಾರಿಗಳ ವತಿಯಿಂದ ಸ್ಥಳೀಯ ಮಹಜರ್ ಮಾಡಿ ವರದಿಯನ್ನು ಸಲ್ಲಿಸತಕ್ಕದ್ದು.
4. ಸದರಿ ಸಂಸ್ಥೆಯು ಈಗಾಗಲೇ ಪಾಲಿಕೆಯ ವತಿಯಿಂದಾಗಲೀ ಅಥವಾ ಮಹಾಪೌರರ ನಿಧಿಯಿಂದಾಗಲೀ ಅನುದಾನ ಪಡೆದಿದ್ದ ಪಕ್ಷದಲ್ಲಿ ಯಾವ ಸಾಲಿನಲ್ಲಿ ಪಡೆದಿತ್ತೆಂಬ ಬಗ್ಗೆ ಮಾಹಿತಿ ಪಡೆಯತಕ್ಕದ್ದು.
5. ಸಂಘ ಸಂಸ್ಥೆಗಳು ಕೋರಿರುವಂತಹ ಕಾರ್ಯಕ್ರಮಗಳಿಗೆ ತಗುಲುವ ವೆಚ್ಚದ ಬಗ್ಗೆ ಅಂದಾಜು ಸಲ್ಲಿಸುವುದು.
6. ಸಂಸ್ಥೆಯು ಸಭೆ–ಸಮಾರಂಭವನ್ನು ಸೂಚಿತ ದಿನದಂದು ಏರ್ಪಡಿಸಿದ್ದ ಬಗ್ಗೆ ವರದಿ.
7. ಅನುದಾನವನ್ನು ಐದು ವರ್ಷಗಳಿಗೊಮ್ಮೆ ಒಂದು ಸಂಘ/ಸಂಸ್ಥೆಗೆ ಅನುದಾನ ನೀಡಲಾಗುವುದು.
8. ಅನುದಾನ ಕೋರುವ ಸಂಘ/ಸಂಸ್ಥೆಗಳ ಕಾರ್ಯಚಟುವಟಿಕೆಗಳು ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿರಬೇಕು. ಜಾತ್ಯಾತೀತವಾದ, ಧರ್ಮಾತೀತವಾದ ಹಾಗೂ ರಾಜಕೀಯೇತರ ಕಾರ್ಯಕ್ರಮ ವಾಗಿರಬೇಕು.
9. ಮೇಲಿನಂತೆ ಅರ್ಹತೆಗಳಿರುವ ಸಂಘ/ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ 5 ಸಾವಿರಗಳಿಂದ 10 ಸಾವಿರ ರೂ. ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ 10 ಸಾವಿರದಿಂದ 25 ಸಾವಿರ ರೂ. ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸಿದೆ.
10. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ/ಆಸ್ಪತ್ರೆಗಳಿಗೆ ಹಾಗೂ ಕ್ರೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ.
11. ಪಾಲಿಕೆಯಿಂದ ಅನುದಾನವನ್ನು ಪಡೆದ ಸಂಸ್ಥೆಯು ಸದರಿ ಅನುದಾನವನ್ನು ನಿಗಧಿತ ಉದ್ದೇಶಗಳಿಗೆ ಸಕ್ರಮವಾಗಿ ಬಳಸಿರುವ ಬಗ್ಗೆ ನಿರ್ದಿಷ್ಠ ನಮೂನೆಯಲ್ಲಿ ಲೆಕ್ಕ ಪತ್ರ ಹಾಗೂ ಪ್ರಮಾಣಪತ್ರಗಳನ್ನು ಒದಗಿಸಲು ಬದ್ದರಾಗಿರತಕ್ಕದ್ದು.
12. ಪಾಲಿಕೆಯಿಂದ ಅನುದಾನವನ್ನು ಒಂದು ವಿವೇಚನಾತ್ಮಕ ಸಹಾಯವಾಗಿದ್ದು, ಇದರಿಂದ ಯಾವುದೇ ಸಂಸ್ಥೆಯು ಅಂತಹ ಅನುದಾನ ಪಡೆಯುವ ಹಕ್ಕನ್ನು ಸೃಷ್ಠಿಸಿದಂತಾಗುವುದಿಲ್ಲ. ಯಾವುದೇ ಸಂದರ್ಭದಲ್ಲಿ ಪಾಲಿಕೆಯಿಂದ ನೀಡಲಾದ ಅನುದಾನವನ್ನು ತಡೆಹಿಡಿಯುವ ಅಥವಾ ನಿರ್ದಿಷ್ಠ ಉಪಯೋಗಗಳಿಗೆ ನೀಡಲಾದ ಅನುದಾನವನ್ನು ಸಕಾಲದಲ್ಲಿ ಕ್ರಮಬದ್ಧವಾಗಿ ಉಪಯೋಗಿಸದಿರುವ ಸಂದರ್ಭದಲ್ಲಿ ಅಂತಹ ಅನುದಾನವನ್ನು ಪಾಲಿಕೆಯು ಹಿಂದಕ್ಕೆ ಪಡೆಯಬಹುದಾಗಿರುತ್ತದೆ.
13. ಅನುದಾನ ಕೋರುವ ಸಂಘ/ಸಂಸ್ಥೆಯು ಏಕಮಾತ್ರ ಸದಸ್ಯರನ್ನೊಳಗೊಂಡ ಸಂಸ್ಥೆಯಾಗಿರಬಾರದು.
14. ಪಾಲಿಕೆಯಿಂದ ಅನುದಾನ ಬಿಡುಗಡೆ ಮಾಡುವ ಮುನ್ನ ಒಂದು ಸಮಿತಿಯನ್ನು ರಚಿಸಿ, ಸಮಿತಿಯ ನಿರ್ಣಯದಂತೆ ಬಿಡುಗಡೆ ಮಾಡಬಹುದಾಗಿದೆ.

ಮುಂದುವರೆದಂತೆ, 2010–11 ನೇ ಸಾಲಿನಲ್ಲಿ ಕೊಡುಗೆ ಮತ್ತು ಸಹಾಯಾನುಧಾನ ಲೆಕ್ಕ ಶೀರ್ಷಿಕೆಯಡಿ ಪಾಲಿಕೆ ಸಭೆಯ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಒಟ್ಟು 170 ಸಂಘ/ಸಂಸ್ಥೆಗಳು ಹಾಗೂ ವೈಯಕ್ತಿಕವಾಗಿ ಕ್ರೀಡಾಪಟುಗಳಿಗೆ ಸಹಾಯಧನ/ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ. **ಈ ಮಂಜೂರಾತಿಗಳು ಮೇಲ್ಕಂಡ ಮಾರ್ಗಸೂಚಿಗಳನ್ನು ಉಲ್ಲಂಘನೆ ಮಾಡಿದಂತಾಗುತ್ತದೆ.**

**2010–11ನೇ ಆರ್ಥಿಕ ವರ್ಷದಲ್ಲಿ ಸಹಾಯಧನ/ಅನುದಾನ ಪಡೆದುಕೊಂಡಂತಹ ಸಂಘ ಸಂಸ್ಥೆಗಳು ಮತ್ತು ಕ್ರೀಡಾಪಟುಗಳು ಅನುದಾನ/ಸಹಾಯಧನ ಕೋರಿ ಪ್ರಸಕ್ತ ಸಾಲಿನಲ್ಲಿಯೂ ಸಹ ಮನವಿಯನ್ನು ಸಲ್ಲಿಸಿರುತ್ತಾರೆ**

ಹಾಲಿ ಅಳವಡಿಸಿಕೊಂಡಿರುವ ಮಾರ್ಗಸೂಚಿಗಳಲ್ಲಿ ಕ್ರೀಡಾಪಟುಗಳು ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದಂತವರಿಗೆ ವ್ಯಕ್ತಿಗತವಾಗಿ ಅನುದಾನ/ಸಹಾಯಧನ ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಪ್ರಸಕ್ತ ಸಾಲಿನಲ್ಲಿಯೂ ಸಹ ಇದೇ ರೀತಿ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಗ್ರಾಂಟ್–ಇನ್–ಏಡ್ ಹಣವನ್ನು ಬಿಡುಗಡೆ ಮಾಡಿದಲ್ಲಿ, ಲೆಕ್ಕ ಪರಿಶೋಧನ ಕೈಗೊಂಡ ಸಂದರ್ಭದಲ್ಲಿ ಅಧಿಕಾರಿ ವರ್ಗದವರು ಸಮಸ್ಯೆಗೆ ಒಳಗಾಗುವುದರ ಜೊತೆಗೆ ಸಾರ್ವಜನಿಕ ಚರ್ಚೆಗೆ ಗ್ರಾಸ ಮಾಡಿ ಕೊಟ್ಟಂತಾಗುತ್ತದೆ.

ಆದ್ದರಿಂದ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಕಟ್ಟುನಿಟ್ಟಾಗಿ ಮಾರ್ಗಸೂಚಿಗಳ ಅನ್ವಯವೇ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ, ಅಥವಾ ಮೇಲ್ಕಂಡ ಹಿನ್ನೆಲೆಯಲ್ಲಿ ಸಂಘ–ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗತವಾಗಿ (ಕ್ರೀಡಾಪಟು, ನೃತ್ಯ ಕಲಾವಿದರು, ರಂಗಭೂಮಿ ಕಲಾವಿದರು, ವಿದ್ಯಾಭ್ಯಾಸ, ಇನ್ನಿತರೇ) ಗ್ರಾಂಟ್–ಇನ್–ಏಡ್ ಹಣವನ್ನು ಬಿಡುಗಡೆ ಮಾಡಲು ಮಾರ್ಗ ಸೂಚಿಗಳನ್ನು ಮಾರ್ಪಡಿಸಬೇಕಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಹಾಗೂ ಪಾಲಿಕೆ ಸಭೆಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *16]. ವಿಷಯದ ಸಂಖ್ಯೆ :–ತೆಆಸ್ಥಾಸ/331/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)60/2011–12, ದಿನಾಂಕ : 07–10–2011ರಲ್ಲಿ ವಿವರಿಸಿರುವಂತೆ, ಮಾನ್ಯ ಉಪಮಹಾಪೌರರು ಟಿಪ್ಪಣಿ ಬರೆದು ಶ್ರೀ ಆರ್. ಗೋಪಾಲ ಕೃಷ್ಣ, ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜು, ಬೆಂಗಳೂರು – 560 001. ಇವರು ನೀಡಿರುವ ಬೀದಿ ದೀಪದ ಬಗ್ಗೆ ಸಂಶೋಧನಾ ವರದಿ ಮತ್ತು ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ಸಂಶೋಧನೆಯನ್ನು ನಡೆಸುತ್ತಿದ್ದು, ಇದಕ್ಕೆ ಆರ್ಥಿಕ ಸಹಾಯವನ್ನು ಕೇಳಿರುತ್ತಾರೆಂದು ತಿಳಿಸುತ್ತಾ, ಇದನ್ನು ಮಹಾನಗರ ಪಾಲಿಕೆ ವತಿಯಿಂದ ನೀಡಲು ಸಾಧ್ಯವಿದ್ದಲ್ಲಿ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಶ್ರೀ ಆರ್. ಗೋಪಾಲ ಕೃಷ್ಣ, ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾರಾಣಿ ವಿಜ್ಞಾನ ಮಹಿಳಾ ಕಾಲೇಜು ರವರು ಉಪ ಮಹಾಪೌರರಿಗೆ ಮನವಿ ಸಲ್ಲಿಸಿ, ತಾನು 10 ವರ್ಷಗಳಿಂದ ಬೆಂಗಳೂರು ನಗರ ಪರಿಸರ ವಿಜ್ಞಾನದ ಅಧ್ಯಯನ ಮಾಡಿ ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದು ಈಗ ತನ್ನ ಮಾರ್ಗದರ್ಶನದಲ್ಲಿ ಶ್ರೀಮತಿ ಪೂರ್ಣಿಮ ಡಿ.ಎಸ್. ಹಾಗೂ ಶ್ರೀಮತಿ ಬಿ. ನೇತ್ರಾವತಿ ಇವರುಗಳು ಬೆಂಗಳೂರು ನಗರದ ಸೌರಶಕ್ತಿ ಬೀದಿ ದೀಪಗಳ ಕುರಿತು ಅಧ್ಯಯನ ಸಂಶೋಧನೆ ಮಾಡುತ್ತಿದ್ದು, ರಾಯಲಸೀಮಾ ವಿಶ್ವವಿದ್ಯಾನಿಲಯದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಸೌರಶಕ್ತಿ ಬೀದಿ ದೀಪಗಳ ಬಗ್ಗೆ ಪಿ.ಹೆಚ್.ಡಿ. ಪದವಿಗೆ ನೊಂದಾಯಿಸಿದ್ದು ಎರಡು ವರ್ಷಗಳಿಂದ ಇದರ ಬಗ್ಗೆ ಸಂಶೋಧನೆ ನಡೆಸುತ್ತಿದ್ದಾರೆಂದು ತಿಳಿಸಿರುತ್ತಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸೌರಶಕ್ತಿ ಬೀದಿ ದೀಪಗಳ ಕುರಿತು ಸಂಶೋಧನ ಅಧ್ಯಯನ ನಡೆಸಲು ರೂ. 5.00 (ಐದು ಲಕ್ಷ ರೂಪಾಯಿಗಳು) ಅನುದಾನವನ್ನು ಮಂಜೂರು ಮಾಡಬೇಕಾಗಿ ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ, ಅಧ್ಯಯನ ಪೀಠಗಳಿಗೆ ಅನುದಾನ ನೀಡಲು ನಿರ್ದೇಶನವಿರುತ್ತದೆ. **ಸಂಶೋಧನ ಅಧ್ಯಯನಕ್ಕೆ ಅನುದಾನ ನೀಡುವ ಕುರಿತು ಯಾವುದೇ ನಿರ್ದೇಶನವಿರುವುದಿಲ್ಲ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *17]. ವಿಷಯದ ಸಂಖ್ಯೆ :–ತೆಆಸ್ಥಾಸ/334/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)84/2011–12, ದಿನಾಂಕ : 13–10–2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಶ್ರೀ ಚಂದ್ರ, ಸದಸ್ಯರು ವಾರ್ಡ್ ಸಂಖ್ಯೆ 62, ರಾಮಸ್ವಾಮಿಪಾಳ್ಯ, ಹಾಗೂ ಶ್ರೀ ಬಾಬು, ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಷನ್ ದಂಡು ಪ್ರದೇಶ ರವರುಗಳ ಪತ್ರಗಳನ್ನು ಇದರೊಂದಿಗೆ ಲಗತ್ತಿಸುತ್ತಾ, ಮುನಿರೆಡ್ಡಿ ಪಾಳ್ಯದ ಪೌರಕಾರ್ಮಿಕರು ವಾಸವಾಗಿರುವ ಪ್ರದೇಶದಲ್ಲಿ ಗಂಗಮ್ಮ ದೇವಸ್ಥಾನವಿದ್ದು, ದೇವಸ್ಥಾನದ ವತಿಯಿಂದ ಸುಮಾರು 30 ವರ್ಷಗಳಿಂದ ದಸರಾ ಮಹೋತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಪ್ರತಿ ವರ್ಷದಂತೆ ಈ ವರ್ಷವು ದಸರಾ ಮಹೋತ್ಸವವನ್ನು ಆಚರಿಸಲಾಗಿದ್ದು, ಈ ಕಾರ್ಯಕ್ರಮಕ್ಕೆ ಸುಮಾರು 10.00 ಲಕ್ಷಗಳವರೆಗೆ

ವೆಚ್ಚವಾಗಲಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ. 6.00 ಲಕ್ಷಗಳ ಅನುದಾನವನ್ನು ಒದಗಿಸುವಂತೆ ಕೋರಿರುತ್ತಾರೆ. ಈ ಸಂಬಂಧ ರೂ. 4.00 ಲಕ್ಷಗಳ ಅನುದಾನವನ್ನು ಮೇಲಿನ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಅದರಂತೆ ಪರಿಶೀಲಿಸಲಾಗಿ, ಪೂಜ್ಯ ಮಹಾಪೌರರ ಟಿಪ್ಪಣಿಯೊಂದಿಗೆ ಮಾನ್ಯ ನಗರ ಪಾಲಿಕೆ ಸದಸ್ಯರ ಪತ್ರ ಹಾಗೂ ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಶನ್ ದಂಡು ಪ್ರದೇಶ ರವರ ಪತ್ರಗಳು ಮತ್ತು ಕಾರ್ಯಕ್ರಮಗಳ ವಿವರಗಳ ಪಟ್ಟಿ ಮಾತ್ರ ಲಗತ್ತಾಗಿರುತ್ತದೆ.

ಕಳೆದ ಸಾಲಿನ ದಸರಾ ಮಹೋತ್ಸವ ಕಾರ್ಯಕ್ರಮಕ್ಕೆ ಪಾಲಿಕೆ ವತಿಯಿಂದ ಸದರಿ ಪಾಲಿಕೆ ಸದಸ್ಯರ ಹೆಸರಿಗೆ (2010–11 ನೇ ಸಾಲಿಗೆ) **ರೂ. 2.00 ಲಕ್ಷಗಳ** ಅನುದಾನ/ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಧನ ಸಹಾಯಾನುಧಾನ/ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ. ಪ್ರಸಕ್ತ 2011–12ನೇ ಸಾಲಿನ ಆಯವ್ಯಯವು ಮಂಡನೆಯಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆ ಆಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *18]. ವಿಷಯದ ಸಂಖ್ಯೆ :–ತೆಆಸ್ಥಾಸ/336/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)80/2011–12, ದಿನಾಂಕ : 07–10–2011ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ನರಸಿಂಹ, ಸಂಸ್ಥಾಪಕ ಗೌರವ ಕಾರ್ಯದರ್ಶಿ, ಉದಯಭಾನು ಕಲಾ ಸಂಘ (ನೊಂ.), ಗವಿಪುರ ಸಾಲು ಛತ್ರಗಳ ಎದುರು, ರಾಮಕೃಷ್ಣ ಮಠ ಬಡಾವಣೆ, ಕೆಂಪೇಗೌಡನಗರ, ಬೆಂಗಳೂರು–560 019. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಘವು ಸ್ಥಾಪಿತವಾಗಿ ಸುಮಾರು ಐದು ದಶಕಗಳಗಿದ್ದು, ಈ ಸುದೀರ್ಘ ಅವಧಿಯಲ್ಲಿ ಸಂಘವು ನಾಡು–ನುಡಿ, ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಸಮಾಜದ ಎಲ್ಲಾ ವರ್ಗಗಳ ಸಾರ್ವಜನಿಕರಿಗೆ ಉಪಯುಕ್ತವಾಗುವಂತಹ ಅನೇಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ. ಈ ಕಾರ್ಯಕ್ರಮಗಳಿಗೆ ಮಹಾನಗರ ಪಾಲಿಕೆ, ಸರ್ಕಾರ, ಸಾರ್ವಜನಿಕರ, ಸಂಘ ಸಂಸ್ಥೆಗಳ ಪ್ರೋತ್ಸಾಹ, ಉತ್ತೇಜನಗಳು ಸಿಕ್ಕಿವೆ ಮತ್ತು ಅವರ ಮನ್ನಣೆಯನ್ನೂ ಪಡೆದಿದೆರುವುದಾಗಿ ತಿಳಿಸಿರುತ್ತಾರೆ. **ಪಾಲಿಕೆಯಿಂದ 1975 ರಲ್ಲಿ ರೂ. 500/– ಗಳು, 1991 ರಿಂದ 15,000/– 1995–96 ರಿಂದ 25,000/– ಗಳು 2002–03 ರಿಂದ ರೂ. 1.00 ಲಕ್ಷ 2004–05 ರಿಂದ 2.00 ಲಕ್ಷ ಹಾಗೂ 2010–11ನೇ ಸಾಲಿನಲ್ಲಿ ರೂ. 5.00 ಲಕ್ಷಗಳ ವಾರ್ಷಿಕ ಅನುದಾನವನ್ನು ಮಂಜೂರು ಮಾಡಿರುವುದಾಗಿ ತಿಳಿಸಿರುತ್ತಾರೆ.**

ತಮ್ಮ ಸಂಘವು ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960 ರಡಿಯಲ್ಲಿ ನೋಂದಣಿಯಾಗಿದ್ದು, ನಿರಂತರವಾಗಿ ಕಳೆದ ಐದು ದಶಕಗಳಿಗೂ ಹೆಚ್ಚು ಕಾಲದಿಂದ ಜನೋಪಕಾರಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, ಸುವರ್ಣ ಮಹೋತ್ಸವದೆಡೆಗೆ ಭದ್ರ ಹೆಜ್ಜೆಯನ್ನಿಡುತ್ತಿದೆಯೆಂದು ತಿಳಿಸಿ, ಸಂಘವು ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ – ನಗರ ಕಲ್ಯಾಣ, ಶಿಕ್ಷಣ, ವೈದ್ಯಕೀಯ ಹಾಗೂ ಕ್ರೀಡಾ ಯುವಜನ ಕಲ್ಯಾಣ ಮುಂತಾದ ಕ್ಷೇತ್ರಗಳಲ್ಲಿ ಅಬ್ಬರ ಆಡಂಬರಗಳಿಲ್ಲದೆ ಸಕಾಲಿಕವೂ ಸಾಮಾಜಿಕ ಸ್ವಾಸ್ಥ್ಯಕ್ಕೆ ಪೂರಕವೂ ಆದ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವುದಾಗಿ ತಿಳಿಸಿ, ತಮ್ಮ ಸಂಘದ ಕಾರ್ಯ ಚಟುವಟಿಕೆಗಳಾದ ಕಾರ್ಯಸಾಧನೆ, ಸಂಘಟನೆಯೇ ಶಕ್ತಿ, ಹಾಗೂ ನಗರ ಪಾಲಿಕೆಯ ಪೌರಸೇವಾ ಕಾರ್ಯಕ್ರಮಗಳಿಗೆ ಪೂರಕ ಚಟುವಟಿಕೆಗಳಾದ : ನಗರ ಪಾಲಿಕೆಯ ಆಟದ ಮೈದಾನ ರಕ್ಷಣೆ – ಅಭಿವೃದ್ಧಿ, ಪೌರಸೌಲಭ್ಯಗಳ ಅಭಿವೃದ್ಧಿ, ಬೆಂಗಳೂರು ದರ್ಶನ, ಕರ್ನಾಟಕ ಇತಿಹಾಸದಲ್ಲಿ ಮಹತ್ವಪೂರ್ಣ ಕೃತಿ, ಉಚಿತ ವೈದ್ಯಕೀಯ ಸೌಲಭ್ಯ, ಆರೋಗ್ಯ ಪಾಲನೆಗೆ ದತ್ತಿನಿಧಿ ಸ್ಥಾಪನೆ, ಹಿಂದುಳಿದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಗ್ರಾಮಾಂತರ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ,

ಅರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವು/ಪ್ರತಿಭಾ ಪುರಸ್ಕಾರ, ಪುಸ್ತಕ ದಾನ, ಸಾಕ್ಷರತಾ ಪ್ರಚಾರ, ಸಾರ್ವಜನಿಕ ವಾಚನಾಲಯ – ಪುಸ್ತಕ ಭಂಡಾರಗಳು, ವಿದ್ಯಾರ್ಥಿ ಆಕರ ಗ್ರಂಥಾಲಯ, ಹಾಗೂ ಗ್ರಂಥ ಪ್ರಕಟಣೆ ಬೆಂಗಳೂರು ದರ್ಶನ (1975, 2005), ಕೆಂಪೇಗೌಡನಗರ ದರ್ಶನ, ಆಸ್ವಾದ ಅಭಿನಂದನ ಗ್ರಂಥ, ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ಸಾಂಸ್ಕೃತಿಕ ನಾಟಕ ಕಾರ್ಯಕ್ರಮಗಳನ್ನು ಹಾಗೂ 2010–11ನೇ ಸಾಲಿನಲ್ಲಿ "ಉದಯಭಾನು ಉನ್ನತ ಅಧ್ಯಯನ ಕೇಂದ್ರ" ವನ್ನು ರಚಿಸಿ ಹಿರಿಯರ ಮಾರ್ಗದರ್ಶನದಲ್ಲಿ ಯೋಜಿತ ಕಾರ್ಯಕ್ರಮಗಳನ್ನು ಕೈಗೊಳ್ಳಲು ಕಾರ್ಯೋನ್ಮುಖವಾಗಿದೆ ಅದಕ್ಕಾಗಿ ಸಹಾಯ ಮತ್ತು ಸಹಕಾರ ಕೋರಿ ಪಾಲಿಕೆ ವತಿಯಿಂದ 2011–12ನೆಯ ಸಾಲಿನಿಂದ ನಗರ ಪಾಲಿಕೆಯ ಆಯವ್ಯಯ ಪಟ್ಟಿಯಲ್ಲಿ ವಾರ್ಷಿಕ ಅನುದಾನ ರೂ. 25.00 ಲಕ್ಷಗಳನ್ನೊದಗಿಸಿ ಬಿಡುಗಡೆ ಮಾಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ಸಂಸ್ಥೆಗೆ **2010–11** ನೇ ಸಾಲಿಗೆ **ರೂ. 5.00 ಲಕ್ಷಗಳ** ಅನುದಾನ/ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ. ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಧನ ಸಹಾಯಾನುಧಾನ/ ಅನುದಾನ ಮಂಜೂರು ಮಾಡುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:–** **ದಿನಾಂಕ : 07–10–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಘಕ್ಕೆ 2011–12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ರೂ.5.00 (ಐದು) ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *19]. ವಿಷಯದ ಸಂಖ್ಯೆ :–ತೆಆಸ್ಥಾಸ/337/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)56/2011–12, ದಿನಾಂಕ : 07–10–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಯಮುನಾ ಗೋಪಿನಾಥ್, ಗೌರವ ಕಾರ್ಯದರ್ಶಿ, ಕಿಂಕಿಣಿ, 308, 10ನೇ ಮುಖ್ಯರಸ್ತೆ, 3ನೇ ಬ್ಲಾಕ್, ಜಯನಗರ, ಬೆಂಗಳೂರು – 560 011. ರವರು ಮನವಿ ಸಲ್ಲಿಸಿ, ತಮ್ಮ ಸಂಸ್ಥೆ ನಡೆಸುವ ರಾಷ್ಟ್ರ ಮಟ್ಟದ ವಾರ್ಷಿಕ ನೃತ್ಯೋತ್ಸವ ರಾಜ್ಯದ/ರಾಷ್ಟ್ರದ ಪ್ರತಿಷ್ಠಿತ ಸಾಂಸ್ಕೃತಿ ಘಟನೆಗಳಲ್ಲೊಂದಾಗಿದ್ದು, ಈ ನಿಟ್ಟಿನಲ್ಲಿ ರಾಷ್ಟ್ರ ಮಟ್ಟದ 28ನೇ ಕಿಂಕಿಣಿ ನೃತ್ಯೋತ್ಸವವನ್ನು ಜನವರಿ 2012 ರಲ್ಲಿ ಆಯೋಜಿಸಲಾಗಿದ್ದು, ಬೆಂಗಳೂರು ಮಹಾನಗರದಲ್ಲಿ ನಡೆಸುತ್ತಾ ಬಂದಿರುವ ಈ ವಾರ್ಷಿಕ ನೃತ್ಯೋತ್ಸವಕ್ಕೆ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ವಾರ್ಷಿಕವಾಗಿ ಹಲವಾರು ವರ್ಷಗಳಿಂದ ಅನುದಾನ ನೀಡುತ್ತಾ ಬಂದಿದ್ದು, ಈ ಉತ್ಸವ ಸತತವಾಗಿ 28 ವರ್ಷಗಳಿಂದ ನಡೆಸುತ್ತಾ ಬಂದಿರುವುದಾಗಿ ತಿಳಿಸಿರುತ್ತಾರೆ. 28ನೆಯ ಕಿಂಕಿಣಿ ನೃತ್ಯೋತ್ಸವನ್ನು 2012 ರ ಜನವರಿ ತಿಂಗಳಿನಲ್ಲಿ 14 ಕಾರ್ಯಕ್ರಮಗಳನ್ನೊಳಗೊಂಡ 7 ದಿನಗಳ ಕಾರ್ಯಕ್ರಮವನ್ನು ನಡೆಸಲಾಗುತ್ತಿದ್ದು, ಈ ಉತ್ಸವದ ಅಂದಾಜು ವೆಚ್ಚ ಸುಮಾರು ರೂ. 9.00 ಲಕ್ಷಕ್ಕಿಂತ ಅಧಿಕವಾಗಿರುವುದಾಗಿ ತಿಳಿಸಿ ಪಾಲಿಕೆ ಕಳೆದ ವರ್ಷದ 27ನೇ ಕಿಂಕಿಣಿ ನೃತ್ಯೋತ್ಸವಕ್ಕೆ ರೂ. 20,000/– ಅನುದಾನ ನೀಡಿದ್ದು, ಉತ್ಸವವನ್ನು ವಿಜೃಂಭಣೆಯಿಂದ ನಡೆಸಲು ಅನುವಾಗಿರುವುದಾಗಿ ತಿಳಿಸಿ, ವರ್ಷೇ ವರ್ಷೇ ಹೆಚ್ಚಾಗಿರುವ ವೆಚ್ಚ ಗಮನಿಸಿ ಜನವರಿ 2012 ರಲ್ಲಿ ಬೆಂಗಳೂರು ನಗರದಲ್ಲಿ ನಡೆಸುವ 28ನೇ ಕಿಂಕಿಣಿ ನೃತ್ಯೋತ್ಸವಕ್ಕೆ ರೂ. 50,000/– ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸದರಿ ಸಂಸ್ಥೆಗೆ **2010–11** ನೇ ಸಾಲಿಗೆ **ರೂ. 20,000/– ಗಳ** ಅನುದಾನ / ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ. ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ನೀಡುವ ನಿರ್ದೇಶನಗಳಿರುತ್ತವೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಅಇ:354:ಎಂಎನ್‌ವೈ:96 ದಿನಾಂಕ 14–10–1996 ರಲ್ಲಿ ಸದರಿ ಸಂಸ್ಥೆಗೆ ಪಾಲಿಕೆ ವತಿಯಿಂದ ವಾರ್ಷಿಕ ರೂ. 10,000/– ಗಳ ವಾರ್ಷಿಕ ಅನುದಾನ ಮಂಜೂರು ಮಾಡಲು ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**–ಮುಂದೂಡಿದೆ–**

## *20]. ವಿಷಯದ ಸಂಖ್ಯೆ :–ತೆಆಸ್ಥಾಸ/338/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಆವ್ಯೆ(ತಾಮಕುಕ)05/2011–12, ದಿನಾಂಕ : 26–08–2011ರಲ್ಲಿ ವಿವರಿಸಿರುವಂತೆ, ಶ್ರೀ.ಕೃಷ್ಣ ಸೇವಾಶ್ರಮ ಆಸ್ಪತ್ರೆ, ನಂ.523, 10ನೇ ಮುಖ್ಯ ರಸ್ತೆ, 45ನೇ ಕ್ರಾಸ್, 5ನೇ ಬ್ಲಾಕ್, ಜಯನಗರ, ಬೆಂಗಳೂರು–41 ರವರು ಪೂಜ್ಯ ಮಹಾಪೌರರಿಗೆ ಪತ್ರವನ್ನು ಸಲ್ಲಿಸಿದ್ದು, ಈ ಆಸ್ಪತ್ರೆಯು ಎಲ್ಲಾ ಬಡಜನರಿಗೆ ಕಡಿಮೆ ದರದಲ್ಲಿ ಉಚಿತವಾಗಿ ಚಿಕಿತ್ಸೆಯನ್ನು ಒದಗಿಸುತ್ತಿದೆ ಎಂದು, ಈ ಆಸ್ಪತ್ರೆಯು ನುರಿತ ತಜ್ಞರನ್ನು ಒಳಗೊಂಡಿರುತ್ತದೆಂದು, ಈಗಾಗಲೇ ಸಾರ್ವಜನಿಕರಿಗೆ ಉಚಿತವಾಗಿ ಆರೋಗ್ಯ ಶಿಬಿರಗಳನ್ನು ನಡೆಸಿರುತ್ತದೆಂದು ತಿಳಿಸಿದ್ದು, ಹಾಗೂ ಪಾಲಿಕೆಯ ಜೆ.ಪಿ. ನಗರ ಆರೋಗ್ಯ ಕೇಂದ್ರವನ್ನು ನಡೆಸಲು ಮುಂದೆ ಬಂದಿರುತ್ತಾರೆ. ಈ ಕಟ್ಟಡವನ್ನು ಈ ಸೇವಾಶ್ರಮಕ್ಕೆ ನೀಡಿದಲ್ಲಿ ಬಡವರಿಗೆ ತಜ್ಞರ ಸೇವೆಯನ್ನು ನೀಡಲು ಮತ್ತು ಕುಟುಂಬ ತಜ್ಞರ ಸೇವೆಯನ್ನು ಈ ಕೆಳಕಂಡಂತೆ ಒದಗಿಸಲಾಗುವುದೆಂದು ಒಪ್ಪಿರುತ್ತಾರೆ.

- ಇವರು ಭಾನುವಾರ ಮತ್ತು ಸಾರ್ವಜನಿಕರ ರಜಾ ದಿನಗಳ ಹೊರತಾಗಿ ಉಳಿದೆಲ್ಲಾ ದಿನಗಳು ಎರಡನೇ ಶನಿವಾರ ಸೇರಿದಂತೆ, ವೈದ್ಯಕೀಯ ಸೇವೆಗಳನ್ನು ಬೆಳಿಗ್ಗೆ: 09–30 ರಿಂದ ಮಧ್ಯಾಹ್ನ: 01–30 ರ ತನಕ ಚಿಕಿತ್ಸಾ ಸೇವೆ ನೀಡಲು ಒಪ್ಪಿರುತ್ತಾರೆ.
- ಪ್ರತಿ ಕರ್ತವ್ಯ ನಿರತ ದಿನವು ಒಬ್ಬರು ವೈದ್ಯರು ಇರುತ್ತಾರೆಂದು, ಹಾಗೂ ಉಳಿದ ದಿನಗಳಲ್ಲಿ ತಜ್ಞ ವೈದ್ಯರುಗಳು–ವಾರದ ಒಂದು ದಿನ ಒಬ್ಬಬ್ಬರು ಕರ್ತವ್ಯ ನಿರ್ವಹಿಸುತ್ತಾರೆಂದು ತಿಳಿಸಿದ್ದು, ಫಿಜಿಷಿಯನ್, ಪ್ರಸೂತಿ ತಜ್ಞರು, ಮಕ್ಕಳ ತಜ್ಞರು, ಚರ್ಮರೋಗ ತಜ್ಞರು ಹಾಗೂ ದಂತ ವೈದ್ಯರುಗಳನ್ನು ಒದಗಿಸಲಾಗುವುದೆಂದು ತಿಳಿಸಿರುತ್ತಾರೆ.
- ತಜ್ಞ ವೈದ್ಯರನ್ನು ಮತ್ತು ಇನ್ನಿತರೆ ಅಧೀನ ಸಿಬ್ಬಂದಿಯನ್ನು ಶ್ರೀ.ಕೃಷ್ಣ ಸೇವಾಶ್ರಮ ರವರು ನೀಡಲು ಒಪ್ಪಿರುತ್ತಾರೆ.
- ದಂತ ವೈದ್ಯರಿಗೆ ಅಗತ್ಯವಿರುವ ಉಪಕರಣಗಳು ಹಾಗೂ ಸಲಕರಣೆಗಳನ್ನು ಒದಗಿಸಲಾಗುವುದೆಂದು ತಿಳಿಸಿರುತ್ತಾರೆ.
- ವಾರದಲ್ಲಿ ಮೂರು ದಿನಗಳು ಪ್ರಯೋಗ ಶಾಲಾ ತಂತ್ರಜ್ಞರು ರ ಸೇವೆಯನ್ನು ನೀಡಲಾಗುವುದೆಂದು ತಿಳಿಸಿರುತ್ತಾರೆ.
- ಪ್ರಯೋಗ ಶಾಲೆ ಸಂಬಂದಿತ ಪರೀಕ್ಷೆಗಳಿಗೆ ರೂ.10/– ರೂ.20/– ರಷ್ಟು ಸೇವಾ ಶುಲ್ಕವನ್ನು ಬಿ.ಬಿ.ಎಂ.ಪಿ. ಯು ತೆಗೆದುಕೊಳ್ಳಬಹುದೆಂದು ತಿಳಿಸಿರುತ್ತಾರೆ. (ಈಗಾಗಲೇ ಪಾಲಿಕೆಯು ಹೊರ ರೋಗಿಗಳಿಂದ ಸೇವಾ ಶುಲ್ಕವೆಂದು ರೂ.5/– ಗಳನ್ನು ಸಂಗ್ರಹಿಸುತ್ತಿದೆ).

**<u>ಬೃಬೆಂ.ಮ. ಪಾಲಿಕೆಯಿಂದ ಒದಗಿಸಬೇಕಾಗಿರುವುದು:</u>**

- ಸದರಿ ಸೇವಾಶ್ರಮದವರು ಬಿ.ಬಿ.ಎಂ.ಪಿ. ಯು ನಿಯಮದಂತೆ ಯಾವುದೇ ಔಷಧಿಗಾಗಿ ಹೊರಗಡೆಗಾಗಿ ಚೀಟಿ ಬರೆದುಕೊಡಬಾರದು.
- ಔಷಧಿಗಳು ಲಭ್ಯತೆಗೆ ಅನುಗುಣವಾಗಿ ಆರೋಗ್ಯ ಕೇಂದ್ರದ ವತಿಯಿಂದ ನಿಯೋಜಿತ ವೈದ್ಯರಿಗೆ ನೀಡಲಾಗುವುದು, ಇತರೆ ಔಷಧಿಗಳು ಬೇಕಾದಲ್ಲಿ ಆಡಳಿತ ವೈದ್ಯಾಧಿಕಾರಿಗಳಿಗೆ ಅರ್ಜಿಯನ್ನು ಕೊಟ್ಟು ಬೇಕಾದ ಔಷಧಿಗಳನ್ನು ಯೂಸರ್ ಫೀ–ಸೇವಾ ಶುಲ್ಕ ದಿಂದ ತೆಗೆದುಕೊಳ್ಳಲು ಅನುಮತಿಯಿರುತ್ತದೆ.
- ಯಾವುದೇ ರೋಗಿಯು ಬೇರೆ ಆಸ್ಪತ್ರೆಗಳಿಗೆ ಹೆರಿಗೆ ಅಥವಾ ಇನ್ನಿತರೆ ಸೌಲಭ್ಯಗಳಿಗೆ ಹತ್ತಿರದಲ್ಲಿರುವ ಬಿ.ಬಿ.ಎಂ.ಪಿ. ಆಸ್ಪತ್ರೆಗೆ ಕಳುಹಿಸುವುದು.
- ರೋಗಿಯು ಶ್ರೀ.ಕೃಷ್ಣ ಸೇವಾಶ್ರಮದ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಳ್ಳಲು ಒಪ್ಪಿದಲ್ಲಿ ಲಿಖಿತವಾಗಿ ಬರೆಯಿಸಿಕೊಂಡು ಆ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಳ್ಳಬಹುದು. ಇದರಿಂದ ಬಿ.ಬಿ.ಎಂ.ಪಿ. ಹೆಸರಿಗೆ ಯಾವುದೇ ಚ್ಯುತಿ ಬರದಂತೆ ನೋಡಿಕೊಳ್ಳುವುದು.

- ಆಸ್ಪತ್ರೆಯ ಆಡಳಿತಕ್ಕೆ ಸಂಬಂಧಿಸಿದಂತೆ ನೀರು, ವಿದ್ಯುಚ್ಛಕ್ತಿ ಹಾಗೂ ಇನ್ನಿತರೆ ಆಡಳಿತಾತ್ಮಕ ಖರ್ಚನ್ನು ಬಿ.ಬಿ.ಎಂ.ಪಿ. ಭರಿಸಬೇಕಾಗಿರುತ್ತದೆ.
- ಗ್ರೂಪ್ "ಡಿ" ನೌಕರರನ್ನು ಪಾಲಿಕೆಯ ಆರೋಗ್ಯ ಕೇಂದ್ರಗಳಿಂದ ಒದಗಿಸಬೇಕಾಗಿರುತ್ತದೆ.

ಶ್ರೀ.ಕೃಷ್ಣಸೇವಾ ಆಶ್ರಮ ಆಸ್ಪತ್ರೆ ರವರಿಗೆ ಪಾಲಿಕೆಯ ಜೆ.ಪಿ. ನಗರ ಆರೋಗ್ಯ ಕೇಂದ್ರವನ್ನು ವಹಿಸಲು ಪಾಲಿಕೆಯ ಯೋಜನಾ ಸಮನ್ವಯಾಧಿಕಾರಿಗಳು ಮತ್ತು ಮುಖ್ಯ ಆರೋಗ್ಯಾಧಿಕಾರಿಗಳು ಒಪ್ಪಿರುತ್ತಾರೆ, ಮತ್ತು ಇವರೊಂದಿಗೆ ಮೇಲ್ಕಂಡ ಅಂಶಗಳ ಕುರಿತು ಒಡಂಬಡಿಕೆ ಮಾಡಿಕೊಳ್ಳಬಹುದೆಂದು ತಿಳಿಸಿರುತ್ತಾರೆ. ಸಮರ್ಪಕವಾಗಿ ಸಾರ್ವಜನಿಕರಿಗೆ ಚಿಕಿತ್ಸಾ ಸೌಲಭ್ಯವನ್ನು ಒದಗಿಸದಿದ್ದಲ್ಲಿ ಒಡಂಬಡಿಕೆಯನ್ನು ರದ್ದುಗೊಳಿಸಬಹುದಾಗಿದ್ದು, ಸೂಕ್ತ ನಿರ್ಣಯಕ್ಕಾಗಿ ಕೋರಿ ಮೇರೆಗೆ, ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಸೇವೆಯನ್ನು ಮೇಲುಸ್ತುವಾರಿ ವಹಿಸಲು ಒಂದು ಸ್ಥಳೀಯ ವೈದ್ಯಾಧಿಕಾರಿಗಳ ಸಮಿತಿ ರಚಿಸಿ ಕಾಲಕಾಲಕ್ಕೆ ತೃಪ್ತಿಕರ ನೀಡುವುದನ್ನು ಧೃಢೀಕರಿಸಿಕೊಳ್ಳುವುದು ಹಾಗೂ ಈ ಒಡಂಬಡಿಕೆಯನ್ನು 02 (ಎರಡು) ವರ್ಷಗಳ ಅವಧಿಗೆ ನೀಡುವಂತೆ ಮತ್ತು ಉಭಯ ಪಾರ್ಟಿಗಳ ಒಡಂಬಡಿಕೆ ಕರಾರಿನಂತೆ ತೃಪ್ತಿಕರವಾದ ಕೆಲಸ ನಿರ್ವಹಣೆ ಆಗದಿದ್ದಲ್ಲಿ ಒಂದು ತಿಂಗಳ ಮುಂಗಡ ನೋಟಿಸು ನೀಡಿ ಒಡಂಬಡಿಕೆಯನ್ನು ರದ್ದು ಪಡಿಸುವ ಅಧಿಕಾರವನ್ನು ಬಿ.ಬಿ.ಎಂ.ಪಿ.ಗೆ ಕಾಯ್ದಿರಿಸಿಕೊಳ್ಳುವ ಷರತ್ತಿಗೊಳಪಟ್ಟು ಟಿಪ್ಪಣಿಯನ್ನು ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ : 05–09–2011ರ ನಿರ್ಣಯ.

**ನಿರ್ಣಯ: ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ : 05–09–2011ರ ನಿರ್ಣಯವನ್ನು ಒಪ್ಪಿದೆ.**

## *21]. ವಿಷಯದ ಸಂಖ್ಯೆ :–ತೆಆಸ್ಥಾಸ/339/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 19–10–2011ರಲ್ಲಿ ವಿವರಿಸಿರುವಂತೆ, ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಂಡು ಜಾಬ್ ಸಂಖ್ಯೆ ನೀಡಲು ಕಡತಗಳನ್ನು ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಗೆ ಸಲ್ಲಿಸಲಾಗಿದೆ.

ಸದರಿ ಕಡತಗಳನ್ನು ಅನುಬಂಧ–1 (ಮೊತ್ತ ರೂ.509.50 ಲಕ್ಷಗಳು) ಮತ್ತು ಅನುಬಂಧ–2ರ (ಮೊತ್ತ ರೂ.13796.00 ಲಕ್ಷಗಳು) ಒಟ್ಟಾರೆ ರೂ.14286.00 ಲಕ್ಷಗಳ ವಿವಿಧ ಕಾಮಗಾರಿಗಳ ಪ್ರಸ್ತಾವನೆ ಪಟ್ಟಿ ತಯಾರಿಸಿದ್ದು, ಸದರಿ ಪ್ರಸ್ತಾವನೆಗಳು ಮಾನ್ಯ ಆಯುಕ್ತರವರ ಹಾಗೂ ಸಂಬಂಧಪಟ್ಟ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಮಂಡಿಸಲಾಗಿರುತ್ತದೆ. ಸದರಿ ಕಾಮಗಾರಿಗಳು 2011–12ನೇ ಸಾಲಿನ ಆಯವ್ಯಯದಲ್ಲಿ ಸೇರಿರುವುದಿಲ್ಲ. ಈ ಅಂಶಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ

**ನಿರ್ಣಯ:– ಆಯುಕ್ತರ ದಿನಾಂಕ : 19–10–2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳು ಸಮಿತಿಗೆ ಮಂಡಿಸಿರುವ 2011–12ನೇ ಸಾಲಿನ ಆಯವ್ಯಯದ ಕರಡಿನಲ್ಲಿ ಪ್ರಸ್ತಾಪಿಸದೇ ಇರುವುದರಿಂದ ಈಗ ಈ ಕಾಮಗಾರಿಗಳನ್ನು ಕೈಗೊಳ್ಳಲು ಯಾವ ಲೆಕ್ಕಶೀರ್ಷಿಕೆ ಅಡಿಯಲ್ಲಿ ಅನುದಾನನ್ನು ಒದಗಿಸಿಕೊಳ್ಳಲಾಗುವುದೆಂಬ ಮಾಹಿತಿಯೊಂದಿಗೆ ಸಮಿತಿಯ ಮುಂದೆ ಕಡತವನ್ನು ಪುನರ್ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *22]. ವಿಷಯದ ಸಂಖ್ಯೆ :–ತೆಆಸ್ಥಾಸ/341/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ/ಆ)ಪಿಎಸ್ಆರ್(4)50/2011–12, ದಿನಾಂಕ : 20–10–2011ರಲ್ಲಿ ವಿವರಿಸಿರುವಂತೆ, ಶ್ರೀ ಎಸ್. ಹರೀಶ್. ಬಿ.ಇ. ಮಾನ್ಯ ಉಪ ಮಹಾಪೌರರು ಟಿಪ್ಪಣಿ ಬರೆದು ಶ್ರೀ ಆರ್. ವಿಜಯ ಪ್ರಸಾದ್, ಕಾರ್ಯದರ್ಶಿ ದಿ ಕರ್ನಾಟಕ ಸ್ಟೇಟ್ ಬಿಲಿಯರ್ಡ್ ಅಸೋಸಿಯೇಷನ್ ರವರು ನೀಡಿರುವ ಮನವಿಯನ್ನು ತಮ್ಮ ಟಿಪ್ಪಣಿಯೊಂದಿಗೆ ಲಗತ್ತಿಸುತ್ತಾ, ಸದರಿ ಸಂಸ್ಥೆರವರು ರಾಷ್ಟ್ರ ಮಟ್ಟದ ಸ್ನೋಕರ್ ಚಾಂಪಿಯನ್ ಶಿಪ್ ಪಂದ್ಯಾವಳಿಯನ್ನು ನಡೆಸಲು ಪ್ರಸ್ತಾಪಿಸುತ್ತಾ ಸದರಿ ಪಂದ್ಯಾವಳಿಗಳಿಗೆ ಸುಮಾರು ರೂ. 15.00 ಲಕ್ಷಗಳ ವೆಚ್ಚವನ್ನು ಅಂದಾಜಿಸಲಾಗಿರುತ್ತದೆಂದು ತಿಳಿಸಿ, ಬಿ.ಬಿ.ಎಂ.ಪಿ ವತಿಯಿಂದ ಪ್ರಾಯೋಜಕತ್ವ ವಹಿಸುವಂತೆ ಪ್ರಸ್ತಾಪಿಸಿರುತ್ತಾರೆಂದು ತಿಳಿಸುತ್ತಾ, ಸದರಿಯವರ ಮನವಿಯನ್ನು ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ನೀಡುವಂತೆ ಕೋರಿರುತ್ತಾರೆ.

ಶ್ರೀ ಆರ್. ವಿಜಯ ಪ್ರಸಾದ್, ಕಾರ್ಯದರ್ಶಿ ದಿ ಕರ್ನಾಟಕ ಸ್ಟೇಟ್ ಬಿಲಿಯರ್ಡ್ ಅಸೋಸಿಯೇಷನ್, ನಂ. 5/1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ಜಸ್ಮಾ ಭವನ ರಸ್ತೆ, ಬೆಂಗಳೂರು – 560 052 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ತಮ್ಮ ಸಂಸ್ಥೆಯ ವತಿಯಿಂದ ಹಲವಾರು ಪಂದ್ಯಾವಳಿಗಳನ್ನು ಆಯೋಜಿಸಿದ್ದು, ಅತ್ಯುತ್ತಮ ಕ್ರೀಡಾಪಟುಗಳನ್ನು ತಯಾರಿಸಿಲಾಗಿರುತ್ತದೆ. ಐ.ಬಿ.ಎಸ್.ಎಫ್. ವಿಶ್ವ ಚಾಂಪಿಯನ್ ಶ್ರೀ ಪಂಕಜ್ ಅಡ್ವಾನಿ ರವರೂ ಸಹ ಅವರಲ್ಲಿ ಒಬ್ಬರಾಗಿರುತ್ತಾರೆಂದು ತಿಳಿಸುತ್ತಾ ತಮ್ಮ ಸಂಸ್ಥೆಯ ವತಿಯಿಂದ ಆಯೋಜಿಸಿರುವ ಕಾರ್ಯಕ್ರಮಗಳ ವಿವರಗಳನ್ನು ಒದಗಿಸಿ, ರಾಷ್ಟ್ರೀಯ ಮಟ್ಟದ ಸ್ನೂಕರ್ ಪಂದ್ಯಾವಳಿ ನಡೆಸಲು ರೂ. 15.00 ಲಕ್ಷಗಳು ವೆಚ್ಚವಾಗುವುದಾಗಿ ಅಂದಾಜಿಸಿ ಪ್ರಾಯೋಜಕತ್ವ ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳಿಗೆ ಸಹಾಯಾನುಧಾನ/ಅನುದಾನ ಮಂಜೂರು ಮಾಡಲು ನಿರ್ದೇಶನವಿರುತ್ತದೆ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/– ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**<u>ನಿರ್ಣಯ:</u>– ಆಯುಕ್ತರ ದಿನಾಂಕ : 20–10–2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಘಕ್ಕೆ ಸಂಘವು ನಡೆಸುವ ಕಾರ್ಯಕ್ರಮಗಳಿಗಾಗಿ 2011–12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಲ್ಲಿಯೇ ಬಳಸಿಕೊಳ್ಳಲು ಸಂಘಕ್ಕೆ ತಿಳಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *<u>23]. ವಿಷಯದ ಸಂಖ್ಯೆ :–ತೆಆಸ್ಥಾಸ/345/2011–12</u>*

ಆಯುಕ್ತರ ಟಿಪ್ಪಣಿ ಸಂಖ್ಯೆ : ಪಿಆರ್‌ಓ/ಸಿ1/ಪಿಆರ್/160/2011–12, ದಿನಾಂಕ : 27–10–2011ರಲ್ಲಿ ವಿವರಿಸಿರುವಂತೆ, ಶ್ರೀ ಪ್ರಭಾತ್ ಜಾ, ಎಂ.ಪಿ, ಸಂಪಾದಕರು, ಕಮಲ್ ಸಂದೇಶ ದೆಹಲಿ ಹಿಂದಿ ಪಾಕ್ಷಿಕ ಪತ್ರಿಕೆಯವರು ಮಾನ್ಯ ಮುಖ್ಯಮಂತ್ರಿಯವರಿಗೆ ಪತ್ರ ಬರೆದು ತಮ್ಮ ಪತ್ರಿಕೆಯ ವತಿಯಿಂದ ವಿಶೇಷ ಸಂಚಿಕೆಯೊಂದನ್ನು ಹೊರತರುತ್ತಿದ್ದು, ಈ ವಿಶೇಷ ಸಂಚಿಕೆಗೆ ಜಾಹೀರಾತು ನೀಡುವ ಮೂಲಕ ಪ್ರೋತ್ಸಾಹಿಸಬೇಕೆಂದು ಕೋರಿರುತ್ತಾರೆ.

ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರರವರು ಮಾನ್ಯ ಆಯುಕ್ತರಿಗೆ ಪತ್ರ ಬರೆಯುತ್ತಾ, ***"ಕಮಲ್ ಸಂದೇಶ್"*** ದೆಹಲಿ ಪಾಕ್ಷಿಕ ಪತ್ರಿಕೆಯು ಹೊರತರುತ್ತಿರುವ ವಿಶೇಷ ಸಂಚಿಕೆಗೆ ರೂ. 1,00,000/– ರೂಗಳ ಜಾಹೀರಾತನ್ನು ನೀಡುವಂತೆ ಮಾನ್ಯ ಮುಖ್ಯಮಂತ್ರಿಯವರಿಂದ ನಿರ್ದೇಶಿಸಲ್ಪಟ್ಟಿದ್ದೇನೆಂದು ತಿಳಿಸಿರುತ್ತಾರೆ.

ಕಮಲ್ ಸಂದೇಶ್ ಪಾಕ್ಷಿಕ ಪತ್ರಿಕೆಯವರು ಹೊರತರುತ್ತಿರುವ ವಿಶೇಷ ಸಂಚಿಕೆಗೆ ರೂ. 1,00,000/–ಗಳಿಗೆ ಪಾಲಿಕೆ ವತಿಯಿಂದ ಜಾಹೀರಾತು ಬಿಡುಗಡೆ ಮಾಡಲು ಲೆಕ್ಕ ಶೀರ್ಷಿಕೆ–04, ಸಾರ್ವಜನಿಕ ಸಂಪರ್ಕ ವಿಭಾಗ, ಜಾಹೀರಾತು ಮತ್ತು ಪ್ರಚಾರ ವೆಚ್ಚಗಳು ಶೀರ್ಷಿಕೆಯಿಂದ ಮಂಜೂರು ಮಾಡವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**<u>ನಿರ್ಣಯ:</u>– ದಿನಾಂಕ : 27–10–2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಪತ್ರಿಕೆಗೆ ರೂ.25,000/– (ಇಪ್ಪತ್ತೈದು ಸಾವಿರ) ಗಳಿಗೆ ಪಾಲಿಕೆ ವತಿಯಿಂದ ಜಾಹೀರಾತು ನೀಡುವುದೆಂದು ಸಮಿತಿಯು ತೀರ್ಮಾನಿಸಿತು.**

## *<u>24]. ವಿಷಯದ ಸಂಖ್ಯೆ :–ತೆಆಸ್ಥಾಸ/346/2011–12</u>*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ ಆರ್(4)75/2011–12, ದಿನಾಂಕ : 20–10–2011ರಲ್ಲಿ ವಿವರಿಸಿರುವಂತೆ, ಶ್ರೀ ಜಿ. ಭೈರಪ್ಪಾಜಿ, ಗೌರವ ಸಂಚಾಲಕರು, ಕನ್ನಡ ಸಾಹಿತ್ಯ ಪರಿಷತ್ತು, ಬಸವನಗುಡಿ ವಿಧಾನಸಭಾ ಕ್ಷೇತ್ರ ರವರು ಪತ್ರ ಬರೆದು ಬೆಂಗಳೂರಿನ ಬಸವನಗುಡಿಯ ವಿದ್ಯಾರಣ್ಯ ಯುವಕರ ಸಂಘ, ಎ.ಪಿ.ಎಸ್. ಆಟದ ಮೈದಾನದಲ್ಲಿ ಗಣೇಶನ ಉತ್ಸವವನ್ನು ಪ್ರತಿ ವರ್ಷ ಆಚರಿಸುತ್ತಾರೆ. ಇಲ್ಲಿ ಕನ್ನಡ ಭಾಷೆಗೆ ಮೊದಲ ಆದ್ಯತೆ ಇರುವುದಿಲ್ಲ. ಇಂಗ್ಲೀಷ್ ಭಾಷೆ ಪ್ರಧಾನ್ಯವಾಗಿರುತ್ತದೆ ಅನ್ಯ ರಾಜ್ಯದ ಕಲಾವಿದರಿಗೆ ಎಲ್ಲಿಲ್ಲದ ಅದ್ದೂರಿಯಾದಂತಹ ಗೌರವ ಇರುತ್ತದೆ. ರಾಜ್ಯದ ಕಲಾವಿದರಿಗೆ ಅಂತಹ ಮಹತ್ವವಿರುವುದಿಲ್ಲ. ಕಾರ್ಯಕ್ರಮದಲ್ಲಿ ಬಹಳಷ್ಟು ಭಾಗ ಕನ್ನಡೇತರರಿಗೆ ಇರುತ್ತದೆ. ಮೇಲಾಗಿ ಈ ಸಂಸ್ಥೆಯಲ್ಲಿ ಲಕ್ಷಾಂತ ರೂಪಾಯಿಗಳ ಠೇವಣಿ ಇರುತ್ತದೆ. ಇವರುಗಳು ಸಾರ್ವಜನಿಕರಿಂದ ಹಣವನ್ನು ರಸೀದಿ ಕೊಟ್ಟು ಪಡೆಯುತ್ತಾರೆ. ಹೀಗಾಗಿ ಇವರದ್ದು ಉಚಿತವಾದಂತಹ ಸೇವೆಯೇನಲ್ಲ. ಬೆಂಗಳೂರು ನಗರದಲ್ಲಿ ಸಾವಿರಾರು ಸಂಘ ಸಂಸ್ಥೆಯವರು ಗಣೇಶನ ಉತ್ಸವ, ಅಣ್ಣಮ್ಮನ ಉತ್ಸವವನ್ನು ಮಾಡುತ್ತಾರೆ. ಯಾರಿಗೂ ಅನುದಾನವನ್ನು ನೀಡದ ಬಿ.ಬಿ.ಎಂ.ಪಿ ಇವರಿಗೆ ಮಾತ್ರ ಪ್ರತಿ ವರ್ಷ ಅನುದಾನವನ್ನು ನೀಡಿರುತ್ತಾರೆ. ಇಂತಹ ಉತ್ಸವಗಳಿಗೆ ಅನುದಾನ ನೀಡುವುದಾದರೆ ಎಲ್ಲ ಸಂಘಟನೆಯವರಿಗೂ ನೀಡಿ ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ ಎನ್ನುವ ತಾರತಮ್ಯ ಸರಿಯಲ್ಲ. ಜೊತೆಗೆ ಈ ಸಂಸ್ಥೆ ವತಿಯಿಂದ ಯಾವುದೇ ರೀತಿಯ ಸಾಮಾಜಿಕ ಚಟುವಟಿಕೆಗಳಿರುವುದಿಲ್ಲ. ಕೇವಲ 10 ದಿನಗಳ ಉತ್ಸವ ಬಿಟ್ಟರೆ ಬೇರೆಯಾದ ಚಟುವಟಿಕೆಗಳೂ ನಡೆಯುವುದಿಲ್ಲ. ಸಾರ್ವಜನಿಕರಿಂದ ವಸೂಲಿ ಮಾಡುವ ತೆರಿಗೆ ಹಣವನ್ನು ಬಿಬಿಎಂಪಿ ಈ ರೀತಿ ಪೋಲು ಮಾಡುವ ಬದಲು ಅನ್ಯ ಉದ್ದೇಶಗಳಿಗೆ ಬಳಸಲಿ. ಮೂರು ಸಾವಿರ ಕೋಟಿ ರೂಪಾಯಿಗಳ ಸಾಲದ ಹೊರೆ ಹೊತ್ತಿರುವ ಬಿಬಿಎಂಪಿ ಮುಂದಿನ

ದಿನಗಳಲ್ಲಾದರೂ ನಿರುಪಯುಕ್ತ ಸಂಘಟನೆಗಳಿಗೆ ಅನುದಾನವನ್ನು ನೀಡುವ ಪ್ರವೃತ್ತಿಗೆ ಮಂಗಳ ಹಾಡಿ ಶಾಶ್ವತ ಯೋಜನೆಗಳನ್ನು ರೂಪಿಸುವ ಯೋಜನೆಗಳನ್ನು ಸಾಮಾಜಿಕ ಕಳಕಳಿಯ ಸಂಘಟನೆಗಳಿಗೆ ಮಾತ್ರ ಅನುದಾನವನ್ನು ನೀಡಲಿ ಎಂದು ತಿಳಿಸಿರುತ್ತಾರೆ

2010–11 ನೇ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. 76 ಸಂಘ ಸಂಸ್ಥೆಗಳ ಪೈಕಿ **ಶ್ರೀ ವಿದ್ಯಾರಣ್ಯ ಯುವಕ ಸಂಘ (ರಿ) ಬಸವನಗುಡಿ ರವರಿಗೆ ಕ್ರ.ಸಂ. (8) ರಲ್ಲಿ ರೂ. 10.00 ಲಕ್ಷಗಳ** ಅನುದಾನವನ್ನು ನಿಗಧಿ ಪಡಿಸಲಾಗಿದ್ದು, **ದಿನಾಂಕ: 21–12–2010 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ವಿಷಯ ಸಂಖ್ಯೆ:109/2010–11 ರ ತೀರ್ಮಾನದಂತೆ** ಸದರಿ ಸಂಘದವರಿಗೆ ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ:–****ದಿನಾಂಕ 20.10.2011ರ ಆಯುಕ್ತರ ಟಿಪ್ಪಣಿಯಲ್ಲಿ ಶ್ರೀ ವಿದ್ಯಾರಣ್ಯ ಯುವಕ ಸಂಘಕ್ಕೆ (ರಿ) ಬಸವನಗುಡಿರವರಿಗೆ 2010–11ನೇ ಸಾಲಿಗೆ ಹಣ ಬಿಡುಗಡೆ ಮಾಡಿರುವ ಬಗ್ಗೆ ಪ್ರಸ್ತಾಪಿಸಲಾಗಿರುವುದರಿಂದ ಸದರಿ ಸಂಘದವರು ಸಲ್ಲಿಸಿರುವ ದಾಖಲೆಗಳ ಪ್ರಕಾರ ಕಾರ್ಯಕ್ರಮಗಳನ್ನು ನಡೆಸಿ ಹಣ ಸದುಪಯೋಗಗೊಂಡಿರುವ ಬಗ್ಗೆ ಖಾತರಿಪಡಿಸಿಕೊಂಡು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.*

## *25]. ವಿಷಯದ ಸಂಖ್ಯೆ :–ತೆಆಸ್ಥಾಸ/348/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)76/2011–12, ದಿನಾಂಕ : 27–10–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಶಶಿಕಲಾ ಕೃಷ್ಣೇಗೌಡ, ಸದಸ್ಯರು ವಾರ್ಡ್ ನಂ. 66 (ಸುಬ್ರಮಣ್ಯ ನಗರ) ರವರು ಪತ್ರ ಬರೆದು ತನ್ನ ವಾರ್ಡ್ ನಂ. 66, ಸುಬ್ರಮಣ್ಯ ನಗರದಲ್ಲಿ ದೀಪಾ ಅಕಾಡೆಮಿ ಫಾರ್ ದಿ ಡಿಫರೆಂಟ್ಲಿ ಏಬಲ್ಡ್ ಸಂಸ್ಥೆ (ದೀಪ ಅಂಧ ಮಕ್ಕಳ ಪ್ರೌಢಶಾಲೆ), ನಂ. 226/ಎ/3, ಟ್ಯಾಂಕ್ ಬಂಡ್ ರಸ್ತೆ, ಸುಬ್ರಮಣ್ಯ ನಗರ, ಬೆಂಗಳೂರು – 560 021. ರವರ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಸದರಿ ಸಂಸ್ಥೆಯು ಅಂಧ ಮಕ್ಕಳ ವಿದ್ಯಾಭ್ಯಾಸಕ್ಕೆ ಉಚಿತವಾಗಿ ಊಟ, ವಸತಿ ಮತ್ತು ಶಿಕ್ಷಣವನ್ನು ನೀಡುತ್ತಿದೆ. ಆದ್ದರಿಂದ ಈ ಸಂಸ್ಥೆಗೆ ಬಿ.ಬಿ.ಎಂ.ಪಿ. ಕಲ್ಯಾಣ ನಿಧಿಯಿಂದ ಧನ ಸಹಾಯವನ್ನು ನೀಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠರೂ. 10 ಸಾವಿರ**,** ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, **ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## *26]. ವಿಷಯದ ಸಂಖ್ಯೆ :–ತೆಆಸ್ಥಾಸ/349/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)95/2011–12, ದಿನಾಂಕ : 27–10–2011ರಲ್ಲಿ ವಿವರಿಸಿರುವಂತೆ, ಶ್ರೀ ಹೆಚ್. ಆರ್. ಪಾರ್ಥಸಾರಥಿ, ಕಾರ್ಯದರ್ಶಿ, ಕರ್ನಾಟಕ ರಾಜ್ಯೋತ್ಸವ ಸಮಿತಿ, ನೃಪತುಂಗ ಮಂಟಪ, ನಂ. 229, 4ನೇ ಮುಖ್ಯರಸ್ತೆ, ಎಸ್.ಬಿ.ಎಂ. ಬ್ಯಾಂಕ್ ಎದುರು, ಚಾಮರಾಜಪೇಟೆ, ಬೆಂಗಳೂರು – 560 018 ರವರು ಮನವಿ ಸಲ್ಲಿಸಿ, ಪ್ರತಿ ವರ್ಷದಂತೆ ಈ ವರ್ಷವೂ "ಕರ್ನಾಟಕ ರಾಜ್ಯೋತ್ಸವ"ವನ್ನು ನವೆಂಬರ್ 1 ರಂದು ಮೈಸೂರು ಬ್ಯಾಂಕ್ ಹತ್ತಿರ ಇರುವ ನೃಪತುಂಗ ಮಂಟಪದಲ್ಲಿ ಆಚರಿಸುತ್ತಿದ್ದು, ಪ್ರತೀ ವರ್ಷವೂ ಕರ್ನಾಟಕ ರಾಜ್ಯೋತ್ಸವಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಹಾಯಧನವನ್ನಾಗಿ ನೀಡುತ್ತಿದ್ದೀರೆಂದು ಕಳೆದ ವರ್ಷವೂ ಸೇರಿದಂತೆ,

ಈ ವರ್ಷವೂ ಕರ್ನಾಟಕ ರಾಜ್ಯೋತ್ಸವವನ್ನು ವೈಭವವಾಗಿ ಆಚರಿಸುವುದರಿಂದ ಪಾಲಿಕೆಯಿಂದ ರೂ. 25.00 ಲಕ್ಷಗಳನ್ನು ಸಹಾಯ ಧನವಾಗಿ ನೀಡಬೇಕಾಗಿ ಕೋರಿರುತ್ತಾರೆ.

ಸದರಿಯವರಿಗೆ 2008–09 ನೇ ಸಾಲಿನಲ್ಲಿ ರೂ. 5.00 ಲಕ್ಷಗಳ ಅನುದಾನ ಬಿಡುಗಡೆ ಯಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠರೂ. 10 ಸಾವಿರ**, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## *27]. ವಿಷಯದ ಸಂಖ್ಯೆ :–ತೆಆಸ್ಥಾಸ/351/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 27–10–2011ರಲ್ಲಿ ವಿವರಿಸಿರುವಂತೆ, ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.109.00 ಲಕ್ಷಗಳಿಗೆ ಮಾನ್ಯ ಆಯುಕ್ತರವರ ಕಂಡಿಕೆ (25). ಕಮಿಷನರ್ ಆರ್ಡರ್ ನಂ. PSR(G)/4231/10-11, Dt : 11-10-2010. ರಲ್ಲಿ ಮಂಜೂರು ನೀಡಿದ್ದು, ಸದರಿ ಕಾಮಗಾರಿ ಸಂಕೇತ 095-11-N-J-N-D-FO-001. ಅನ್ನು ನೀಡಿರುತ್ತಾರೆ. ಮುಂದುವರೆದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ದಿನಾಂಕ : 27–09–2011 ರಂದು ಮಾನ್ಯ ಆಯುಕ್ತರವರನ್ನು ಈ ಕೆಲಸವನ್ನು ಜರೂರಾಗಿ ತೆಗೆದುಕೊಳ್ಳಲು ಕೋರಿರುತ್ತಾರೆ. ಈ ಪತ್ರದ ಮೇಲೆ ಮಾನ್ಯ ಆಯುಕ್ತರು ಸದಸ್ಯರ ಪ್ರಸ್ತಾವನೆಗೆ ಒಪ್ಪಿಗೆ ನೀಡಿರುತ್ತಾರೆ. ಶ್ರೀ.ಚಂದ್ರಶೇಖರ್ ಸೋಪನಹಳ್ಳಿರವರು ಅಂದಾಜು ಪಟ್ಟಿಗಿಂತ ಶೇ.7.00% ರಷ್ಟು ಕಡಿಮೆ ನಮೂದಿಸಿದ್ದು, ಉಳಿದವರಿಗಿಂತ ಕಡಿಮೆ ಬಿಡ್‌ದಾರರಾಗಿರುತ್ತಾರೆ. ಈ ಕಾಮಗಾರಿಯು ತುಂಬಾ ಅತಿಅವಶ್ಯಕವಾಗಿರುತ್ತದೆ, ಮೇಲಿಂದ ಹರಿದು ಬರುವ ಕೊಳಚೆ ನೀರು ತೆರೆದ ಪ್ರದೇಶದಲ್ಲಿ ಹರಿಯುವುದನ್ನು ತಡೆಯಲು ಆರ್.ಸಿ.ಸಿ ಕಟ್ಟಡವನ್ನು ಹೊಸದಾಗಿ ನಿರ್ಮಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ಸಾರ್ವಜನಿಕರ ಹಿತದೃಷ್ಟಿಯಿಂದ ಆರ್.ಸಿ.ಸಿ. ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಲಾಗಿರುತ್ತದೆ. ಎರಡು ಇಕ್ಕೆಲೆಗಳಲ್ಲೂ ಆಸರೆ ಗೋಡೆಯು ಕಲ್ಲು ಕಟ್ಟಡದಿಂದ ಕೂಡಿರುತ್ತದೆ. ಸದರಿ ಕಟ್ಟಡ ತುಂಬಾ ಹಳೆಯದಾಗಿದ್ದು ಶಿಥಿಲಾಗಿರುತ್ತದೆ. ಆದುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಆರ್.ಸಿ.ಸಿ ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಲಾಗಿರುತ್ತದೆ.

ಸದರಿ ಕಾಮಗಾರಿಗೆ ಈಗಾಗಲೇ ತಾಂತ್ರಿಕ ಮಂಜೂರಾತಿ ಸಂಖ್ಯೆ : CE/SWD/TS/15/2010-11, dt:25-11-2010. ಹಾಗೂ ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ : CE/SWD/ADMN/15/2010-11, dt:25-11-2010. ಅನುಮೋದನೆ ದೊರೆತಿರುತ್ತದೆ. ಮುಂದುವರೆದಂತೆ ಸದರಿ ಕಾಮಗಾರಿಗೆ ರೂ.109.00 ಲಕ್ಷಗಳಿಗೆ ಸೂಕ್ತ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿದೆ.

***–ಮುಂದೂಡಿದೆ–***

## *28]. ವಿಷಯದ ಸಂಖ್ಯೆ :–ತೆಆಸ್ಥಾಸ/352/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)106/2011–12, ದಿನಾಂಕ : 02–11–2011/05–11–2011 ರಲ್ಲಿ ವಿವರಿಸಿರುವಂತೆ, ಶ್ರೀಮತಿ ಎಲ್. ನಾಗರತ್ನ ಲೋಕೇಶ್, ಮಾನ್ಯ ಸದಸ್ಯರು ವಾರ್ಡ್ ನಂ. 102 (ವೃಷಭಾವತಿ ನಗರ) ರವರು ಪತ್ರ ಬರೆದು, ಶ್ರೀ ಮಯೂರ ಕನ್ನಡ ಕಲಾ ಯುವಕರ ಬಳಗ (ರಿ), ವಿಳಾಸ : 1ನೇ ಮುಖ್ಯರಸ್ತೆ, (ವಿಜಯ ಗೆಲಾಕ್ಷಿ ಅಪಾರ್ಟ್ ಮೆಂಟ್ ಮುಂಭಾಗ), ಮಾರುತಿ ನಗರ, ವೃಷಭಾವತಿ ನಗರ, ವಾರ್ಡ್ ನಂ. 102, ಬೆಂಗಳೂರು – 560 079. ರವರು ಕನ್ನಡ ರಾಜ್ಯೋತ್ಸವ 10 ವರ್ಷಗಳಿಂದ ಮಾಡುತ್ತಿದ್ದು, ಈ ಬಾರಿ ವಿಜೃಂಭಣೆಯಿಂದ ಆಚರಿಸುತ್ತಿದ್ದಾರೆಂದು, ಇವರು ತಮ್ಮ ವಾರ್ಡಿನ

ವೃಷಭಾವತಿನಗರದ ಸುತ್ತಮುತ್ತು ಶಾಲೆ ಬಡ ಮಕ್ಕಳಿಗೆ ಪುಸ್ತಕ ಮತ್ತು ಬಟ್ಟೆ ವಿತರಣೆ, ಬಡ ಹೆಂಗಸರಿಗೆ ಸೀರೆ ವಿತರಣೆ, ಎಸ್.ಎಸ್.ಎಲ್.ಸಿ. 2ನೇ ಪಿಯುಸಿ ಹೆಚ್ಚು ಅಂಕಗಳಿಸಿದ ಮಕ್ಕಳಿಗೆ ಧನ ಸಹಾಯ, ಬಡ ವ್ಯಾಪಾರಸ್ಥರಿಗೆ ತಳ್ಳುವ ಗಾಡಿ ವಿತರಣೆ, ಅಂಗವಿಕಲರಿಗೆ ಸೈಕಲ್ ವಿತರಣೆ, ಡೋಬಿ ಜನಾಂಗಕ್ಕೆ ಐರನ್ ಬಾಕ್ಸ್ ವಿತರಣೆ, ಕನ್ನಡ ಪರ ಹೋರಾಟ ಮಾಡುವವರಿಗೆ ಕಾರ್ಯಕ್ರಮಕ್ಕೆ ಐದರಿಂದ ಆರು ಲಕ್ಷ ಖರ್ಚಾಗುವ ಸಾಧ್ಯತೆ ಇರುತ್ತದೆಂದು ತಿಳಿಸುತ್ತಾ ಪಾಲಿಕೆಯ ಆಯವ್ಯಯದಲ್ಲಿ ಸಂಘ ಸಂಸ್ಥೆಗಳ ಲೆಕ್ಕ ಶೀರ್ಷಿಕೆಯಡಿಯಲ್ಲಿ ಮೀಸಲಿರಿಸಿರುವ ಅನುದಾನದಲ್ಲಿ ಹಣ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** *ದಿನಾಂಕ 05.11.2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಘಕ್ಕೆ ರೂ.2.00 ಲಕ್ಷ (ಎರಡು ಲಕ್ಷ) ಗಳ ಸಹಾಯಧನವನ್ನು ಮಂಜೂರು ಮಾಡಬಹುದೆಂದು ಸಮಿತಿಯು ತೀರ್ಮಾನಿಸಿತು.*

## *29]. ವಿಷಯದ ಸಂಖ್ಯೆ :–ತೆಆಸ್ಥಾಸ/353/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)101/2011–12, ದಿನಾಂಕ : 02–11–2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಭಾರತ ವಿಕಾಸ ಪರಿಷದ್, ನಂ. 172, ಕವಿ ಲಕ್ಷ್ಮೀಶ ರಸ್ತೆ, ವಿ.ವಿ.ಪುರಂ, ಬೆಂಗಳೂರು – 4 ರವರು ಸಲ್ಲಿಸಿರುವ ಮನವಿಯನ್ನು ಲಗತ್ತಿಸುತ್ತಾ, ಸದರಿ ಸಂಘವು ಸಾಮಾಜಿಕ, ಸಾಂಸ್ಕೃತಿಕ ಸೇವಾ ಸಂಸ್ಥೆಯಾಗಿದ್ದು, ಜನರಲ್ಲಿ ದೇಶ ಪ್ರೇಮ, ಭಾರತೀಯತೆ ಮತ್ತು ಸ್ವಾಭಿಮಾನವನ್ನು ಉದ್ದೀಪಿಸುವುದು ಹಾಗೂ ರಾಷ್ಟ್ರೀಯ ಸಮೂಹ ಗಾಯನ, ರಸಪ್ರಶ್ನೆ ಕಾರ್ಯಕ್ರಮ, ಗುರುವಂದನಾ ಛಾತ್ರಾ, ವಿಕಲಾಂಗಿಗೆ ಸಹಾಯ ಹಾಗೂ ಪುನರ್ ವಸತಿ ಯೋಜನೆ, ಗ್ರಾಮ ವಿಕಾಸ ಯೋಜನೆ, ಉಚಿತ ಕಣ್ಣಿನ ತಪಾಸಣೆ/ಚಿಕಿತ್ಸಾ ಶಿಬಿರ ಇತ್ಯಾದಿಗಳನ್ನು ನಡೆಸಿಕೊಂಡು ಬರುತ್ತಿದ್ದು, ಸುಮಾರು 25 ವರ್ಷಗಳನ್ನು ಕಳೆದಿದ್ದು ರಜತ ಮಹೋತ್ಸವ ಕಾರ್ಯಕ್ರಮವನ್ನು ನಡೆಸಲು ಉದ್ದೇಶಿಸಿದ್ದು ಇದಕ್ಕೆ ಲಕ್ಷಾಂತರ ರೂಪಾಯಿಗಳ ವೆಚ್ಚವಾಗಲಿದ್ದು, ಪಾಲಿಕೆ ವತಿಯಿಂದ ರೂ. 10.00 ಲಕ್ಷಗಳ ಧನ ಸಹಾಯ ಕೋರಿರುತ್ತಾರೆಂದು ತಿಳಿಸಿ, ಸದರಿ ಭಾರತ ವಿಕಾಸ ಪರಿಷದ್ ಕರ್ನಾಟಕ ಇದಕ್ಕೆ ಧನ ಸಹಾಯ ಮಂಜೂರು ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## ***30]. ವಿಷಯದ ಸಂಖ್ಯೆ :–ತೆಆಸ್ಥಾಸ/355/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)62/2011–12, ದಿನಾಂಕ : 28–10–2011ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ಶಿವಕುಮಾರ್, ನಂ. 28, ಬಾಬುರೆಡ್ಡಿ ಬಿಲ್ಡಿಂಗ್ ಐಶ್‌ಬಜಾರ್ ಹಿಂಭಾಗ, 4ನೇ ಕ್ರಾಸ್, ಸಿ.ಎಸ್.ಬಿ. ಲೇಔಟ್, ಅಮೃತಾ ಇಂಜಿನಿಯರಿಂಗ್ ಕಾಲೇಜು ರಸ್ತೆ, ಕಸವನಹಳ್ಳಿ ಕಾರ್ಮೆಲರಾಂ ಅಂಚೆ, ಬೆಂಗಳೂರು–560035. ರವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ತಾವು **ಹಿಂದುಳಿದ ವರ್ಗಗಳ ಪ್ರವರ್ಗ–1** ಕ್ಕೆ ಸೇರಿದವರಾಗಿದ್ದು, ತಮ್ಮ ಮಗನಾದ **ಶ್ರೀ ಎಸ್. ರಂಜಿತ್ ಕುಮಾರ್** ರವರು ರಷ್ಯಾ ದೇಶದಲ್ಲಿ **ಉನ್ನತ ವೈದ್ಯಕೀಯ ಶಿಕ್ಷಣ** ಪಡೆಯುತ್ತಿದ್ದು, 2ನೇ ವರ್ಷದಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣನಾಗಿರುವುದಾಗಿ ತಿಳಿಸಿ ಅಂಕಪಟ್ಟಿ ಹಾಗೂ 3ನೇ ವರ್ಷದ ವಿದ್ಯಾಭ್ಯಾಸಕ್ಕಾಗಿ ರೂ. 190,000/– ಗಳ ಬೋಧನಾ ಶುಲ್ಕವನ್ನು ಪಾವತಿಸಿರುವುದಾಗಿ ತಿಳಿಸಿರುತ್ತಾರೆ. ತಾವು ಆರ್ಥಿಕವಾಗಿ ಹಿಂದುಳಿದಿರುವುದರಿಂದ ತಮ್ಮ ಮಗನಿಗೆ ಪಾಲಿಕೆ ವತಿಯಿಂದ ವಿದೇಶದಲ್ಲಿ ಉನ್ನತ ವೈದ್ಯಕೀಯ ಶಿಕ್ಷಣ ಮುಂದುವರೆಸಲು ಸಹಾಯಧನ ಮಂಜೂರು ಮಾಡಿ ಪ್ರೋತ್ಸಾಹಿಸಬೇಕೆಂದು ಕೋರಿರುತ್ತಾರೆ.

ಪ್ರಸಕ್ತ 2011–12 ನೇ ಸಾಲಿನ ಮಹಾನಗರ ಪಾಲಿಕೆಯ ಆಯವ್ಯಯವು ಮಂಡನೆಯಾಗಿದ್ದು, ತಹಲ್‌ವರೆವಿಗೂ ಸರ್ಕಾರದ ಅನುಮೋದನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ವಿದ್ಯಾರ್ಥಿಗೆ ಉನ್ನತ ವ್ಯಾಸಾಂಗಕ್ಕೆ ಸಹಾಯಧನವನ್ನು ಮಂಜೂರು ಮಾಡುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**<u>ನಿರ್ಣಯ:–</u> ದಿನಾಂಕ 28–10–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ವಿದ್ಯಾರ್ಥಿಗೆ ವೈದ್ಯಕೀಯ ಶಿಕ್ಷಣಕ್ಕಾಗಿ ರೂ.30,000/– (ಮೂವತ್ತು ಸಾವಿರ) ಗಳ ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## ***31]. ವಿಷಯದ ಸಂಖ್ಯೆ :–ತೆಆಸ್ಥಾಸ/357/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)94/2011–12, ದಿನಾಂಕ : 28–10–2011ರಲ್ಲಿ ವಿವರಿಸಿರುವಂತೆ, ಶ್ರೀ ವಿಕಾಸ್, ಸಂಗಮ, 9 ವಿಲಿಯಮ್ ಕೋರ್ಟ್, 68, ಗುಲ್‌ಫೋರ್ಡ್ ರೋಡ್ ಈಸ್ಟ್, ಫಾರ್ನ್‌ಬರ್ಗ್ ಹಮ್ಸ್‌ಶೈರ್–ಜಿಯು14 6ಟಿಯು ಯುನೈಟೆಡ್ ಕಿಂಗ್‌ಡಮ್ ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ವಿಶ್ವ ಕನ್ನಡ ಮೊದಲ ಸಮ್ಮೇಳನವನ್ನು ಯೋರೋಪ್ 2011ನ್ನು ಅಕ್ಟೋಬರ್ ತಿಂಗಳಲ್ಲಿ ಎರಡು ದಿನ ನಡೆಯುತ್ತಿರುವುದರಿಂದ ತಮ್ಮ ಸಹಕಾರ ಹಾಗೂ ಪ್ರೋತ್ಸಾಹ ನೀಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ಮುಂದುವರೆದಂತೆ, **ಸದರಿ ಸಂಸ್ಥೆಯು ಪಾಲಿಕೆಯ ವ್ಯಾಪ್ತಿಗೆ ಒಳಪಡುವುದಿಲ್ಲ.** ವಿಶ್ವ ಕನ್ನಡ ಮೊದಲ ಸಮ್ಮೇಳನ ಯೋರೋಪ್ 2011–ಲಂಡನ್ ಕಾರ್ಯಕ್ರಮವು 01 ಮತ್ತು 02 ನೇ ಅಕ್ಟೋಬರ್ 2011 ರಂದು ಆಯೋಜಿಸಲಾಗಿದ್ದು, **ಸದರಿ ಕಾರ್ಯಕ್ರಮವು ಈಗಾಗಲೇ ಮುಗಿದು ಹೋಗಿರುತ್ತದೆ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**<u>ನಿರ್ಣಯ:–</u> ದಿನಾಂಕ : 28–10–2011ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಯು ಪಾಲಿಕೆಯ ವ್ಯಾಪ್ತಿಗೆ ಒಳಪಡುವುದಿಲ್ಲ ಹಾಗೂ ಈಗಾಗಲೇ ಕಾರ್ಯಕ್ರಮವು ಮುಗಿದು ಹೋಗಿರುವುದರಿಂದ ಈ ಪ್ರಸ್ತಾವನೆಯನ್ನು ಕೈಬಿಡುವುದೆಂದು ಸಮಿತಿಯು ತೀರ್ಮಾನಿಸಿತು.**

## 32]. ವಿಷಯದ ಸಂಖ್ಯೆ :–ತೆಆಸ್ಥಾಸ/359/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/78/11–12, ದಿನಾಂಕ : 07–09–2011ರಲ್ಲಿ ವಿವರಿಸಿರುವಂತೆ, ವಾರ್ಡ್ 119, ಪೈಲ್ವಾನ್ ಕೃಷ್ಣಪ್ಪ ರಸ್ತೆಯಲ್ಲಿ 5300 ಚ್ಚದರ ಅಡಿ ವಿಸ್ತೀರ್ಣವುಳ್ಳ ಜಾಗವನ್ನು ಕರ್ನಾಟಕ ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರಿಯರ) ಸಂಘ (ರಿ) ರವರಿಗೆ ಕರಗಭವನ ನಿರ್ಮಾಣ ಮಾಡಲು ನಿವೇಶನ ಮಂಜೂರಾತಿ ಕುರಿತು, ಅಧ್ಯಕ್ಷರು ಆದಿಶಕ್ತಿ ವಿದ್ಯಾ ಸಂಸ್ಥೆ ಟ್ರಸ್ಟ್ ರವರು ಪತ್ರ ಬರೆದು, ಕರ್ನಾಟಕ ರಾಜ್ಯದಲ್ಲಿ ಹಿಂದುಳಿದವರೆಂದು ಗುರುತಿಸಲ್ಪಟ್ಟಿರುವ ತಿಗಳರು ತಮ್ಮ ಜೀವನೋಪಾಯಕ್ಕಾಗಿ ಉಳಿಸಿಕೊಂಡಿದ್ದ ತೋಟದ ಜಮೀನುಗಳನ್ನು ಬೆಂಗಳೂರು ಅಭಿವೃದ್ಧಿಗಾಗಿ ಬಿಟ್ಟುಕೊಟ್ಟು ಸರ್ಕಾರದೊಂದಿಗೆ ಸಹಕರಿಸುತ್ತಿರುವ ತಿಗಳ ಜನಾಂಗದ ಸಂಪರ್ಕ ಕೇಂದ್ರವಾಗಿ ಕರಗಭವನ ಕಟ್ಟಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:119, ಪೈಲ್ವಾನ್ ಕೃಷ್ಣಪ್ಪ ರಸ್ತೆಯಲ್ಲಿರುವ ನಗರ ಪಾಲಿಕೆಯ 5300 ಚದರ ಅಡಿಗಳ ಖಾಲಿ ಜಾಗವನ್ನು ಆದಿಶಕ್ತಿ ವಿದ್ಯಾ ಸಂಸ್ಥೆ ಟ್ರಸ್ಟ್ ರವರಿಗೆ ಕರಗ ಭವನ ನಿರ್ಮಾಣ ಮಾಡಲು ಕೋರಿರುತ್ತಾರೆ.

ಪೂರ್ಣ ವಿವರಗಳೊಂದಿಗೆ ಪ್ರಸ್ತಾಪಿತ ನಿವೇಶನವನ್ನು ಆದಿಶಕ್ತಿ ವಿದ್ಯಾ ಸಂಸ್ಥೆ ಟ್ರಸ್ಟ್‌ರವರಿಗೆ ಕರಗ ಭವನ ನಿರ್ಮಾಣಕ್ಕೆ ನೀಡುವಲ್ಲಿ ಸೂಕ್ತ ನಿರ್ಣಯ ಕೈಗೊಳ್ಳಲು ನಗರಯೋಜನೆ ಅಭಿವೃದ್ಧಿ ಸ್ಥಾಯಿಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿ ಹಾಗೂ ಪಾಲಿಕೆ ಸಭೆ ಮುಂದೆ ದಿನಾಂಕ 29–06–2011 ರಲ್ಲಿ ಟಿಪ್ಪಣಿ ಮಂಡಿಸಲಾಗಿರುತ್ತದೆ.

ದಿನಾಂಕ:29–07–2011ರಲ್ಲಿ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರಿಯರ) ಸಂಘ (ರಿ) ರವರು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆದು, ಕರಗ ಭವನ ನಿರ್ಮಾಣಕ್ಕಾಗಿ ಪ್ರಸ್ತುತ ನಿವೇಶನವನ್ನು ಆದಿಶಕ್ತಿ ವಿದ್ಯಾಸಂಸ್ಥೆ ಟ್ರಸ್ಟ್‌ಗೆ ನೀಡುವುದನ್ನು ಕೈಬಿಟ್ಟು ತಿಗಳ ಜನಾಂಗದ ಕರ್ನಾಟಕ ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರಿಯರ) ಸಂಘ (ರಿ) ರವರ ಹೆಸರಿಗೆ ಮಂಜೂರು ಮಾಡಲು ಕೋರಿರುವ ಮನವಿಯ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು ನಿರ್ದೇಶಿಸಿರುತ್ತಾರೆ.

ಈ ಬಗ್ಗೆ ಪ್ರಸ್ತುತ ನಿವೇಶನವನ್ನು ಕರ್ನಾಟಕ ರಾಜ್ಯ ತಿಗಳರ (ವಹ್ನಿಕು ಕ್ಷತ್ರಿಯರ) ಸಂಘ (ರಿ) ರವರ ಹೆಸರಿಗೆ ಮಂಜೂರು ಮಾಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:07–09–2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 18–10–2011ರ ನಿರ್ಣಯ.

**ನಿರ್ಣಯ:– ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 18–10–2011ರ ನಿರ್ಣಯವನ್ನು ಮಾರ್ಪಡಿಸಿ 5 (ಐದು) ವರ್ಷಗಳ ಅವಧಿಗೆ ಮಾಸಿಕ ರೂ.10,000/– (ಹತ್ತು ಸಾವಿರ) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## 33]. ವಿಷಯದ ಸಂಖ್ಯೆ :–ತೆಆಸ್ಥಾಸ/364/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/339/11–12, ದಿನಾಂಕ : 30–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.54ರ ಸಂಖ್ಯೆ:11, ಎ.ಡಿ.ಬ್ಲಾಕ್, ವೈಯಾಲಿಕಾವಲ್, ಬೆಂಗಳೂರು ನಗರ ಪಾಲಿಕೆಯ ಜಾಗದಲ್ಲಿ ಸುಮಾರು 1ನೇ ದೇವಸ್ಥಾನದ ಕಟ್ಟಡದ ಅಳತೆ 19.9 ಚದರ ಮೀಟರ್ ಹಾಗೂ 2ನೇ ದೇವಸ್ಥಾನದ ಕಟ್ಟಡದ ಅಳತೆ 11.5 ಚದರ ಮೀಟರ್ ಒಟ್ಟು 31.4 ಚದರ ಮೀಟರ್‌ಗಳ ಅಳತೆಯಲ್ಲಿ ಶ್ರೀ. ಮಾರಮ್ಮ ದೇವಸ್ಥಾನ ಸೇವಾ ಟ್ರಸ್ಟ್ (ರಿ) ದೇವಸ್ಥಾನವನ್ನು ನಿರ್ಮಿಸಿ ಅಲ್ಲಿ ಪೂಜಾ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಸದರಿ ದೇವಸ್ಥಾನದ ಜಾಗವನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಕೋರಿರುತ್ತಾರೆ,

ಸದರಿ ಸಂಸ್ಥೆಯ ದೇವಸ್ಥಾನವು ಪುರಾತನವಾಗಿರುವುದರಿಂದ ಕಟ್ಟಡವು ತುಂಬಾ ಶಿಥಿಲವಾಗಿದ್ದು, ದೇವಸ್ಥಾನವನ್ನು ಅಭಿವೃದ್ಧಿ ಮಾಡಲು ಹಾಗೂ ದುರಸ್ತಿಯನ್ನು ಮಾಡಲು ಅವಶ್ಯಕತೆ ಇರುವುದರಿಂದ ಹಾಗೂ ಸದರಿ ದೇವಸ್ಥಾನದ ನಿವಾಸಿಗಳಿಗೆ ಈ ದೇವಸ್ಥಾನವು ಅನುಕೂಲವಾಗಿರುವುದರಿಂದ ಸದರಿ ಸಂಸ್ಥೆಯವರು ಗುತ್ತಿಗೆಗೆ ಕೋರಿರುತ್ತಾರೆ. ಇದರ ಬಗ್ಗೆ ಈಗಾಗಲೇ ಸ್ಥಳೀಯ ನಗರ ಪಾಲಿಕೆ ಸದಸ್ಯರು ಸಹ ಶಿಫಾರಸ್ಸು ಪತ್ರವನ್ನು ಬರೆದು ಸದರಿ ಶ್ರೀ. ಮಾರಮ್ಮ ದೇವಸ್ಥಾನ ಸೇವಾ ಟ್ರಸ್ಟ್ (ರಿ) 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಕೋರಿರುತ್ತಾರೆ, ಸದರಿ ಟ್ರಸ್ಟ್ ಕೋರಿರುವ ಜಾಗವು 337 ಚದರ ಅಡಿ ವಿಸ್ತೀರ್ಣವಾಗಿರುತ್ತದೆ.

ದಿನಾಂಕ:19–08–2011 ರಂದು ಸ್ಥಳ ಪರಿಶೀಲಿಸಲಾಯಿತು. ಈ ದೇವಸ್ಥಾನವ್ರೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ನಿವಾಸಿಗಳ ಮನೆಗಳ ಮಧ್ಯದಲ್ಲಿದ್ದು, ಅನೇಕ ವರ್ಷಗಳ ಹಿಂದಿನಿಂದ ಪೂಜಾ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದ್ದಾಗಿ ತಿಳಿದಿದ್ದು. 5 ವರ್ಷಗಳ ಅವಧಿಗೆ ಗುತ್ತಿಗೆ ನೀಡಬಹುದೆಂದು ಉಪ ಆಯುಕ್ತರು (ಆಸ್ತಿಗಳು) ರವರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

17–04–2007ರ ಸರ್ಕಾರದ ಮಾರ್ಗಸೂಚಿ ದರದಂತೆ ಲೆಕ್ಕಚಾರ ಮಾಡಲಾಗಿ ಶ್ರೀ.ಮಾರಮ್ಮ ದೇವಸ್ಥಾನದ ವಿಸ್ತೀರ್ಣ 337 ಚದರ ಅಡಿಗಳಾಗಿದ್ದು, ಚದರ ಅಡಿ ಒಂದಕ್ಕೆ ರೂ.2300/– ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ 2300x337=7,75,100/– ರೂ ಗಳಾಗುತ್ತದೆ. ಇದರ ಶೇ 10% ರಷ್ಟು ವಾರ್ಷಿಕ ಗುತ್ತಿಗೆ ಮೊತ್ತ ರೂ.77,510/– ಗಳಾಗುತ್ತದೆ. ಮಾಸಿಕ ಬಾಡಿಗೆ ರೂ.6460/– ಗಳಾಗುತ್ತದೆ.

ದಿನಾಂಕ:01–03–2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವವರು ಎಂಬುದಾಗಿ ಇರುತ್ತದೆ.

ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಸದರಿ ಶ್ರೀ.ಮಾರಮ್ಮ ಟೆಂಪಲ್ ಸೇವಾ ಟ್ರಸ್ಟ್ (ರಿ) ರವರಿಗೆ ಗುತ್ತಿಗೆ ಕರಾರು ನೋಂದಾಯಿಸಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಮಾನ್ಯ ಆಯುಕ್ತರ ದಿನಾಂಕ:30–08–2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 18.10.2011ರ ನಿರ್ಣಯ.

**<u>ನಿರ್ಣಯ:</u>– ನಗರ ಯೋಜನೆ ಮತ್ತು ಆಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 18–10–2011ರ ನಿರ್ಣಯವನ್ನು ಒಪ್ಪುತ್ತಾ ಮಾಸಿಕ ರೂ.300/– (ಮೂರು ನೂರು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***<u>34]. ವಿಷಯದ ಸಂಖ್ಯೆ :–ತೆಆಸ್ಥಾಸ/365/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/95/11–12, ದಿನಾಂಕ : 20–09–2011ರಲ್ಲಿ ವಿವರಿಸಿರುವಂತೆ, ಮಲ್ಲೇಶ್ವರಂ 3ನೇ ಅಡ್ಡರಸ್ತೆಯಲ್ಲಿರುವ ನಗರ ಪಾಲಿಕೆಯ 20X10 ಅಡಿಗಳ ಜಾಗವನ್ನು ಶ್ರೀ.ಲಕ್ಷ್ಮೀವೆಂಕಟೇಶ್ವರ ಮತ್ತು ಗಣಪತಿ ಹಾಗೂ ಶನಿದೇವರ ವಿಗ್ರಹಕ್ಕೆ ಗರ್ಭಗುಡಿ ಕಟ್ಟಿಸಲು ಶ್ರೀ.ಲಕ್ಷ್ಮೀವೆಂಕಟೇಶ್ವರ ಟ್ರಸ್ಟ್ ರವರಿಗೆ ವಾರ್ಷಿಕ ಗುತ್ತಿಗೆ ರೂ.50/– ರಂತೆ ದಿನಾಂಕ:27–08–1997 ರಲ್ಲಿ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದ್ದು, ಗುತ್ತಿಗೆ ಅವಧಿಯು ಮುಗಿದಿರುತ್ತದೆ. ಗುತ್ತಿಗೆ ಅವಧಿಯನ್ನು ನವೀಕರಿಸಲು ಸದರಿ ಸಮಿತಿಯು ದಿನಾಂಕ: 26–06–2002ರಲ್ಲಿ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಸಂಬಂಧಪಟ್ಟ ಸ್ಥಾಯಿ ಸಮಿತಿಯು ಗುತ್ತಿಗೆ ಅವಧಿಯನ್ನು 3 ವರ್ಷಗಳಿಗೆ ವಿಸ್ತರಿಸಿ ಸದರಿ ಜಾಗಕ್ಕೆ ಮಾರುಕಟ್ಟೆ ರೂ.2,80,000/– ಅಥವಾ ಮಾಸಿಕ ಗುತ್ತಿಗೆ ರೂ.2,333/– ನಿಗಧಿಪಡಿಸಿ ತೀರ್ಮಾನ ತೆಗೆದುಕೊಂಡಿರುತ್ತದೆ. ಅದರಂತೆ ಸದರಿ ದೇವಸ್ಥಾನ ಸಮಿತಿಯು ದಿನಾಂಕ:15–08–2006ರ ನಂತರದಲ್ಲಿ ನಗರ ಪಾಲಿಕೆಗೆ ಮನವಿ ಸಲ್ಲಿಸಿ ತಮ್ಮ ಸಂಸ್ಥೆಗೆ ನಿಗಧಿಪಡಿಸಿರುವ ಗುತ್ತಿಗೆ ಮೊತ್ತವು ಬಹಳ ಜಾಸ್ತಿಯಾಗಿದ್ದು, ತಮ್ಮ ಸಂಸ್ಥೆ ಇದನ್ನು ಭರಿಸಲು ಸಾಧ್ಯವಿಲ್ಲವೆಂದು ತಿಳಿಸಿ ಗುತ್ತಿಗೆ ಮೊತ್ತವನ್ನು ಕಡಿಮೆಗೊಳಿಸಿ ಗುತ್ತಿಗೆ ಅವಧಿಯನ್ನು ನವೀಕರಿಸಬೇಕೆಂದು ಕೋರಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 200 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:17–04–2007ರ ಸರ್ಕಾರದ ಮಾರ್ಗಸೂಚಿ ದರದಂತೆ, ಚದರ ಅಡಿ ಒಂದಕ್ಕೆ ರೂ.3000/– ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, ರೂ.3000X200=6,00,000/– ಒಟ್ಟು ಮೊತ್ತಗಳಾಗುತ್ತದೆ. ಶೇ:10% ವಾರ್ಷಿಕ ಗುತ್ತಿಗೆ ಮೊತ್ತ ರೂ.60,000/– ಗಳಾಗಲಿದ್ದು, ಮಾಸಿಕ ಗುತ್ತಿಗೆ ದರ ರೂ.5000/– ಗಳಾಗುತ್ತದೆ.

ದಿನಾಂಕ:01–03–2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವವರು ಎಂಬುದಾಗಿ ಇರುತ್ತದೆ.

ಈ ಹಿನ್ನೆಲೆಯಲ್ಲಿ ಗುತ್ತಿಗೆ ಅವಧಿಯನ್ನು ಮುಂದಿನ 5 ವರ್ಷಗಳಿಗೆ ನವೀಕರಿಸಲು ಹಾಗೂ ಸೂಕ್ತ ಮಾಸಿಕ ಗುತ್ತಿಗೆ ದರವನ್ನು ನಿಗದಿಪಡಿಸುವ ಬಗ್ಗೆ ಮುಂದಿನ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮೇರೆಗೆ, ಗುತ್ತಿಗೆ ಅವಧಿಯನ್ನು ನವೀಕರಿಸುವ ಮಾನ್ಯ

ಆಯುಕ್ತರ ದಿನಾಂಕ: 20–09–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 18.10.2011ರ ನಿರ್ಣಯ.

**ನಿರ್ಣಯ:– ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 18–10–2011 ರ ನಿರ್ಣಯವನ್ನು ಒಪ್ಪುತ್ತಾ ಮಾಸಿಕ ರೂ.300/– (ಮೂರು ನೂರು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## 35]. ವಿಷಯದ ಸಂಖ್ಯೆ :–ತೆಆಸ್ಥಾಸ/370/2011–12

ಆಯುಕ್ತರ ಟಿಪ್ಪಣಿ ದಿನಾಂಕ ಃ 05–11–2011ರಲ್ಲಿ ವಿವರಿಸಿರುವಂತೆ, Improvement to Roads and Drains in Swathntra nagara of K.R.Pura Sub div.in 47 (Est. Rs.100.00 lakhs). 2009–10ನೇ ಸಾಲಿನಲ್ಲಿ ಶೇ.22.75 ಅನುದಾನದಡಿ ನೀಡಲಾಗುತ್ತಿದ್ದ 047-10-N-W-E-R-IM-001. ಕಾಮಗಾರಿ ಸಂಕೇತವನ್ನು ರದ್ದುಪಡಿಸಿ 2010–11ನೇ ಸಾಲಿನಲ್ಲಿ 3 ಬದಲಿ ಕಾಮಗಾರಿಗಳನ್ನು ಕೈಗೊಳ್ಳುವುದರ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಲಾಗಿದ್ದು, ಸಮಿತಿಯು ವಿಷಯದ ಸಂಖ್ಯೆ 258/2010–11 ದಿನಾಂಕ 14–03–2011 ರ ನಡವಳಿಯಲ್ಲಿ 2009–10ರ ಹಳೆ ಕಾಮಗಾರಿಯನ್ನು ನಿರ್ವಹಿಸಲು ತೀರ್ಮಾನಿಸಿದೆ.

ಪ್ರಸ್ತುತ ಶ್ರೀಮತಿ.ಕೆ.ಪೂರ್ಣಿಮ, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ಸಂಖ್ಯೆ 53 ಇವರು ಪತ್ರ ನೀಡಿ ಸದರಿ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮರು ಮಂಡಿಸಲು ಕೋರಿರುತ್ತಾರೆ.

ಸದರಿ ಪ್ರಸ್ತವನೆಯನ್ನು 2011–12ನೇ ಸಾಲಿನ ಕರಡು ಆಯವ್ಯಯದ ಪುಟ ಸಂಖ್ಯೆ (171) ರಲ್ಲಿ ಪಿ1878 "ಶೇ.22.75% ಕಾಮಗಾರಿಗಳು ಪಿ1878" ಲೆಕ್ಕಶೀಷಿಕೆಯಡಿ ಮುಂದುವರೆದ ಕಾಮಗಾರಿಗಳು ಅಡಿ ಮೀಸಲಿರಿಸಿರುವ ರೂ.15030.00 ಲಕ್ಷಗಳಲ್ಲಿ 3 ಬದಲಿ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ.100.00 ಲಕ್ಷಗಳಿಗೆ ಅನುಮೋದನೆ ಹಾಗೂ ಜಾಬ್ ನಂಬರ್ ನೀಡುವ ಬಗ್ಗೆ ಮರು ಪರಿಶೀಲಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

| Sl No. | Name of Work | Est. Amount |
|---|---|---|
| 1 | Construction of CC Drain & Road at Chikkadevasandra in Basavanapura in W.N.53. | Rs.50.00 lakhs |
| 2 | Construction of CC Drain & Road at Rajivnagar in Basavanapura in W.N.53. | Rs.25.00 lakhs |
| 3 | Construction of CC Drain & Road at Priyankanagra in Basavanapura in W.N.53. | Rs.50.00 lakhs |

**–ಮುಂದೂಡಿದೆ–**

## 36]. ವಿಷಯದ ಸಂಖ್ಯೆ :–ತೆಆಸ್ಥಾಸ/373/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಜಆ(ಕ)ಪಿಎಸ್ಆರ್(4)98/2011–12, ದಿನಾಂಕ 05–11–2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಶ್ರೀ ಎ. ಎಚ್. ಬಸವರಾಜು, ವಾರ್ಡ್ ನಂ. 180 ರ ನಗರ ಪಾಲಿಕೆ ಸದಸ್ಯರು ಹಾಗೂ ಅಧ್ಯಕ್ಷರು ಶ್ರೀ ಬನಶಂಕರಿ ದೇವಸ್ಥಾನ ಅಭಿವೃದ್ಧಿ ಸಮಿತಿ ಬನಶಂಕರಿ ಸಾಮೂಹಿಕ ವಿವಾಹ ವೇದಿಕೆ, ನಂ. 294, ಶ್ರೀ ಬನಶಂಕರಿ ನಿಲಯ, 7ನೇ ಮುಖ್ಯ ರಸ್ತೆ, ಭವಾನಿ ನಗರ, ಬನಶಂಕರಿ 2ನೇ ಹಂತ, ಬೆಂಗಳೂರು – 560 070. ರವರು ಸಲ್ಲಿಸಿರುವ ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ಶ್ರೀ ಬನಶಂಕರಿ ದೇವಸ್ಥಾನದ ಆವರಣದಲ್ಲಿ 12 ವರ್ಷಗಳಿಂದ ಉಚಿತ ಸಾಮೂಹಿಕ ವಿವಾಹವನ್ನು ನಡೆಸುತ್ತಾ ಬರುತ್ತಿದ್ದು, ದಿನಾಂಕ : 02–02–2012 ರಂದು 13ನೇ ವರ್ಷದ ಉಚಿತ ಸಾಮೂಹಿಕ ವಿವಾಹವನ್ನು ನಡೆಸಲಿದ್ದು, ವಿವಾಹ ಸಮಯದಲ್ಲಿ ವಧು–ವರರಿಗೆ ಮಾಂಗಲ್ಯ, ಬಟ್ಟೆ, ಊಟದ ವ್ಯವಸ್ಥೆ ಇತ್ಯಾದಿಗಳನ್ನು ಸಂಬಂಧಪಟ್ಟ ವೇದಿಕೆ ಭರಿಸಲಿದ್ದು, ಇದಕ್ಕೆ ಸುಮಾರು ರೂ. 15.00 ಲಕ್ಷಗಳ ವೆಚ್ಚವಾಗಲಿದ್ದು, ಈ ಕಾರ್ಯಕ್ರಮಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2011–12 ನೇ ಸಾಲಿನ ಆಯವ್ಯಯದ ಸಂಘ ಸಂಸ್ಥೆಗೆ ನೀಡುವ ಅನುದಾನದಲ್ಲಿ ರೂ. 10.00 ಲಕ್ಷಗಳನ್ನು ಧನ ಸಹಾಯ ಕೋರಿರುತ್ತಾರೆ. ಸದರಿಯವರ ಮನವಿಯನ್ನು ಪರಿಗಣಿಸಿ ಧನ ಸಹಾಯ ಮಂಜೂರಾತಿ ಬಗ್ಗೆ ಸೂಕ್ತ ಪ್ರಸ್ತಾವನೆ ಮಂಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ

ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, **ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50' ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-**

## *37]. ವಿಷಯದ ಸಂಖ್ಯೆ :-ತೆಆಸ್ಥಾಸ/374/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)99/2011-12, ದಿನಾಂಕ : 05-11-2011ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ರಾಜಣ್ಣ, ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕನ್ನಡ ಸಂಘ (ನೋ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೇಂದ್ರ ಕಛೇರಿ ಆವರಣ, ನರಸಿಂಹರಾಜ ರಸ್ತೆ, ಬೆಂಗಳೂರು – 560 002 ರವರು ಮನವಿ ಸಲ್ಲಿಸಿ ತಮ್ಮ ಸಂಘಕ್ಕೆ 2010-11 ನೇ ಸಾಲಿನಲ್ಲಿ ರೂ. 5.00 ಲಕ್ಷಗಳ ಅನುದಾನವನ್ನು ಮೀಸಲಿಟ್ಟಿದ್ದು ಸರಿಯಷ್ಟೆ. ಅದರಂತೆ 2011-12 ನೇ ಸಾಲಿನಲ್ಲೂ ಸಹ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕನ್ನಡ ಸಂಘಕ್ಕೆ ರೂ. 10.00 ಲಕ್ಷಗಳ ಅನುದಾನವನ್ನು ಮೀಸಲಿಡಬೇಕೆಂದು ಹಾಗೂ ಮುಂದಿನ ತಿಂಗಳು ಕನ್ನಡ ರಾಜ್ಯೋತ್ಸವ ಹಮ್ಮಿಕೊಳ್ಳುವ ಪ್ರಯುಕ್ತ ಸದರಿ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ **2010-11 ನೇ** ಸಾಲಿನಲ್ಲಿ **ರೂ. 5.00** ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ**,** ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, **ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50' ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:-ದಿನಾಂಕ : 05-11-2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಘಕ್ಕೆ 2011-12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ರೂ.5.00 (ಐದು) ಲಕ್ಷಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *38]. ವಿಷಯದ ಸಂಖ್ಯೆ :-ತೆಆಸ್ಥಾಸ/376/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)103/2011-12, ದಿನಾಂಕ : 05-11-2011ರಲ್ಲಿ ವಿವರಿಸಿರುವಂತೆ, ಶ್ರೀ ಜಿ. ಮಂಜುನಾಥ್ ರಾಜು, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮನವಿ ಸಲ್ಲಿಸಿ, ಮಾನ್ಯ ಉಪ ಮಹಾಪೌರರ ಪತ್ರವನ್ನು ಲಗತ್ತಿಸುತ್ತಾ, ಸದರಿಯವರು ತಮ್ಮ ಪತ್ರದಲ್ಲಿ ಶ್ರೀಮತಿ ರೂಪಾ ಐಯ್ಯರ್, ವ್ಯವಸ್ಥಾಪಕರ ನಿರ್ದೇಶಕರು, ಇಂಡಿಯಾ ಕ್ಲಾಸಿಕ್ ಆರ್ಟ್ಸ್, ನಂ. 11, 1ನೇ ಕ್ರಾಸ್, 7ನೇ ಮುಖ್ಯರಸ್ತೆ, 7ನೇ ಬ್ಲಾಕ್, 4ನೇ ಹಂತ, ಬನಶಂಕರಿ 3ನೇ ಹಂತ, ಬೆಂಗಳೂರು – 560085. ವತಿಯಿಂದ ಯೂರೋಪ್ ದೇಶದಲ್ಲಿ ಪ್ರಪ್ರಥವಾಗಿ ವಿಶ್ವ ಕನ್ನಡ ಸಮ್ಮೇಳನ ಯೂರೋಪ್ 2011 ಎಂಬ ಕಾರ್ಯಕ್ರಮವನ್ನು 2011 ಅಕ್ಟೋಬರ್ 22 ಮತ್ತು 23 ರಂದು ನಡೆಸಲು ಉದ್ದೇಶಿಸಿರುವ ಮೇರೆಗೆ ಸದರಿ ಕನ್ನಡ ಕಾರ್ಯಕ್ರಮವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರು. 10.00 ಲಕ್ಷ ಬಿಡುಗಡೆ ಮಾಡುವಂತೆ ಕೋರಿರುತ್ತಾರೆಂದು ತಿಳಿಸಿ, ಇಂಡಿಯಾ ಕ್ಲಾಸಿಕ್ ಆರ್ಟ್ಸ್ ರವರಿಗೆ ತುರ್ತಾಗಿ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ. 5.00 ಲಕ್ಷ ಅನುದಾನ ಬಿಡುಗಡೆ ಮಾಡುವ ಬಗ್ಗೆ ಸಮಿತಿಯ ಮುಂದೆ ಸೂಕ್ತ ಟಿಪ್ಪಣಿಯನ್ನು ಮಂಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## *39]. ವಿಷಯದ ಸಂಖ್ಯೆ :–ತೆಲಆಸ್ಥಾಸ/377/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)33/2011–12, ದಿನಾಂಕ : 05–11–2011ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ಗೋಪಿ, ಮಾನ್ಯ ಸದಸ್ಯರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್–110 (ಸಂಪಂಗಿ ರಾಮನಗರ) ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ತನ್ನ ವಾರ್ಡಿನಲ್ಲಿರುವ ಬೆಂಗಳೂರು ಸ್ಕೂಲ್ ಒಲಂಪಿಕ್ಸ್‌ನ ಯಂಗ್‌ಸ್ಟರ್ಸ್ ಸ್ಪೋರ್ಟ್ಸ್ ಪ್ರಮೋಟರ್ಸ್ ಟ್ರಸ್ಟ್ ವತಿಯಿಂದ ದಿನಾಂಕ 13/07/2011 ರಿಂದ 16/07/2011 ರವರೆವಿಗೂ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಬೆಂಗಳೂರು ಅಂತರ ಶಾಲಾ ಒಲಂಪಿಕ್ಸ್ ಕ್ರೀಡಾಕೂಟವನ್ನು ಹಮ್ಮಿಕೊಂಡಿರುತ್ತಾರೆಂದು ತಿಳಿಸಿ, ತಮ್ಮ ಅನುದಾನದಡಿಯಲ್ಲಿ ಇವರಿಗೆ 2 ಲಕ್ಷದ ಆರ್ಥಿಕ ನೆರವು ನೀಡಿ ಕ್ರೀಡಾ ಕೂಟವೂ ಯಶಸ್ವಿಯಾಗಿ ನಡೆಸಲು ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಶ್ರೀ ರಮೇಶ್ ಎನ್. ಆರ್. ಕಾರ್ಯದರ್ಶಿ, ಯಂಗ್‌ಸ್ಟರ್ಸ್ ಸ್ಪೋರ್ಟ್ಸ್ ಪ್ರಮೋಟರ್ಸ್ ಟ್ರಸ್ಟ್, ನಂ. 17/ಯು, ನೆಲ ಮಹಡಿ, 3ನೇ ಕ್ರಾಸ್, 5ನೇ ಮುಖ್ಯರಸ್ತೆ, ಎಸ್. ಆರ್. ನಗರ, ಬೆಂಗಳೂರು – 560 027 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ದಿನಾಂಕ 13/07/2011 ರಿಂದ 16/07/2011 ರವರೆವಿಗೂ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಬೆಂಗಳೂರು ಅಂತರ ಶಾಲಾ ಒಲಂಪಿಕ್ಸ್ ಕ್ರೀಡಾಕೂಟವನ್ನು ಹಮ್ಮಿಕೊಂಡಿದ್ದು, ಬೆಂಗಳೂರಿನ ಸುಮಾರು 20 ಶಾಲಾ ಕಾಲೇಜುಗಳಿಂದ 3500 ಕ್ರೀಡಾಪಟುಗಳು ಭಾಗವಹಿಸಲಿದ್ದು, ಅಥ್ಲೆಟಿಕ್ಸ್, ಸ್ಕೂಲ್ ಮ್ಯಾರಥಾನ್, ಬ್ಯಾಸ್ಕೆಟ್ ಬಾಲ್, ವಾಲಿಬಾಲ್, ಟೇಬಲ್ ಟೆನಿಸ್, ಖೋಖೋ, ಕಬ್ಬಡಿ, ಥ್ರೋಬಾಲ್, ಡಾಡ್ಜ್ ಬಾಲ್ ಮುಂತಾದ ಕ್ರೀಡೆಗಳನ್ನು ನಡೆಸುತ್ತಿದ್ದು ಅಂದಾಜು ರೂ. 5.00 ಲಕ್ಷಗಳು ವೆಚ್ಚವಾಗುತ್ತಿರುವುದಾಗಿ ತಿಳಿಸಿ ಪಾಲಿಕೆ ವತಿಯಿಂದ ಆರ್ಥಿಕ ಸಹಾಯ ನೀಡಬೇಕಾಗಿ ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ **ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ,** ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:–ದಿನಾಂಕ : 05–11–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ರೂ.25,000/– (ಇಪ್ಪತ್ತೈದು ಸಾವಿರ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *40]. ವಿಷಯದ ಸಂಖ್ಯೆ :–ತೆಲಆಸ್ಥಾಸ/378/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)105/2011–12, ದಿನಾಂಕ : 08–11–2011ರಲ್ಲಿ ವಿವರಿಸಿರುವಂತೆ, ಶ್ರೀ ಜನಾರ್ಧನ್ ರಾಜೇ ಅರಸ್, ಕಾರ್ಯದರ್ಶಿ ಸಹನಾ ಅಂಗವಿಕಲರ ಸೇವಾ ಪ್ರತಿಷ್ಠಾನ (ರಿ), ನಂ. 278, 4ನೇ 'ಬಿ' ಕ್ರಾಸ್, 10ನೇ ಮುಖ್ಯರಸ್ತೆ, ಹಂಪಿನಗರ (ಆರ್.ಪಿ.ಸಿ. ಲೇಔಟ್) ವಿಜಯನಗರ, 2ನೇ ಹಂತ, ಬೆಂಗಳೂರು – 560 104. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಕಳೆದ ಸಾಲಿನಲ್ಲಿ ತಮ್ಮ ಸಂಸ್ಥೆಗೆ ಧನ ಸಹಾಯ ನೀಡಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ನೆರವು ನೀಡಿ ಸಹಕರಿಸಿದ್ದಕ್ಕಾಗಿ ಪಾಲಿಕೆಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಸಹನಾ ಅಂಗವಿಕಲರ ಸೇವಾ

ಪ್ರತಿಷ್ಠಾನವು ಎಲ್ಲಾ ರೀತಿಯ ಅಂಗವಿಕಲರಿಗೆ ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಪುನಶ್ಚೇತನ ಇತ್ಯಾದಿ ಕ್ಷೇತ್ರಗಳಲ್ಲಿ ಶ್ರಮಿಸುತ್ತಾ ಬಂದಿದೆ. ಅಂಧರಿಗೆ ಬ್ರೈಲ್ ಪಠ್ಯ ಪುಸ್ತಕಗಳನ್ನು ಮುದ್ರಿಸಿ ಪೂರ್ವ, ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಶಿಕ್ಷಣ ಪಡೆಯುತ್ತಿರುವ ಅಂಧ ವಿದ್ಯಾರ್ಥಿ ವೃಂಧದವರಿಗೆ ಉಚಿತವಾಗಿ ಬ್ರೈಲ್ ಪಠ್ಯ ಪುಸ್ತಕವನ್ನು ಒದಗಿಸುತ್ತಿದೆ ಎಂದು ಕಾಲೇಜು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಉಚಿತ ವಸತಿ ನಿಲಯ ಸೌಕರ್ಯ ಹಾಗೂ ಶೈಕ್ಷಣಿಕವಾಗಿ ಸಹಾಯ ಹಾಗೂ ನೆರವು ನೀಡುವುದು ತಮ್ಮ ಧ್ಯೇಯೋದ್ದೇಶಗಳಲ್ಲಿ ಒಂದಾಗಿರುತ್ತದೆ. ಅಲ್ಲದೆ ತಮ್ಮ ಶಾಖೆಗಳನ್ನು ಧಾರವಾಡ, ಚಿಕ್ಕಮಗಳೂರು, ಹಾಗೂ ಮೈಸೂರು ಜಿಲ್ಲೆಗಳಲ್ಲಿ ಶಾಖೆಗಳನ್ನು ಸ್ಥಾಪಿಸಿ ಬ್ರೈಲ್ ಮುದ್ರಣಾಲಯ, ವಸತಿ ನಿಲಯ ಹಾಗೂ ಗಣಕಯಂತ್ರ ತರಬೇತಿ ಇತ್ಯಾದಿ ಸೇವೆಗಳನ್ನು ಸಲ್ಲಿಸುತ್ತಿರುತ್ತೇವೆಚಿದು ತಮ್ಮೆಲ್ಲ ಚಟುವಟಿಕೆ ಕಾರ್ಯಗಳಿಗೆ ಸಾರ್ವಜನಿಕರ ದೇಣಿಗೆಯನ್ನೇ ಆವಲಂಬಿಸಬೇಕಾಗಿರುತ್ತದೆ. ಏಕೆಂದರೆ ತಮ್ಮ ಸಂಸ್ಥೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಯಾವುದೇ ರೀತಿಯ ಧನ ಸಹಾಯ ದೊರೆಯುತ್ತಿಲ್ಲವೆಂದು, ವಾರ್ಷಿಕವಾಗಿ ತಮ್ಮ ಸಂಸ್ಥೆಗೆ ಕನಿಷ್ಠ 30,06,265 (ಮೂವತ್ತು ಲಕ್ಷದ ಆರು ಸಾವಿರದ ಇನ್ನೂರ ಅರವತ್ತೈದು) ರೂ.ಗಳಷ್ಟು ಅವಶ್ಯಕವಿರುವುದರಿಂದ ತಮ್ಮ ಪಾಲಿಕೆಯ ವತಿಯಿಂದ ಕನಿಷ್ಠ 20,000,00 ರೂ.ಗಳನ್ನಾದರೂ ಧನ ಸಹಾಯ ನೀಡಿ ಅಂಗವಿಕಲರ ಶ್ರೇಯೋಭಿವೃದ್ಧಿಗೆ ಹಾಗೂ ಅವರ ಉತ್ತಮ ಭವಿಷ್ಯಕ್ಕೆ ಪಾಲಿಕೆಯು ನಾಂದಿಯಾಗಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ **2010–11** ನೇ ಸಾಲಿನಲ್ಲಿ **ರೂ. 1.00 ಲಕ್ಷ**ಗಳ ಅನುದಾನ ಬಿಡುಗಡೆಯಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,

**ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ,** ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50' ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## *41]. ವಿಷಯದ ಸಂಖ್ಯೆ :–ತೆಆಸ್ಥಾಸ/379/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)100/2011–12, ದಿನಾಂಕ : 05–11–2011ರಲ್ಲಿ ವಿವರಿಸಿರುವಂತೆ, ಶ್ರೀ ಎನ್. ದಯಾನಂದ್, ಮಾಜಿ ಉಪ ಮಹಾಪೌರರು ಮನವಿ ಸಲ್ಲಿಸಿ, ಲಾಲ್ ಬಹದ್ದೂರ್ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (ರಿ) ನಂ. 56, ಮಾನಸ ನಿಲಯ, 3ನೇ 'ಎ' ಕ್ರಾಸ್, ಲಾಲ್ ಬಹದ್ದೂರ ನಗರ, ಬೆಂಗಳೂರು – 43 ಸಂಘವು ಸರ್ಕಾರದಲ್ಲಿ ನೊಂದಣಿಯಾಗಿರುತ್ತದೆ ಮತ್ತು ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ. ಅವರುಗಳಿಗೆ ಖರ್ಚಾಗಿರುವುದು ಸಹ ನನಗೆ ದೃಢವಾಗಿರುತ್ತದೆ. ಆದುದರಿಂದ ತಾವುಗಳು ಮೇಲ್ಕಾಣಿಸಿದ ಸಂಘಕ್ಕೆ ಅನುದಾನದ ಅಡಿಯಲ್ಲಿ ಈ ಹಣವನ್ನು ಮಂಜೂರು ಮಾಡಬಹುದು ಈ ಹಣದಿಂದ ಇನ್ನೂ ಹೆಚ್ಚಿನ ಉತ್ಸಾಹದಿಂದ ಕಾರ್ಯಕ್ರಮ ಸಾಮಾಜಿಕ ಕಾರ್ಯಕ್ರಮಗಳನ್ನು ಮತ್ತೆ ನಮ್ಮ ಲಾಲ್ ಬಹದ್ದೂರ ನಗರದ ನಿವಾಸಿಗಳಿಗೆ ಅನುಕೂಲ ಆಗುವ ರೀತಿಯಲ್ಲಿ ನಡೆದುಕೊಳ್ಳುತ್ತಾರೆಂದು ಆದುದರಿಂದ ಪಾಲಿಕೆಯು ಇಂತಹ ಸ್ವಯಂ ಪ್ರೇರಿತ ಸಂಘ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡಬೇಕು ಹಾಗೂ ಸಹಾಯ ಧನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪ್ರಧಾನ ಕಾರ್ಯದರ್ಶಿ, ಲಾಲ್ ಬಹದ್ದೂರ್ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (ರಿ) ರವರು ಮನವಿ ಸಲ್ಲಿಸಿ, ತಮ್ಮ ಸಂಘದ ವತಿಯಿಂದ ದಿ: 15.08.2011 ರಂದು 750 ಬಡವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಣೆ, ಪ್ರೋತ್ಸಾಹಧನ, ಹಾಗೂ ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ ವಿದ್ಯಾರ್ಥಿಗೆ ರೂ. 10,000/– ಸಹಾಯಧನ ಹಾಗೂ ಗಾಂಧಿ ಜಯಂತಿ ಅಂಗವಾಗಿ ಕ್ರೀಡಾ ಸ್ಪರ್ಧೆಗಳನ್ನು ನಡೆಸಿರುವುದಾಗಿ ತಿಳಿಸಿ ಪಾಲಿಕೆ ವತಿಯಿಂದ ರೂ. 4.00 ಲಕ್ಷಗಳ ಧನ ಸಹಾಯ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10

ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***–ಮುಂದೂಡಿದೆ–***

## ***42]. ವಿಷಯದ ಸಂಖ್ಯೆ :–ತೆಆಸ್ಥಾಸ/382/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)ಪಿಆರ್/26/11–12, ದಿನಾಂಕ: 10–06–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ : 08.03.1977ರ ಸರ್ಕಾರಿ ಆದೇಶದಂತೆ ಪೂರ್ವ ವಲಯದಲ್ಲಿ ಬರುವ ಅಕ್ಕಿ ತಿಮ್ಮನಹಳ್ಳಿ, ಟ್ಯಾಂಕ್ ಬಂಡ್‌ನ 5–7.2 ಎಕರೆ ಪ್ರದೇಶವನ್ನು ಕರ್ನಾಟಕ ಹಾಕಿ ಅಸೋಸಿಯೇಷನ್ ಸಂಸ್ಥೆಗೆ ಈ ಕೆಳಕಂಡ ಷರತ್ತಿನ ಮೇಲೆ ವಾರ್ಷಿಕ ಗುತ್ತಿಗೆ ರೂ.100/– ಗಳನ್ನು ವಿಧಿಸಿ ಕರಾರು ನೊಂದಾಯಿಸಿದ ದಿನಾಂಕದಿಂದ 99 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದ್ದು, ದಿನಾಂಕ:22–06–1977ರಲ್ಲಿ ಕರಾರನ್ನು ನೊಂದಾಯಿಸಲಾಗಿರುತ್ತದೆ.

**ಷರತ್ತುಗಳ ವಿವರ**

1. ಗುತ್ತಿಗೆದಾರರು ನೀಡಲಾಗಿರುವ ಪ್ರದೇಶ ಹಾಕಿ ಕ್ರೀಡಾಂಗಣ ನಿರ್ಮಿಸಲು ಉಪಯೋಗಿಸುವುದು ಹೊರತು ಬೇರೆ ಯಾವ ಉದ್ದೇಶಕ್ಕೂ ಉಪಯೋಗಿಸಬಾರದು ಹಾಗೂ ಯಾವುದೇ ರೀತಿಯಲ್ಲಿ ಪರಬಾರೆಯೂ ಸಹ ಮಾಡಬಾರದು.
2. ಪ್ರಸ್ತುತ ಜಾಗದಲ್ಲಿ ಹಾಕಿ ಕ್ರೀಡಾಂಗಣ ನಿರ್ವಹಿಸದೇ ಇದ್ದ ಪಕ್ಷದಲ್ಲಿ ಸದರಿ ಸ್ವತ್ತನ್ನು ಯಾವುದೇ ಪರಿಹಾರ ಕೋರದೆ ಪಾಲಿಕೆಗೆ ಹಿಂದಿರುಗಿಸತಕ್ಕದ್ದು.
3. ಅತ್ಯಾಧುನಿಕ ಕ್ರೀಡಾಂಗಣ ನಿರ್ಮಿಸುವ ಉದ್ದೇಶಕ್ಕಾಗಿ ಆಗಾಗ್ಗೆ ನಿರ್ಮಿಸುವ ಕಟ್ಟಡಗಳ ಹೊರತು ಬೇರೆ ಉದ್ದೇಶಕ್ಕೆ ಉಪಯೋಗಿಸಬಾರದು.
4. ಪ್ರಸ್ತುತ ಜಾಗದ ಯಾವುದೇ ಭಾಗ ಯಾವುದೇ ಅವಧಿಯಲ್ಲಿ ಅವಶ್ಯವಿಲ್ಲವೆನಿಸಿದಲ್ಲಿ ಆ ಭಾಗವನ್ನು ಪರಿಹಾರವಿಲ್ಲದೆ ಪಾಲಿಕೆಗೆ ಹಿಂದಿರುಗಿಸುವುದು.
5. ಗುತ್ತಿಗೆದಾರರು ಪ್ರತಿ ವರ್ಷ ಜೂನ್–30ರ ಒಳಗಾಗಿ ವಾರ್ಷಿಕ ಗುತ್ತಿಗೆ ರೂಪಾಯಿ 100/– ಸಂದಾಯ ಮಾಡುವುದು.
6. ಗುತ್ತಿಗೆದಾರರು ಕರಾರಿನ ಯಾವುದೇ ಷರತ್ತು ಉಲ್ಲಂಘಿಸಿದಲ್ಲಿ ಪಾಲಿಕೆಯು ನೋಟಿಸು ನೀಡಿ ಆಸ್ತಿ ಕಟ್ಟಡಗಳ ಸಮೇತ ಯಾವುದೇ ಪರಿಹಾರ ನೀಡದೆ ವಶಕ್ಕೆ ಪಡೆಯಬಹುದು.
7. ಗುತ್ತಿಗೆದಾರರಿಂದ ಬಾಕಿ ಇರುವ ಮೊತ್ತವನ್ನು ಭೂ–ಕಂದಾಯದ ಬಾಕಿ ಎಂಬುದಾಗಿ ವಸೂಲಿ ಮಾಡಬಹುದು.
8. ಗುತ್ತಿಗೆ ಅವಧಿ ಮುಗಿದ ತರುವಾಯ ಗುತ್ತಿಗೆದಾರನು ಸ್ವತ್ತನ್ನು ಕಟ್ಟಡಗಳ ಸಮೇತ ಪಾಲಿಕೆಯ ವಶಕ್ಕೆ ನೀಡುವುದು. ವಿಫಲವಾದಲ್ಲಿ ಪಾಲಿಕೆಯು ಯಾವುದೇ ನ್ಯಾಯಾಲಯಕ್ಕೆ ಮೊರೆ ಹೋಗದೆ ಪರಿಹಾರವೂ ನೀಡದೆ ಸ್ವತ್ತನ್ನು ವಾಪಸ್ಸು ಪಡೆಯಬಹುದು.

ಕರ್ನಾಟಕ ವಿಧಾನ ಪರಿಷತ್ತು ಅರ್ಜಿ ಸಮಿತಿಗೆ ಶ್ರೀ.ನಾರಾಯಣಸ್ವಾಮಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಮುಖಾಂತರ ದೂರು ಸಲ್ಲಿಸಲಾಗಿದ್ದು, ಇದರಲ್ಲಿ ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯಲ್ಲಿ ಗುತ್ತಿಗೆಗೆ ನೀಡಲಾಗಿರುವ ಷರತ್ತನ್ನು ಉಲ್ಲಂಘಿಸಿರುವುದರಿಂದ ನಿಯಮಾನುಸಾರ ಕ್ರಮ ಕೈಗೊಳ್ಳಬೇಕೆಂದು ಅರ್ಜಿ ಸಮಿತಿಯ ಸಭೆಗಳಲ್ಲಿ ಚರ್ಚಿಸಿದ ತರುವಾಯ ದಿನಾಂಕ 26–04–2011ರಂದು ಉಪ ಆಯುಕ್ತರು (ಆಸ್ತಿಗಳು) ಜಂಟಿ ಆಯುಕ್ತರು (ಪೂರ್ವ) ರವರು ಕರ್ನಾಟಕ ರಾಜ್ಯ ಹಾಕಿ ಅಸೋಸಿಯೇಷನ್‌ಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಪರಿಶೀಲನಾ ವರದಿ ನೀಡಲಾಗಿರುವ ಪ್ರಮುಖ ಅಂಶಗಳು ಈ ಕೆಳಕಂಡಂತೆ ಇವೆ.

ಗುತ್ತಿಗೆಗೆ ನೀಡಿದ ಒಟ್ಟು ವಿಸ್ತೀರ್ಣ 2,49,163 ಚದರ ಅಡಿ ಪೈಕಿ ಕರ್ನಾಟಕ ರಾಜ್ಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯವರು 1997ರಲ್ಲಿ 4ನೇ ರಾಷ್ಟ್ರೀಯ ಕ್ರೀಡಾಕೂಟ ನಡೆದ ಸಂದರ್ಭದಲ್ಲಿ 2 ಸಿಂಥೆಟಿಕ್ ಹಾಕಿ ಪಿಚ್‌ಗಳನ್ನು ನಿರ್ಮಿಸಿ ಇಲಾಖೆಯ 1 ಕಛೇರಿ ಮತ್ತು ಭಾರತೀಯ ಕ್ರೀಡಾ ಪ್ರಾಧಿಕಾರ ನಿರ್ವಹಿಸುವ ವಸತಿ ನಿಲಯ ನಿರ್ಮಿಸಿ 1,62,894 ಚದರ ಅಡಿ ಪ್ರದೇಶ ರಾಜ್ಯ ಸರ್ಕಾರದ ಇಲಾಖೆಯ ನಿಯಂತ್ರಣದಲ್ಲಿ ಈವರೆವಿಗೂ ಇರುತ್ತದೆ.

ಹಾಕಿ ಅಸೋಸಿಯೇಷನ್ ಮತ್ತು ಕ್ರೀಡಾ ಇಲಾಖೆಯ ಮದ್ಯ ಬೈಲಾಟ್ರಲ್ ಎಂಒಯು ತಯಾರಿಸಿ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಗೆ ಸಲ್ಲಿಸಿದ್ದು, ಈವರೆವಿಗೂ ಅನುಮೋದನೆ ದೊರಕಿರುವುದಿಲ್ಲ. ಹಾಕಿ ಅಸೋಸಿಯೇಷನ್‌ರವರು ರಾಜ್ಯ ಸರ್ಕಾರದ ಮಟ್ಟದಲ್ಲಿರುವ ಎಲ್ಲಾ ಸಂಪನ್ಮೂಲಗಳನ್ನು ಸದುಪಯೋಗ ಪಡಿಸಿಕೊಂಡು ತಮ್ಮ ಚಟುವಟಿಕೆಗಳನ್ನು ನಡೆಸುತ್ತಿದೆ.

1996ರಿಂದ ಸಂಘವು ಕ್ಲಬ್ ಹೌಸ್ ಕಾರ್ಯಚಟುವಟಿಕೆಗಳು ಪ್ರಾರಂಭಿಸಿದ್ದು, ಸದಸ್ಯರುಗಳ ಉಪಯೋಗಕ್ಕಾಗಿ ಈಜುಕೊಳ, ಉಪಹಾರ ಮಂದಿರ, ಬಿಲಿಯರ್ಡ್ಸ್, ಮತ್ತು ಸ್ನೂಕರ್ ಆಟದ ಕೊಣೆ, ಕಾರ್ಡ್ಸ್ ಆಟದ ಕೊಣೆ, ವ್ಯಾಯಾಮ ಶಾಲೆ, ಮದ್ಯಪಾನದ ಬಾರ್, ಮತ್ತು ಪಾರ್ಟಿಹಾಲ್‌ಗಳೊಂದಿಗೆ ಕಛೇರಿಗಳ ಕಟ್ಟಡವನ್ನು ಹೊಂದಿದ್ದು, ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಪ್ರದೇಶ ಹೊರತುಪಡಿಸಿ ಉಳಿದ ಪ್ರದೇಶ 86,869 ಚದರ ಅಡಿ ಸಂಘದ ಉಪಯೋಗದಲ್ಲಿರುತ್ತದೆ. ಈ ಪ್ರದೇಶಕ್ಕೆ ಪ್ರತ್ಯೇಕ ಖಾತೆಯು ಹೊಂದಿದ್ದು, ಕಟ್ಟಡ ನಿರ್ಮಾಣಕ್ಕಾಗಿ 2004ರಲ್ಲಿ ನಕ್ಷೆ ಮಂಜುರಾತಿ ಪಡೆದಿರುತ್ತಾರೆ. ಹಾಗೂ ಈವರೆವಿಗೂ ಕರ ಇತ್ಯಾದಿಗಳನ್ನು ಪಾಲಿಕೆಗೆ ಸಂದಾಯ ಮಾಡಿರುತ್ತಾರೆ. 2010-11ನೇ ಸಾಲಿನಲ್ಲಿ ಸಂಘದ ಒಟ್ಟು ವಾರ್ಷಿಕ ಆದಾಯ 72,45,100/- ಗಳಿದ್ದು, ರೂ.66,55,451ರೂ ಗಳು ಖರ್ಚಾಗಿವೆ ಎಂಬುದನ್ನು ದಾಖಲಿಸಿದೆ.

ಗುತ್ತಿಗೆ ಕರಾರಿನ ಷರತ್ತಿನ ಅನ್ವಯ ಸಂಘವು ನೀಡಲಾಗಿರುವ ಪ್ರದೇಶ ಹಾಕಿ ಕ್ರೀಡಾಂಗಣ ನಿರ್ಮಿಸಲು ಮಾತ್ರ ಉಪಯೋಗಿಸಬೇಕು ಬೇರೆ ಯಾವ ಉದ್ದೇಶಕ್ಕು ಉಪಯೋಗಿಸಬಾರದು ಎಂಬುದಾಗಿದೆ. ಈ ರೀತಿ ನಿರ್ವಹಿಸದೆ ಇದ್ದ ಪಕ್ಷದಲ್ಲಿ ಸ್ವತ್ತನ್ನು ಯಾವುದೇ ಪರಿಹಾರ ಕೊಡದೆ ಪಾಲಿಕೆಗೆ ಹಿಂದುರಿಸತಕ್ಕದ್ದು, ಎಂಬುದಾಗಿರುತ್ತದೆ. ಷರತ್ತು ಉಲ್ಲಂಘಿಸಿದಲ್ಲಿ ಪಾಲಿಕೆಯು ನೋಟಿಸ ನೀಡಿ ಆಸ್ತಿ ಕಟ್ಟಡಗಳ ಸಮೇತ ವಶಕ್ಕೆ ಪಡೆಯಬಹುದಾಗಿದೆ.

ಈ ಹಿನ್ನೆಲೆಯಲ್ಲಿ ದಿನಾಂಕ:27-04-2011 ರಂದು ಅಧ್ಯಕ್ಷರು, ಕರ್ನಾಟಕ ರಾಜ್ಯ ಹಾಕಿ ಅಸೋಸಿಯೇಷನ್‌ಗೆ ಕಾರಣ ಕೇಳುವ ನೋಟೀಸ್‌ನ್ನು ಜಾರಿಮಾಡಿ ಉಲ್ಲಂಘನೆ ನಿಮಿತ್ತ ಗುತ್ತಿಗೆ ಕರಾರು ರದ್ದುಪಡಿಸಿ ಕಟ್ಟಡ ಸಮೇತ ಯಾವುದೇ ಪರಿಹಾರವಿಲ್ಲದೇ ಏಕೆ ವಾಪಸ್ಸು ಪಡೆಯಬಾರದು ಎಂಬುದಾಗಿ ವಿವರಣೆ ನೀಡಲು ಕೇಳಲಾಯಿತ್ತು.

ದಿನಾಂಕ:11-05-2011 ರಂದು ಕರ್ನಾಟಕ ರಾಜ್ಯ ಹಾಕಿ ಅಸೋಸಿಯೇಷನ್ ಸಂಸ್ಥೆಯ ಗೌರವ ಕಾರ್ಯದರ್ಶಿಯವರ ಈ ಕಾರಣ ಕೇಳಿ ನೀಡಿರುವ ನೋಟೀಸ್‌ಗೆ ಈ ಕೆಳಕಂಡಂತೆ ಉತ್ತರವನ್ನು ಸಲ್ಲಿಸಿರುತ್ತಾರೆ.

1. ಕಾರ್ಡ್ಸ್ ಆಟಕ್ಕೆ ಸಂಬಂಧಿಸಿದಂತೆ ವಿವರಿಸುತ್ತಾ ಈ ಆಟವು ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ "Leisure Sport", ಎಂಬುದಾಗಿ ಪರಿಗಣಿಸಲಾಗಿರುತ್ತದೆ. ಸಂಸ್ಥೆಯ ಬೈಲಾ ಅನುಸಾರ ಈ ಆಟವನ್ನು ಆಡಲು ಅವಕಾಶ ಕಲ್ಪಿಸಲಾಗಿದೆಯೇ ಹೊರತು ಜೂಜು ಅಥವಾ ವಾಣಿಜ್ಯ ಹಿತದೃಷ್ಟಿಯಿಂದಲ್ಲ ಎಂಬುದಾಗಿ ತಿಳಿಸಿರುತ್ತಾರೆ.
2. ಈ ಸಂಸ್ಥೆಯಲ್ಲಿ ಕ್ಲಬ್ ಹೌಸಿನ ಸೌಕರ್ಯಗಳು ಅಂದರೆ, ಸಾಮಾಜಿಕ ಚಟುವಟಿಕೆಗಳಿಗಾಗಿ ಸಭಾ ಭವನಗಳು ಅತಿಥಿಗಳಿಗೆ ಮತ್ತು ಸಂಸ್ಥೆಯ ಸದಸ್ಯರುಗಳಿಗೆ ಕೊಠಡಿಗಳನ್ನು ಹಾಕಿ ಪಂದ್ಯಾವಳಿ ಮತ್ತು ಕ್ಯಾಂಪ್ ನಡೆಯುವ ಸಮಯದಲ್ಲಿ ಕ್ರೀಡಾಪಟುಗಳ ಅವಶ್ಯಕತೆಗಳಿಗಾಗಿ ಕೇಂದ್ರ ಸರ್ಕಾರದ ಕ್ರೀಡಾ ಮತ್ತು ಸಾಂಸ್ಕೃತಿಕ ಇಲಾಖೆಯ ಮಾರ್ಗಸೂಚಿಯನುಸಾರ ನಿರ್ಮಿಸಿ ನಿರ್ವಹಿಸಲಾಗುತ್ತಿದೆ. ಇದಕ್ಕೆ ಪ್ರತಿ ವರ್ಷ ನೊಂದಾಯಿತ ಕೋಡ್ ಪಡೆದು ಲಕ್ಸರಿ ಟ್ಯಾಕ್ಸ್‌ನ್ನು ಸಹಾ ಪಾವತಿಸಲಾಗುತ್ತಿದೆಯೆಂದು ತಿಳಿಸಿರುತ್ತಾರೆ.
3. 15 ವರ್ಷಗಳ ಹಿಂದೆಯೇ ಅಬಕಾರಿ ಇಲಾಖೆಯ ಪರವಾನಿಗೆ ಪಡೆದು ಆ ಇಲಾಖೆಗೆ ಗುತ್ತಿಗೆ ಕರಾರನ್ನು ಸಹ ನೀಡಿ ಸಂಸ್ಥೆಯ ಸದಸ್ಯರುಗಳ ಉಪಯೋಗಕ್ಕಾಗಿ ಸಾಮಾಜಿಕ ಮತ್ತು "Leisure", ಚಟುವಟಿಕೆಯ ಭಾನವೆಯಿಂದ ಯಾವುದೇ ವಾಣಿಜ್ಯ ಹಿತದೃಷ್ಟಿಯಿಲ್ಲದೇ ಈ ಸೌಲಭ್ಯ ಉಪಯೋಗಿಸಲಾಗುತ್ತಿದೆ.
4. ಈ ಚಟುವಟಿಕೆಗಳು ಕ್ರೀಡಾ ಪೂರಕವಾಗಿದ್ದು, ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅನುಮೋದನೆಗಳನ್ನು ಪಡೆದು ಗುತ್ತಿಗೆಗೆ ನೀಡಲಾಗಿರುವ ಪ್ರದೇಶದ ಅಲ್ಪ ಪ್ರದೇಶವನ್ನು ಉಪಯೋಗಿಸಲಾಗುತ್ತಿದೆ. ಇದು ಗುತ್ತಿಗೆ ಕರಾರಿನ ಉಲ್ಲಂಘನೆಯಾಗುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಹಾಗೂ ಈ ಕಾರ್ಯಗಳು ಉದ್ದೇಶ

ಪೂರ್ವಕವಾಗಿ ಮಾಡದೇ ಇರುವುದರಿಂದ ಇದನ್ನು ಹಾಕಿ ಆಟದ ಬೆಳವಣಿಗೆಯ ದೃಷ್ಠಿಯಿಂದ ಮಾಡಲಾಗಿರುವುದರಿಂದ ವಿಶಾಲ ಮನೋಭಾವನೆಯಿಂದ ಈ ವಿವರಣೆಯನ್ನು ಪರಿಗಣಿಸಿ ಕರ್ನಾಟಕದಲ್ಲಿ ಹಾಕಿ ಆಟಕ್ಕೆ ಪ್ರೋತ್ಸಾಹ ನೀಡುವಲ್ಲಿ ಸಹಕಾರ ನೀಡಲು ಕೋರಿರುತ್ತಾರೆ.

ಮೇಲಿನ ವಿವರಣೆ ಪರಾಮರ್ಶಿಸಲಾಗಿ ಗುತ್ತಿಗೆ ಕರಾರು ಪತ್ರದಲ್ಲಿರುವ ನಿಬಂಧನೆಗಳಲ್ಲಿ ನೀಡಲಾಗಿರುವ ಪ್ರದೇಶ ಹಾಕಿ ಕ್ರೀಡಾಂಗಣ ನಿರ್ಮಿಸಲು ಉಪಯೋಗಿಸಬೇಕೇ ಹೊರತು ಬೇರೆ ಯಾವ ಉದ್ದೇಶಕ್ಕೂ ಬಳಸಬಾರದಾಗಿದ್ದು, ಹಾಕಿ ಸಂಸ್ಥೆಯು ನೀಡಿರುವ ವಿರಣೆಯು ಮನವರಿಕೆಯಾಗುವಂತಹದು ಇರುವುದಿಲ್ಲ.

ಆದುದರಿಂದ ಗುತ್ತಿಗೆ ರದ್ದು ಪಡಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು ಅವಶ್ಯಕವಾಗಿರುತ್ತದೆ. ಗುತ್ತಿಗೆಯ ಪಾಲಿಕೆಯ ಠರಾವಿನ ನಂತರ ಸರ್ಕಾರಿ ಆದೇಶದಂತೆ ಮಂಜೂರಾತಿ ನೀಡಿರುವುದರಿಂದ ಸಂಬಂಧಪಟ್ಟ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ನಿರ್ಣಯದೊಂದಿಗೆ ಗುತ್ತಿಗೆ ರದ್ದು ಪಡಿಸಲು ಸರ್ಕಾರಕ್ಕೆ ಪ್ರಸ್ತಾಪಿಸಬಹುದೆಂದು ಮಂಡಿಸಿರುವ ಆಯುಕ್ತರ ಟಿಪ್ಪಣಿ ಮೇರೆಗೆ ಸ್ಥಳ ಪರಿಶೀಲಿಸಲಾಗಿ ಸದರಿ ಸಂಸ್ಥೆಯವರು ಲಾಭದಾಯಕವಾದ ಚಟುವಟಿಕೆಗಳನ್ನು ನಡೆಸುತ್ತಿದ್ದು, ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ದಿನಾಂಕ : 10–06–2011ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ಗುತ್ತಿಗೆ ದರವನ್ನು ವಾರ್ಷಿಕ ಕನಿಷ್ಠ 18 ಲಕ್ಷ ರೂ.ಗಳಿಗೆ ಹೆಚ್ಚಿಸುವ ಷರತ್ತಿಗೊಳಪಡಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 18.10.2011ರ ನಿರ್ಣಯ.

**–ಮುಂದೂಡಿದೆ–**

## *43]. ವಿಷಯದ ಸಂಖ್ಯೆ :–ತೆಆಸ್ಥಾಸ/383/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/222/10–11, ದಿನಾಂಕ: 29–08–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀಮತಿ. ಲಕ್ಷ್ಮಮ್ಮ ಕೋಂ ವೆಂಕಟಪ್ಪ, ಬೆಂಗಳೂರು–85 ರವರು ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನ ಮಾರಾಟ ಮಾಡಲು 5ನೇ ಮುಖ್ಯರಸ್ತೆ, 17ನೇ ಬಿ ಅಡ್ಡರಸ್ತೆ, ಬನಶಂಕರಿ 2ನೇ ಹಂತದಲ್ಲಿ 12ಥ12 ಅಡಿಯ ವಿಸ್ತೀರ್ಣದ ಜಾಗವನ್ನು ಸುಮಾರು 6 ರಿಂದ 7 ವರ್ಷಗಳ ಕಾಲ ಹಾಲಿನ ಬೂತ್ ಅಳವಡಿಸಲು ಗುತ್ತಿಗೆ ನೀಡಲು ಕೋರಿರುತ್ತಾರೆ.

ಉಪ ಪೊಲೀಸ್ ಕಮೀಷನರ್, ಸಂಚಾರಿ ಪಶ್ಚಿಮ ವಿಭಾಗ, ಬೆಂಗಳೂರು ನಗರ ರವರು ದಿ:29–06–2010 ರಂದು ನೀಡಿರುವ ನಿರಾಕ್ಷೇಪಣಾ ಪತ್ರ, ಸ್ಥಳ ನಕ್ಷೆ ಹಾಗೂ ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಹಾಲು ಒಕ್ಕೂಟ (ನಿ) ರವರು ನೀಡಿರುವ ಮಂಜೂರಾತಿ ಪತ್ರವನ್ನು ಸಲ್ಲಿಸಿದ್ದು, ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಬನಶಂಕರಿ) ಉಪವಿಭಾಗ ರವರು ಸದರಿ ಜಾಗದಲ್ಲಿ ಹಾಲಿನ ಬೂತ್ ಇಡಲು ನಿಯಮಾನುಸಾರ ಮತ್ತು ನಿಬಂಧನೆ ಒಳಪಡಿಸಿ ಮಂಜೂರು ಮಾಡಲು ನಕ್ಷೆಯಲ್ಲಿ ಗುರುತಿಸಿ, ಶಿಫಾರಸ್ಸು ಮಾಡಿರುತ್ತಾರೆ.

ಅರ್ಜಿದಾರರ ಮನವಿಯಂತೆ, ಕೋರಿರುವ ಸ್ಥಳವನ್ನು 6 ರಿಂದ 7 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)ಖಖರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ, ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಹಾಗೂ 5 ವರ್ಷ ಮೇಲ್ಪಟ್ಟ ಅವಧಿಗೆ ಸರ್ಕಾರಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ (ಕಂ)/ಪಿ.ಆರ್/115/01–02, ದಿನಾಂಕ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ಉದ್ದೇಶಕ್ಕೆ ರೂ.4,900/–ಗಳಿದ್ದು, ಅರ್ಜಿದಾರರುಗಳು ಕೋರಿರುವ 12ಥ12 ಅಡಿಗಳ ಜಾಗವು 144 ಚ.ಅಡಿಗಳಾಗುತ್ತದೆ. ಇದರಂತೆ 144ಥ4900 = 7,05,600/– ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ 70,560/– ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 5,880/– ರೂ.ಗಳಾಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ಬೆಂಗಳೂರು, ದಿನಾಂಕ:02–06–2003ರ ಮಾರ್ಗ ಸೂಚಿಯಲ್ಲಿ ಪಾಲಿಕೆ ಸ್ವತ್ತುಗಳನ್ನು ಕ್ರಯದ ಆಧಾರದ ಮೇಲೆ ನೀಡಿದಲ್ಲಿ, ಮಾರುಕಟ್ಟೆ ದರ ಹಾಗೂ ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂದು ಇರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ:ನಅಇ/222/ಎಂ.ಎನ್.ವೈ/2008, ದಿನಾಂಕ:03–09–2009ರ ಅನುಸಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸರಹದ್ದಿನಲ್ಲಿ ಬರುವ ಸಾರ್ವಜನಿಕ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ

ನೀಡುವುದಾಗಲಿ ಅಥವಾ ಮಾರಾಟ ಮಾಡುವ ಬದಲಾಗಿ ಸರ್ಕಾರವೇ ಸೂಕ್ತವಾಗಿ ಅಭಿವೃದ್ಧಿಪಡಿಸುವ ಬಗ್ಗೆ ಸಲಹೆ ನೀಡಲು ಮುಖ್ಯ ಕಾರ್ಯದರ್ಶಿಯರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಅನುಮೋದನೆ ಪಡೆಯಬೇಕಾಗುತ್ತದೆ.
ಈ ಹಿನ್ನೆಲೆಯಲ್ಲಿ ಶ್ರೀಮತಿ.ಲಕ್ಷ್ಮಮ್ಮ ರವರಿಗೆ ಹಾಲಿನ ಮಾರಾಟ ಮಳಿಗೆ ಸ್ಥಾಪನೆಗೆ ಜಾಗವನ್ನು ಗುತ್ತಿಗೆ ನೀಡುವ ಬಗ್ಗೆ ಪ್ರಸಕ್ತ ಸರ್ಕಾರದ ಮಾರ್ಗಸೂಚಿ ದರಗಳನ್ವಯ ಗುತ್ತಿಗೆ ದರವನ್ನು ನಿಗದಿಪಡಿಸುವ ಷರತ್ತಿನೊಂದಿಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಮಂಡಿಸಿರುವ ದಿನಾಂಕ: 29-08-2011ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 18.10.2011ರ ನಿರ್ಣಯ.

***ನಿರ್ಣಯ :-*** **ದಿನಾಂಕ : 18-10-2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಮಾರ್ಪಡಿಸಿ ಮಾಸಿಕ ರೂ.600/- (ಆರುನೂರು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ 5 (ಐದು) ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.**

## ***441. ವಿಷಯದ ಸಂಖ್ಯೆ :-ತೆಆಸ್ಥಾಸ/384/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/09/11-12, ದಿನಾಂಕ: 27-08-2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್-152, ತಾವರೆಕೆ, ಹೊಸೂರು ರಸ್ತೆ, ಜೋಗಿ ಕಾಲೋನಿಯ ಸಂಖ್ಯೆ:9 15.5X18 ಅಡಿಗಳ ವಿಸ್ತೀರ್ಣದ ಸ್ವತ್ತನ್ನು ಶ್ರೀ. ನಾಗರಾಜ್ ಮತ್ತು ಶ್ರೀ. ರಾಮದಾಸ್ ಇಬ್ಬರೂ ಹಕ್ಕುಪತ್ರ ನೀಡುವಂತೆ ಕೋರಿದ್ದು, ಈ ಇಬ್ಬರಲ್ಲಿ ಯಾರಿಗೆ ಹಕ್ಕುಪತ್ರ ನೀಡಬೇಕೆಂಬ ವಿಷಯವಾಗಿರುತ್ತದೆ.
ಶ್ರೀ. ನಾಗರಾಜು ಎಂಬುವವರು ಮನವಿಯಲ್ಲಿ ತಾನು ಅಂಗವಿಕಲನಾಗಿದ್ದು, ಸುಮಾರು ವರ್ಷಗಳಿಂದ ಈ ಮನೆಯಲ್ಲಿ ವಾಸಮಾಡುತ್ತಿದ್ದು, ಇತ್ತೀಚಿಗೆ ತನ್ನನ್ನು ಖಾಲಿ ಮಾಡಿಸಿರುತ್ತಾರೆ ಹಾಗೂ ಶ್ರೀ ರಾಮದಾಸ್ ರವರಿಗೆ ಇದೇ ಕಾಲೋನಿಯಲ್ಲಿ ಸ್ವತ್ತಿನ ಸಂಖ್ಯೆ:46, ಹಂಚಿಕೆಯಾಗಿರುತ್ತದೆ. ಆದುದರಿಂದ, ಅಂಗವಿಕಲನಾದ ತನಗೆ ಈ ಸ್ವತ್ತನ್ನು ಹಂಚಿಕೆ ಮಾಡಲು ಕೋರಿರುತ್ತಾರೆ.
ಶ್ರೀ ರಾಮದಾಸ್ ಎಂಬುವವರು ಮನವಿಯಲ್ಲಿ ಈ ಸ್ವತ್ತು ತನಗೆ ಹಂಚಿಕೆಯಾಗಿದ್ದು, ಈ ಸ್ವತ್ತಿಗೆ ಪಾಲಿಕೆ ವತಿಯಿಂದ ಬೀಗ ಹಾಕಿರುತ್ತದೆ. ಸರ್ಕಾರಿ ಆದೇಶದಂತೆ ದಾಖಲಾತಿ ಹಾಗೂ 2000/- ರೂ.ಗಳ ಡಿಡಿ ಹಾಜರುಪಡಿಸಿ ಹಲವು ಬಾರಿ ಮನವಿ ಸಲ್ಲಿಸಿದ್ದು ತನಗೆ ಹಕ್ಕುಪತ್ರ ನೀಡಲು ಕೋರಿರುತ್ತಾರೆ.
ಈ ಬಗ್ಗೆ ವಲಯಾಧಿಕಾರಿಗಳು ವರದಿಯಲ್ಲಿ ಈ ಸ್ವತ್ತಿನಲ್ಲಿರುವ ಕಟ್ಟಡ ಶೀಥಿಲಗೊಂಡಿದ್ದು, ಖಾಲಿ ಕಟ್ಟಡವನ್ನು ಪಾಲಿಕೆ ವಶಕ್ಕೆ ಪಡೆಯಲಾಗಿರುತ್ತದೆ ಹಾಗೂ ಅರ್ಜಿದಾರ ಶ್ರೀ. ರಾಮದಾಸ್ ರವರ ಹೆಸರಿಗೆ ಇದೇ ಕಾಲೋನಿಯಲ್ಲಿ ನಂ.46, ಹಂಚಿಕೆಯಾಗಿದ್ದು, ಇವರಿಗೆ ರಾಜ್ಯ ಅಂಗವಿಕಲರ ಆಯುಕ್ತರು ನಿಯಮಾನುಸಾರ ಹಕ್ಕುಪತ್ರ ನೀಡಲು ಶಿಫಾರಸ್ಸು ಮಾಡಿರುತ್ತಾರೆ. ಹಾಗೂ ಇವರ ತಂದೆಯಾದ ಶ್ರೀ. ಮರಿಯಪ್ಪನವರ ಇದೇ ಕಾಲೋನಿಯ ಸ್ವತ್ತಿನ ಸಂಖ್ಯೆ:25 ಹಂಚಿಕೆಯಾಗಿರುತ್ತದೆ. ಶ್ರೀ ನಾಗರಾಜ್ ರವರು ಈ ಸ್ವತ್ತಿಗೆ ಮಾರುಕಟ್ಟೆ ದರ ಪಾವತಿಸಲು ಒಪ್ಪಿಗೆ ನೀಡಿರುತ್ತಾರೆ. ಎಂಬುದಾಗಿ ತಿಳಿಸಿರುತ್ತಾರೆ.
ಸದರಿ ಪ್ರದೇಶದಲ್ಲಿ ಹಕ್ಕುಪತ್ರ ನೀಡುವ ಬಗ್ಗೆ ಸರ್ಕಾರಿ ಆದೇಶ ಪತ್ರ ಸಂಖ್ಯೆ: ನಅಇ/79 ಎಂ.ಎನ್.ಜಿ.2005, ದಿನಾಂಕ: 27-12-2005ರ ನಿಬಂಧನೆ 5ರ ರೀತಿ ಯಾವುದೇ ಫಲಾನುಭವಿಗೆ ಹಕ್ಕುಪತ್ರ ವಿತರಿಸುವ ಮುನ್ನ ಸದರಿಯವರು ಯಾವುದೇ ನಿವೇಶನ/ಮನೆಯನ್ನು ಪಾಲಿಕೆ ವ್ಯಾಪ್ತಿಯಲ್ಲಿ ಹೊಂದಿಲ್ಲವೆಂಬುದನ್ನು ಖಚಿತಪಡಿಸಿಕೊಂಡು ಹಕ್ಕುಪತ್ರ ವಿತರಿಸಲು ಕ್ರಮ ಜರುಗಿಸಲು ನಿರ್ದೇಶನ ನೀಡಿರುತ್ತದೆ. ಅರ್ಜಿದಾರ ಶ್ರೀ. ರಾಮದಾಸರವರ ಹೆಸರಿನಲ್ಲಿ ಈಗಾಗಲೇ ಸಂಖ್ಯೆ:46ರ ಸ್ವತ್ತನ್ನು ಹಂಚಿಕೆ ಮಾಡಲಾಗಿರುತ್ತದೆ. ಮತ್ತೊಬ್ಬ ಅರ್ಜಿದಾರ ಹಾಗೂ ಅಂಗವಿಕಲ ಶ್ರೀ. ನಾಗರಾಜ್ ರವರ
ತಂದೆ ಶ್ರೀ. ಮರಿಯಪ್ಪರವರ ಹೆಸರಿನಲ್ಲಿ ನಂ.25ರ ಸಂಖ್ಯೆಯ ಸ್ವತ್ತು ಹಂಚಿಕೆ ಮಾಡಲಾಗಿರುತ್ತದೆ. ಈ ಅಂಶದ ಆಧಾರದಿಂದ ಸದರಿ ಶ್ರೀ. ನಾಗರಾಜ್ ಹೆಸರಿನಲ್ಲಿ ಇಲ್ಲದೆ ಕುಟುಂಬ ಸದಸ್ಯರ ಹೆಸರಿನಲ್ಲಿ ಈಗಾಗಲೇ ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಆದುದರಿಂದ, ವಾಸ್ತವಾಂಶ ಆಧಾರದ ಮೇಲೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮೇರೆಗೆ ಶ್ರೀ ನಾಗರಾಜ್ ರವರು ಅಂಗವಿಕಲರಾಗಿರುವುದರಿಂದ ಈ ಸ್ವತ್ತಿಗೆ ಹಕ್ಕುಪತ್ರವನ್ನು ನೀಡುವ ಮಾನ್ಯ ಆಯುಕ್ತರ ದಿನಾಂಕ:27-08-2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06-09-2011ರ ನಿರ್ಣಯ.

***ನಿರ್ಣಯ :-*** **ದಿನಾಂಕ : 06-09-2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ ಸರ್ಕಾರದ ಆದೇಶದಂತೆ ದರ ನಿಗಧಿಪಡಿಸಿ ಹಕ್ಕು ಪತ್ರ ವಿತರಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *45]. ವಿಷಯದ ಸಂಖ್ಯೆ :–ತೆಆಸ್ಥಾಸ/385/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್‌ಆರ್(4)111/11–12, ದಿನಾಂಕ : 16–11–2011 ರಲ್ಲಿ ವಿವರಿಸಿರುವಂತೆ, ಶ್ರೀ ವೀಣಾ ಮೂರ್ತಿ ವಿಜಯ್, ನಿರ್ದೇಶಕರು, ಬೆಂಗಳೂರು ಅಂತರ ರಾಷ್ಟ್ರೀಯ ಕಲಾ ಮಹೋತ್ಸವ, ನಂ. 46, 1ನೇ ಹಂತ, 4ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560 003. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಬೆಂಗಳೂರು ಅಂತರ ರಾಷ್ಟ್ರೀಯ ಕಲಾ ಮಹೋತ್ಸವ 2011 ದಿನಾಂಕ 15–09–2011 ರಿಂದ ಪ್ರಾರಂಭಗೊಂಡು 25–09–2011 ರವರೆಗೆ ಬೆಂಗಳೂರಿನ ಯುಬಿ ಸಿಟಿ, ಸ್ವಾತಂತ್ರ್ಯ ಉದ್ಯಾನವನ, ಓಪಸ್, ಹೆಚ್. ಎನ್. ಕಲಾಕ್ಷೇತ್ರ, ಬ್ರಿಗೇಡ್ ಎಂ.ಎಲ್.ಆರ್ ಕನ್ವೆನ್ಷನ್ ಸೆಂಟರ್ ಹಾಗೂ ಚೌಡಯ್ಯ ಸ್ಮಾರಕ ಭವನಗಳಲ್ಲಿ ನಡೆದು ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹ ಪ್ರಾಯೋಜಕತ್ವವೇ ಈ ಯಶಸ್ಸಿಗೆ ಕಾರಣವಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಈ ಕಲಾ ಮಹೋತ್ಸವಕ್ಕೆ ಧನ ಸಹಾಯ ಮಾಡುತ್ತಿರುವುದು ಅತ್ಯಂತ ಸಂತಸದ ವಿಷಯವಾಗಿದ್ದು, ತಾವುಗಳು ಆದಷ್ಟು ಶೀಘ್ರವಾಗಿ ಪ್ರಾಯೋಜಕತ್ವದ ಮೊತ್ತವನ್ನು (ರೂಪಾಯಿ ಹತ್ತು ಲಕ್ಷ ಮಾತ್ರ) ಬಿಡುಗಡೆ ಮಾಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತಿದ್ದೇವೆ. ಈ ಪತ್ರದೊಂದಿಗೆ ಕಾರ್ಯಕ್ರಮದ ಫೋಟೋಗಳು ಹಾಗೂ ದಿನಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಗಳ ಪ್ರತಿಗಳನ್ನು ಲಗತ್ತಿಸಿರುವುದಾಗಿ ತಿಳಿಸಿರುತ್ತಾರೆ.

ಸದರಿಯವರಿಗೆ 2010–11 ನೇ ಸಾಲಿನಲ್ಲಿ ರೂ. 10.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50' ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

*ನಿರ್ಣಯ :–* **ದಿನಾಂಕ : 16–11–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ರೂ.10.00 ಲಕ್ಷ (ಹತ್ತು ಲಕ್ಷ) ಗಳ ಅನುದಾನವನ್ನು ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *46]. ವಿಷಯದ ಸಂಖ್ಯೆ :–ತೆಆಸ್ಥಾಸ/386/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಅಆ(ಕ/ಆ/ಆ)ಪಿಎಸ್‌ಆರ್(4)20/11–12, ದಿನಾಂಕ : 19–11–2011 ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಎನ್. ವೀರಣ್ಣ ಕೆ.ಆರ್. ಪುರಂ, ವಾರ್ಡ್ ಸಂಖ್ಯೆ–52 ರ ಸದಸ್ಯರು ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸದಸ್ಯರು ಆದ ಇವರು ತಮ್ಮ ಪತ್ರದಲ್ಲಿ ಆಂಜನೇಯಸ್ವಾಮಿ ದೇವಸ್ಥಾನ ನವ ನಿರ್ಮಾಣ ಟ್ರಸ್ಟ್, ಬೆಂಗಳೂರು ರವರು ತಮ್ಮ ಪತ್ರದಲ್ಲಿ ಕೋರಿರುವಂತೆ ದೇವಸ್ಥಾನದ ವಾರ್ಷಿಕ ಕಾರ್ಯಕ್ರಮಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ. 2.00 ಲಕ್ಷಗಳ ಸಹಾಯಧ ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸುತ್ತಾ "ಆಂಜನೇಯಸ್ವಾಮಿ ದೇವಸ್ಥಾನ ನವ ನಿರ್ಮಾಣ ಟ್ರಸ್ಟ್" ರವರಿಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 1.00 ಲಕ್ಷ ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

2010–11 ನೇ ಸಾಲಿನ ಪಾಲಿಕೆ ಆಯವ್ಯಯದ "ಕೊಡುಗೆ ಮತ್ತು ಸಹಾಯಾನುದಾನ" ಲೆಕ್ಕ ಶೀರ್ಷಿಕೆ ಅಡಿ ರೂ.10.00 ಕೋಟಿಗಳನ್ನು ಮೀಸಲಿರಿಸಲಾಗಿದ್ದು, ಈ ಪೈಕಿ ದಿನಾಂಕ: 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ.823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಉಳಿಕೆ ರೂ. 176.50 ಲಕ್ಷಗಳು ಈಗಾಗಲೇ ಹಂಚಿಕೆಯಾಗಿದ್ದು, ಸಹಾಯಧನದ ಪ್ರಸ್ತಾವನೆಗಳಿಗೆ ಹಣದ ಲಭ್ಯವಿರುವುದಿಲ್ಲ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 22–03–2011 ರ ಸಭೆಯ ತೀರ್ಮಾನದಂತೆ ಕ್ರ.ಸಂ. (41) ರಲ್ಲಿ ಸಂಘ ಸಂಸ್ಥೆಗಳಿಗೆ ಹೆಚ್ಚುವರಿ ಅನುದಾನಕ್ಕಾಗಿ ರೂ. 100.00 ಲಕ್ಷಗಳ ಮರು ಹೊಂದಾಣಿಕೆ ಮಾಡಿಕೊಂಡು 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ.

2010–11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾಗಿರುತ್ತದೆ. ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**<u>–ಮುಂದೂಡಿದೆ–</u>**

## *47]. ವಿಷಯದ ಸಂಖ್ಯೆ :–ತೆಆಸ್ಥಾಸ/387/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್‌ಆರ್(4)23/11–12, ದಿನಾಂಕ : 16–11–2011 ರಲ್ಲಿ ವಿವರಿಸಿರುವಂತೆ, ಶ್ರೀ ಲೋಕೇಶ್ವರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಡಾಡ್ಜ್ ಬಾಲ್ ಸಂಸ್ಥೆ (ರಿ), ನಂ. ಎಂ54, 9ನೇ 'ಬಿ' ಮುಖ್ಯರಸ್ತೆ, ಎಲ್.ಐ.ಸಿ. ಕಾಲೋನಿ, ಜೀವನ್ ಭೀಮಾನಗರ, ಬೆಂಗಳೂರು – 560 075 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ ಕರ್ನಾಟಕ ರಾಜ್ಯ ಡಾಡ್ಜ್‌ಬಾಲ್ ಸಂಸ್ಥೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ ದಿನಾಂಕ 28–04–2011 ರಿಂದ 30–04–2011 ರವರೆಗೆ ಐದನೇ ರಾಷ್ಟ್ರೀಯ ಕಿರಿಯರ ಡಾಡ್ಜ್‌ಬಾಲ್ ಪಂದ್ಯಾವಳಿಗಳನ್ನು ಸಹಕಾರ ನಗರದ ಕೊಡಿಗೇಹಳ್ಳಿಯಲ್ಲಿರುವ ಬಿ.ಬಿ.ಎಂ.ಪಿ. ಆಟದ ಮೈದಾನದಲ್ಲಿ ಆಯೋಜಿಸಲಾಗಿದ್ದು ಪಂದ್ಯಾವಳಿಗಳಲ್ಲಿ ಭಾರತದ ಇತರೆ ರಾಜ್ಯಗಳಿಂದ 19 ಬಾಲಕರ ಮತ್ತು 18 ಬಾಲಕಿಯರ ತಂಡಗಳು ಒಟ್ಟು 37 ತಂಡಗಳು ಭಾಗವಹಿಸಿದ್ದವು. ಈ ಪಂದ್ಯಾವಳಿಗಳನ್ನು ಆಯೋಜಿಸಲು ರೂ. 9,35,000/– ಗಳು ವೆಚ್ಚವಾಗಿದ್ದು, ಈ ಪಂದ್ಯಾವಳಿಗಳಿಗೆ ವಸತಿ ವ್ಯವಸ್ಥೆ ಊಟದ ವ್ಯವಸ್ಥೆ ಪ್ರೇಕ್ಷಕರು ಕುಳಿತುಕೊಳ್ಳಲು ಆಸನದ ವ್ಯವಸ್ಥೆ, ಧ್ವನಿ ವರ್ಧಕ ಮತ್ತು ಇತರೆ ವೆಚ್ಚಗಳು ರೂ. 5,00,000/– ಭರಿಸಬೇಕಾಗಿರುವುದರಿಂದ ತಮ್ಮ ಸಂಸ್ಥೆಯ ಆರ್ಥಿಕ ಸ್ಥಿತಿ ಉತ್ತಮವಾಗಿಲ್ಲವಾದ್ದರಿಂದ ಪಾಲಿಕೆಯ ವತಿಯಿಂದ ಐದು ಲಕ್ಷ ರೂ.ಗಳ ಆರ್ಥಿಕ ನೆರವನ್ನು ಕೋರಿ ಈ ಹಿಂದೆಯೇ ಮನವಿ ಸಲ್ಲಿಸಲಾಗಿತ್ತು. ಆದುದರಿಂದ ಪಾಲಿಕೆಯ ವತಿಯಿಂದ ಆರ್ಥಿಕ ಧನ ಸಹಾಯವನ್ನು ಶೀಘ್ರವಾಗಿ ಬಿಡುಗಡೆ ಮಾಡಬೇಕಾಗಿ ಕೋರಿರುತ್ತಾರೆ.

ಶ್ರೀ ಎಸ್. ಆರ್. ವಿಶ್ವನಾಥ್, ಮಾನ್ಯ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ, ಬೆಂಗಳೂರು ನಗರ ಜಿಲ್ಲೆ ರವರು ಹಾಗೂ ಶ್ರೀ ಅಶ್ವತ್ಥ ನಾರಾಯಣ ಗೌಡ, ಮಾನ್ಯ ಸದಸ್ಯರು, ವಾರ್ಡ್–8 (ಕೊಡಿಗೇಹಳ್ಳಿ) ರವರು ಪತ್ರ ಬರೆದು ಸದರಿಯವರಿಗೆ ರೂ. 5.00 ಲಕ್ಷಗಳನ್ನು ಪಾಲಿಕೆಯ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ನೀಡಲು ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ **ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ,** ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**<u>–ಮುಂದೂಡಿದೆ–</u>**

## *48]. ವಿಷಯದ ಸಂಖ್ಯೆ :–ತೆಆಸ್ಥಾಸ/388/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 19–11–2011 ರಲ್ಲಿ ವಿವರಿಸಿರುವಂತೆ, Construction of Garbage Segregation Collection Point at Survey No.47 ಕಾಮಗಾರಿಗೆ ಅಂದಾಜು ಮೊತ್ತ ರೂ.69.60 ಲಕ್ಷಗಳಿಗೆ 2009–10ನೇ ಸಾಲಿನ

ಆಯವ್ಯಯದ ಲೆಕ್ಕಶೀರ್ಷಿಕೆ ಪಿ0279 ಅಡಿ 000-10-N-P-G-O-FO-002 ಕಾಮಗಾರಿ ಸಂಕೇತ ನೀಡಲಾಗಿದ್ದು, ಸದರಿ ಕಾಮಗಾರಿಯ Work Revalidation ಮಾಡಲು ಮಂಡಿಸಲಾಗಿದೆ.

ಸದರಿ ಕಾಮಗಾರಿಯ Revalidation ಸಂಬಂಧ 2011–12 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0279 ರ ''ಮುಂದುವರೆದ ಕಾಮಗಾರಿಗಳು'' ಅಡಿ ರೂ. 45.00 ಲಕ್ಷಗಳು ಲಭ್ಯವಿದ್ದು ಕೊರತೆ ಮೊತ್ತ ರೂ.24.60 ಲಕ್ಷಗಳನ್ನು ಮೇಲ್ಕಂಡ ಲೆಕ್ಕಶೀರ್ಷಿಕೆಯಡಿ ಹೆಚ್ಚುವರಿಯಾಗಿ ಅಳವಡಿಸಿಕೊಳ್ಳಬೇಕಾಗಿದೆ. ಪಿ0279 ಲೆಕ್ಕಶೀರ್ಷಿಕೆಯನ್ನು ಪ್ರಧಾನ ಲೆಕ್ಕಶೀರ್ಷಿಕೆ – "Public Health Engineering – Zonal" ಅಡಿ ಅಳವಡಿಸಿಕೊಳ್ಳಲಾಗಿದೆ.

2011–12ನೇ ಸಾಲಿನ ಆಯವ್ಯಯ ಅನುಮೋದನೆಯಾದ ನಂತರ ಆರ್ಥಿಕ ವರ್ಷದ ಅಂತ್ಯದಲ್ಲಿ ಮೇಲ್ಕಂಡ ಪ್ರಧಾನ ಲೆಕ್ಕಶೀರ್ಷಿಕೆ – "Public Health Engineering – Zonal" ಅಡಿ ಬರುವ (ಆಡಳಿತಾತ್ಮಕ ವೆಚ್ಚವನ್ನು ಹೊರತುಪಡಿಸಿ) ಇತರೆ ಲೆಕ್ಕಶೀರ್ಷಿಕೆಗಳಲ್ಲಿ ಉಳಿತಾಯವಾಗುವ ಮೊತ್ತವನ್ನು ಪಿ.0279 ರ ''ಮುಂದುವರೆದ ಕಾಮಗಾರಿಗಳು'' ಲೆಕ್ಕಶೀಷಿಕೆಗೆ ಹೆಚ್ಚುವರಿಯಾಗಿ ರೂ.24.60 ಲಕ್ಷಗಳನ್ನು ಅಳವಡಿಸಿಕೊಳ್ಳಲು ಹಾಗೂ ಮೇಲ್ಕಂಡ ಕಾಮಗಾರಿಯ ಪ್ರಸ್ತಾಪಿತ ಮೊತ್ತ ರೂ.69.60 ಲಕ್ಷಗಳಿಗೆ Work Revalidation ಮಾಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**_ನಿರ್ಣಯ :–_ ದಿನಾಂಕ : 19–11–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## _491. ವಿಷಯದ ಸಂಖ್ಯೆ :–ತೆಆಸ್ಥಾಸ/389/2011–12_

ಆಯುಕ್ತರ ಟಿಪ್ಪಣಿ ದಿನಾಂಕ : 29–10–2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರ ವಿಭಾಗರವರು ಈ ಕೆಳಕಂಡ ಕಾಮಗಾರಿಗಳಿಗೆ ಕಾಮಗಾರಿ ಸಂಖ್ಯೆಗಾಗಿ ಮುಖ್ಯ ಆಭಿಯಂತರರು, ಪಶ್ಚಿಮ ರವರ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| ಕ್ರ.ಸ. | ಕಾಮಗಾರಿಗಳ ವಿವರಗಳು | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | Providing basic amenities and face lifting measures to the Ring Road in front of Padmabhushana Dr.Rajkumar Memorial, Bangalore | 99.75 |
| | Total Rs. | **99.75** |

ಕಡತದ ಕಂಡಿಕೆ ಸಂಖ್ಯೆ 13 ಅನುಮೋದಿಸಿ ಕಂಡಿಕೆ 18ರಲ್ಲಿ 2011–12ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲು ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಲಾಗಿರುತ್ತದೆ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ದಿನಾಂಕ 14–7–2011 ರಂದು ನಡೆದ ಸಭೆಯ ನಡವಳಿ ವಿಷಯ ಸಂಖ್ಯೆ ತೆಆಸ್ಥಾಸ/129/2011–12 ರಂತೆ ಆಯುಕ್ತರ ಟಿಪ್ಪಣಿಯನ್ನು, 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್‌ಗಳಿಗೆ ಒದಗಿಸುವ ಅನುದಾನದಲ್ಲಿ ಬಳಸಿಕೊಳ್ಳುವ ಷರತ್ತಿಗೆ ಒಳಪಡಿಸಿ ಆಯುಕ್ತರ ದಿನಾಂಕ 1–7–2011ರ ಟಿಪ್ಪಣಿಯನ್ನು ಒಪ್ಪಿರುತ್ತದೆ.

2011–12ನೇ ಸಾಲಿನ ಆಯವ್ಯಯದ ಅನುದಾನದ ಲೆಕ್ಕ ಶೀರ್ಷಿಕೆಯ ವಿವರಗಳನ್ನು ನಮೂದಿಸಿರುವುದಿಲ್ಲ.

ಕಂಡಿಕೆ ಸಂಖ್ಯೆ 25 ರಲ್ಲಿ 2011–12ನೇ ಸಾಲಿನ ಮೂಲಭೂತ ಸೌಕರ್ಯ ಶಾಖೆಯಲ್ಲಿ ಆಯವ್ಯಯ ಲೆಕ್ಕ ಶೀರ್ಷಿಕೆ 1733/147 ರಲ್ಲಿ ನಿಗಧಿಪಡಿಸಿರುವ ರೂ.20.00 ಕೋಟಿಗಳ ಅನುದಾನದಲ್ಲಿ ಜಾಬ್ ಸಂಖ್ಯೆ ನೀಡಿ ಘಟನೋತ್ತರ ಮಂಜೂರಾತಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಸಲ್ಲಿಸಲು ತಿಳಿಸಲಾಗಿದೆ.

ಸದರಿ ಆಯವ್ಯಯ ಲೆಕ್ಕ ಶೀರ್ಷಿಕೆಗಳ ಅನುದಾನದ ವಿವರಗಳು ಕೆಳಕಂಡಂತಿದೆ.

| | | | | ರೂ.ಲಕ್ಷಗಳಲ್ಲಿ |
|---|---|---|---|---|
| 2011–12ನೇ ಸಾಲಿನ ಆಯವ್ಯಯ ಪಿ.ಸಂಖ್ಯೆ | ಅನುದಾನದ ಮೊತ್ತ | ಕಾಮಗಾರಿ ಸಂಖ್ಯೆ ನೀಡಿರುವ/ಆದೇಶಕ್ಕೆ ಸಲ್ಲಿಸಿರುವ ಮೊತ್ತ | ಕಾಮಗಾರಿ ಸಂಖ್ಯೆಗೆ ಪ್ರಸ್ತಾವನೆ | ಲಭ್ಯವಿರುವ ಅನುದಾನ |
| 1733/147 | 2000.00 | 473.00 | 99.75 | 1527.00 |

ಆದ್ದರಿಂದ ಲಭ್ಯವಿರುವ ಅನುದಾನದಲ್ಲಿ ಮೇಲ್ಕಂಡ ಕಾಮಗಾರಿಗೆ ರೂ.99.75 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ 043–12–000016 ರಂತೆ ನೀಡಲಾಗಿದ್ದು, ಘಟನೋತ್ತರ ಮಂಜೂರಾತಿಗಾಗಿ ಹಾಗೂ ಟಿಪ್ಪಣಿಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸ್ಥಿರೀಕರಣಕ್ಕಾಗಿ ಅನುಮೋದನೆ ಮತ್ತು ಸಹಿಗಾಗಿ ಸಲ್ಲಿಸಿದೆ.

**_ನಿರ್ಣಯ :–_ ದಿನಾಂಕ : 29–10–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## _50]. ವಿಷಯದ ಸಂಖ್ಯೆ :–ತೆಆಸ್ಥಾಸ/390/2011–12_

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿಬಿಎಂಪಿ/ಬಿಪಿಎಲ್‌ಗಣತಿ/ಜೆಡಿ(ಎಸ್)ಪಿಆರ್/81/2011–12, ದಿನಾಂಕ : 23.11.2011. ರಲ್ಲಿ ವಿವರಿಸಿರುವಂತೆ, ಸಾಮಾಜಿಕ, ಆರ್ಥಿಕ ಮತ್ತು ಜಾತಿ ಗಣತಿ (SECC–2011) ಕಾರ್ಯಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 100 ಚಾರ್ಜ್ ಕೇಂದ್ರಗಳನ್ನು ಗುರುತಿಸಲಾಗಿದ್ದು, ಸದರಿ ಚಾರ್ಜ್ ಕೇಂದ್ರಗಳಿಗೆ ಸರ್ಕಾರದ ಉಲ್ಲೇಖಿತದ ಸುತ್ತೋಲೆಯನ್ವಯ ನಿಗಧಿತ ಚೆಕ್ ಲಿಸ್ಟ್‌ನಲ್ಲಿರುವಂತೆ, ವಿದ್ಯುತ್ ಪೀಠೋಪಕರಣಗಳ ಸೌಲಭ್ಯ ಹಾಗೂ ಗಣಕಯಂತ್ರಗಳನ್ನು ಅಳವಡಿಸಲು ಅಗತ್ಯ ಸೌಲಭ್ಯಗಳನ್ನು ಪೊರೈಸಲು ಜಂಟಿ ನಿರ್ದೇಶಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಬಿ.ಇ.ಎಲ್.ನೋಡಲ್ ಅಧಿಕಾರಿಗಳ ಸಮಕ್ಷಮದಲ್ಲಿ ಐ.ಪಿ.ಪಿ. ಸಭಾಂಗಣ, ಮಲ್ಲೇಶ್ವರಂ, ಬೆಂಗಳೂರು ರಲ್ಲಿ ದಿನಾಂಕ: 02/11/2011 ರಂದು ನಡೆದ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ. ಅದರಂತೆ, SECC-2011ಯು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು, ವಿದ್ಯುತ್ ಸೌಲಭ್ಯಗಳನ್ನು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಲ್ಲಿ ಭರಿಸಬಹುದಾಗಿದ್ದು, ಗಣಕಯಂತ್ರ ಪೀಠೋಪಕರಗಳ ಸೌಲಭ್ಯಗಳನ್ನು ಪಾಲಿಕೆಯ ವತಿಯಿಂದಲೇ ಕಲ್ಪಿಸಬೇಕಾಗಿರುತ್ತದೆ.

ಈಗಾಗಲೇ ಪಾಲಿಕೆಯ ವ್ಯಾಪ್ತಿಯಲ್ಲಿ ಗುರುತಿಸಲಾಗಿರುವ 100 ಚಾರ್ಜ್ ಕೇಂದ್ರಗಳಿಗೆ, ಗಣಕಯಂತ್ರಗಳನ್ನು ಅಳವಡಿಸಬೇಕಾಗಿದ್ದು, ಪಾಲಿಕೆಯ ವಲಯ ವ್ಯಾಪ್ತಿಯಲ್ಲಿ ಗುರುತಿಸಲಾಗಿರುವ ಚಾರ್ಜ್ ಕೇಂದ್ರಗಳಲ್ಲಿ ಚೆಕ್ ಲಿಸ್ಟ್‌ನಂತೆ ಸೌಲಭ್ಯಗಳು ಲಭ್ಯವಿಲ್ಲದೇ ಇರುವುದನ್ನು ಬಿ.ಇ.ಎಲ್.ನೋಡಲ್ ಅಧಿಕಾರಿಗಳು ಹಾಗೂ TRANSVISION ಸಿಬ್ಬಂದಿಗಳು ದೃಡಪಡಿಸಿದ್ದು, SECC-2011ರ ಕಾರ್ಯವನ್ನು Tablet PC ಗಳಿಂದ ನಿರ್ವಹಿಸಲಾಗುತ್ತಿರುವುದರಿಂದ ಸರ್ಕಾರದ ಉಲ್ಲೇಖಿತದ ಸುತ್ತೋಲೆಯನ್ವಯ ನಿಗಧಿತ ಚೆಕ್‌ಲಿಸ್ಟ್‌ನಲ್ಲಿರುವಂತೆ ಗಣಕಯಂತ್ರ ಹಾಗೂ ಇತರೇ ಉಪಕರಣಗಳನ್ನು ಚಾರ್ಜ್ ಕೇಂದ್ರಗಳಲ್ಲಿ ಅಳವಡಿಸುವುದು ಅತ್ಯಾವಶ್ಯಕವಾಗಿರುತ್ತದೆ.

ಈ ಸಂಬಂಧ ಪರಿಶೀಲಿಸಲಾಗಿ, SECC-2011ರ ಕಾರ್ಯಕ್ಕೆ ಮಾಹಿತಿ ತಂತ್ರಜ್ಞಾನ ಸಲಹೆಗಾರ ರವರಿಂದ ಪಾಲಿಕೆಯ ವ್ಯಾಪ್ತಿಯಲ್ಲಿ ಗುರುತಿಸಲಾಗಿರುವ ಚಾರ್ಜ್ ಕೇಂದ್ರಗಳಿಗೆ ಸರ್ಕಾರದ ಸುತ್ತೋಲೆಯನ್ವಯ ನಿಗಧಿತ ಚೆಕ್ ಲಿಸ್ಟ್‌ನಲ್ಲಿರುವಂತೆ ಗಣಕಯಂತ್ರ, ಯು.ಪಿ.ಎಸ್. ಪ್ರಿಂಟರ್, ಡಾಟಾ ಕಾರ್ಡ್, ಇತ್ಯಧಿ ಆಯ್ದ 100 ಚಾರ್ಜ್ ಕೇಂದ್ರಗಳಿಗೆ ಖರೀದಿಸಬೇಕಾಗಿದ್ದು, ಸದರಿಯವುಗಳಿಗೆ ತಗಲಬಹುದಾದ ಅಂದಾಜು ವೆಚ್ಚವು ರೂ. 1,94,09,900/–ಗಳು ಎಂದು ಅಂದಾಜಿಸಲಾಗಿದೆ. (ವಿವರವನ್ನು ಅನುಬಂಧ–1ರಲ್ಲಿ ನೀಡಿದೆ. ಸದರಿ ವೆಚ್ಚವನ್ನು ಪಾಲಿಕೆಯ ನಿಧಿಯಿಂದ ಭರಿಸಬೇಕಾಗಿರುತ್ತದೆ ಮತ್ತು ಇದನ್ನು ಸರ್ಕಾರದಿಂದ ಮರುಪಾವತಿಗೆ ಅವಕಾಶವಿರುವುದಿಲ್ಲ. ಗಣತಿ ಕಾರ್ಯವು ಪೂರ್ಣಗೊಂಡ ನಂತರ ಉಪಕರಣಗಳನ್ನು ಪಾಲಿಕೆಯ ಸೇವಾ ಕೇಂದ್ರಗಳಲ್ಲಿ ಅಥವಾ ಇತರೇ ಅಧಿಕಾರಿಗಳ ಕಛೇರಿಗಳಲ್ಲಿ ಉಪಯೋಗಿಸಿಕೊಳ್ಳಬಹುದಾಗಿರುತ್ತದೆ.

ಆಯ್ದ 100 ಚಾರ್ಜ್ ಕೇಂದ್ರಗಳಿಗೆ ಅವಶ್ಯವಿರುವ ಎಲೆಕ್ಟ್ರಿಕಲ್ ಪಾಯಿಂಟ್ಸ್ ಮತ್ತು ಇತರೇ ತತ್ಸಂಬಂಧ ಕಾರ್ಯಗಳನ್ನು ನಿರ್ವಹಿಸಬೇಕಿದ್ದು, ಅವುಗಳಿಗೆ ತಗಲಬಹುದಾದ ವೆಚ್ಚ ರೂ. 34,63,900/–ಎಂದು ಮುಖ್ಯ ಅಭಿಯಂತರರು (ವಿದ್ಯುತ್) ರವರಿಂದ ಅಂದಾಜು ಸಲ್ಲಿತವಾಗಿರುತ್ತದೆ. ಸದರಿ ಮೊತ್ತವನ್ನು ಸರ್ಕಾರಿಂದ ಮರುಪಾವತಿಗೆ ಅವಕಾಶವಿರುತ್ತದೆ. ಸದರಿ ಎಲೆಕ್ಟ್ರಿಕಲ್ ಕೆಲಸ ಕಾರ್ಯಗಳನ್ನು ಮುಖ್ಯ ಅಭಿಯಂತರರು (ವಿದ್ಯುತ್) ಹಾಗೂ ಆಯಾ ವಲಯಗಳ ಕಾ.ಪಾ.ಅ (ವಿದ್ಯುತ್) ರವರ ಮುಖಾಂತರ ನಿರ್ವಹಿಸಲು ಉದ್ದೇಶಿಸಲಾಗಿರುತ್ತದೆ.

ಆಯ್ದ 100 ಚಾರ್ಜ್ ಕೇಂದ್ರಗಳಿಗೆ ಅವಶ್ಯವಿರುವ ಪೀಠೋಪಕರಣಗಳ ಪಾಲಿಕೆಯ ನಿಧಿಯಿಂದಲೇ ಒದಗಿಸಬೇಕಿದ್ದು, ಹಾಲಿ ಲಭ್ಯವಿರುವ ಪಿಠೋಪಕರಣಗಳ ಜೊತೆಗೆ ಅತೀ ಅವಶ್ಯವಿರುವ ಪಿಠೋಪಕರಣಗಳ ಒದಗಿಸಲು ಪ್ರತಿ ಚಾರ್ಜ್ ಕೇಂದ್ರಕ್ಕೆ ರೂ.20,000ದಂತೆ 100–ಕೇಂದ್ರಗಳಿಗೆ 20–00ಲಕ್ಷಗಳನ್ನು ಅಂದಾಜಿಸಲಾಗಿದೆ. ಸದರಿ ವೆಚ್ಚವನ್ನು ಸರ್ಕಾರದಿಂದ ಮರುಪಾವತಿಗೆ ಅವಕಾಶವಿರುವುದಿಲ್ಲ ಪಾಲಿಕೆಯ ನಿಧಿಯಿಂದಲೇ ಭರಿಸಬೇಕಾಗುತ್ತದೆ.

ಮೇಲೆ ವಿಸ್ತಾರವಾಗಿ ಸಲ್ಲಿಸಿರುವ ಪ್ರಸ್ತಾವನೆಗೆ ಸಂಬಂಧಿಸಿದ ಮುಖ್ಯ ಅಂಶಗಳನ್ನ ಈ ಕೆಳಕಂಡಂತೆ ನಮೂದು ಮಾಡಿದೆ.

1. ಪ್ರತಿ ಜಾರ್ಚ್ ಸೆಂಟರ್‌ಗೆ ಎರಡು ಗಣಕಯಂತ್ರದಂತೆ
   100 ಚಾರ್ಜ್ ಕೇಂದ್ರಗಳಿಗೆ 200 ಗಣಕಯಂತ್ರಗಳನ್ನ

ಖರೀದಿಸಲು ತಗಲಬಹುದಾದ ವೆಚ್ಚ – ರೂ. 82,93,200–00.

2. ಪ್ರತಿ ಜಾರ್ಚ್ ಸೆಂಟರ್‌ಗೆ ಒಂದು ಪ್ರಿಂಟರ್‌ನಂತೆ 100 ಚಾರ್ಜ್ ಕೇಂದ್ರಗಳಿಗೆ 100 ಪ್ರಿಂಟರ್ಸ್‌ಗಳನ್ನ ಖರೀದಿಸಲು ತಗಲಬಹುದಾದ ವೆಚ್ಚ – ರೂ. 5,76,700–00
3. ಡಾಟಾ ಕಾರ್ಡ್, ಲ್ಯಾನ್ ಕೇಬಲ್, ಪೋರ್ಟ್ ಡೀಲಿಂಕ್ ಸ್ವಿಚ್ ಪ್ರತಿ ಚಾರ್ಜ್ ಸೆಂಟರ್ 1 ರಂತೆ 100 ಚಾರ್ಚ್ ಕೇಂದ್ರಗಳಿಗೆ ತಗಲಬಹುದಾದ ವೆಚ್ಚ – ರೂ. 8,80,000–00
4. ಚಾರ್ಚ್ ಕೇಂದ್ರಗಳಿಗೆ ವಿದ್ಯುತ್ ಸಂಪರ್ಕ ಮತ್ತು ತತ್ಸಂಬಂಧದ ಕೆಲಸಗಳನ್ನ ಮುಖ್ಯ ಅಭಿಯಂತರರು(ವಿದ್ಯುತ್) ರವರು ಸಲ್ಲಿಸಿರುವ ಪ್ರಸ್ತಾವನೆಯಂತೆ 100 ಕೇಂದ್ರಗಳಿಗೆ ತಗಲಬಹುದಾದ ವೆಚ್ಚ – ರೂ. 34,63,900–00
5. ಚಾರ್ಚ್ ಕೇಂದ್ರಗಳಿಗೆ ಹಾಲಿ ಇರುವ ಪೀಠೋಪಕರಣಗಳ ಜೊತೆಗೆ ಅವಶ್ಯಕತೆಗೆ ಅನುಗುಣವಾಗಿ ಪೀಠೋಪಕರಣ ಖರೀದಿಸಲು ಪ್ರತಿ ಕೇಂದ್ರಕ್ಕೆ ರೂ.20,000–00ಗಳಂತೆ 100 ಚಾರ್ಚ್ ಕೇಂದ್ರಗಳಿಗೆ ತಗಲಬಹುದಾದ ವೆಚ್ಚ – ರೂ. 20,00,000–00
6. ಕಂಡಿಕೆ–(1)ರಲ್ಲಿ ಪ್ರತಿ ಕೇಂದ್ರಕ್ಕೆ 1–ಯು.ಪಿ.ಎಸ್.ನಂತೆ 100–ಕೇಂದ್ರಗಳಿಗೆ 100–ಯು.ಪಿ.ಎಸ್. ಗಳನ್ನ ಅಳವಡಿಸಲು ರೂ. 96,60,000–00ಗಳ ವೆಚ್ಚದಲ್ಲಿ ಖರೀದಿಸಬಹುದಾಗಿದೆ. ಆದರೆ, ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬೆಸ್ಕಾಂ ಸಂಸ್ಥೆಯು ಅನಿಯತ ವಿದ್ಯುತ್ (Un-interrupted power supply) ಪೂರೈಕೆ ನೀಡಲಾಗುತ್ತದೆ ಎಂದು ಮುಖ್ಯ ಅಭಿಯಂತರರು (ವಿದ್ಯುತ್) ಬಿ.ಬಿ.ಎಂ.ಪಿ ರವರು ತಿಳಿಸಿರುವುದರಿಂದ ಸದರಿ ಪ್ರಸ್ತಾವನೆಯನ್ನು ಕೈಬಿಡಬಹುದಾಗಿದೆ.

ಕ್ರಮ ಸಂಖ್ಯೆ: 1, ರಿಂದ 5 ರವರೆಗೆ ನಮೂದು ಮಾಡಿರುವ ಐಟಂಗಳನ್ನ ಖರೀದಿ/ನಿರ್ವಹಿಸಿ, ಚಾರ್ಚ್ ಕೇಂದ್ರಗಳನ್ನ ಅವಶ್ಯಕತೆಗೆ ಅನುಗುಣವಾಗಿ ವ್ಯವಸ್ಥೆಗೊಳಿಸಲು ತಗಲುವ ವೆಚ್ಚ ರೂ. 1,52,13,800–00 ಆಗುತ್ತದೆ. ಅದರ ಪೈಕಿ, ರೂ. 34,63,900–00 ಗಳನ್ನ ಸರ್ಕಾರದಿಂದ ಮರುಪಾವತಿ ಪಡೆಯಲು ಅವಕಾಶವಿರುತ್ತದೆ. ಆದ್ದರಿಂದ ಸದರಿ ಸಾಮಗ್ರಿಗಳನ್ನ ನಿಯಮಾಗಳನ್ವಯ Short term tender ಮೂಲಕ ಆಯಾಯಾ ವಲಯ ಮಟ್ಟದಲ್ಲಿ ಅಪರ / ಜಂಟಿ ಆಯುಕ್ತರು ಖರೀದಿಸಿ ಸರಬರಾಜು ಮಾಡಬಹುದಾಗಿರುತ್ತದೆ. ಈ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

***<u>ನಿರ್ಣಯ :–</u>*** **ದಿನಾಂಕ : 23–11–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## ***51]. ವಿಷಯದ ಸಂಖ್ಯೆ :–ತೆಆಸ್ಥಾಸ/391/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 23.11.2011. ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 160ರ ವ್ಯಾಪ್ತಿಯಲ್ಲಿ ಗಟ್ಟಿಗೆರೆ ಸ್ಮಶಾನಕ್ಕೆ ಆರ್.ಸಿ.ಸಿ ತಡೆಗೋಡೆ ಮತ್ತು ಸ್ಮಶಾನದ ರಸ್ತೆಗೆ ಚರಂಡಿ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ. 13.80 ಲಕ್ಷಗಳಿಗೆ 2011–12 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0486" ಅಡಿ ಅನುಮೋದನೆ ನೀಡಲು ಹಾಗೂ ಜಾಬ್ ಸಂಖ್ಯೆ ನೀಡಲು ಮಂಡಿಸಲಾಗಿದೆ.

2011–12 ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ 100 ರಲ್ಲಿ ಲೆಕ್ಕಶೀರ್ಷಿಕೆ ಪಿ0486 ಸ್ಮಶಾನ ಮತ್ತು ಶವ ಸುಡುವ ಸ್ಥಳಗಳ ನಿರ್ವಹಣೆ ಮತ್ತು ದುರಸ್ಥಿ ( ಪ್ರತಿ ವಲಯ ರೂ. 25.00 ಲಕ್ಷದಂತೆ) ರೂ. 200.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ಪ್ರತಿ ವಲಯಕ್ಕೆ ರೂ. 25.00 ಲಕ್ಷದಂತೆ ಅನುದಾನ ಮೀಸಲಿರಿಸಲಾಗಿದೆ.

ಮೇಲ್ಕಂಡ ಲೆಕ್ಕಶೀರ್ಷಿಕೆಯಡಿ ರಾಜರಾಜೇಶ್ವರಿನಗರ ವಲಯಕ್ಕೆ ಲಭ್ಯವಾಗುವ ಅನುದಾನ ರೂ. 25.00 ಲಕ್ಷಗಳಲ್ಲಿ ಮೇಲ್ಕಂಡ ಕಾಮಗಾರಿಯ ಅಂದಾಜು ಮೊತ್ತ ರೂ. 13.80 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ0486 ರ ಕಾರ್ಯಕ್ರಮ ಪಟ್ಟಿಗೆ ಸೇರಿಸಿಕೊಂಡು

ಅನುಷ್ಠಾನಗೊಳಿಸುವ ಬಗ್ಗೆ ಹಾಗೂ ಜಾಬ್ ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *52]. ವಿಷಯದ ಸಂಖ್ಯೆ :–ತೆಆಸ್ಥಾಸ/392/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್ಆರ್(4)71/11–12, ದಿನಾಂಕ : 22–11–2011. ರಲ್ಲಿ ವಿವರಿಸಿರುವಂತೆ, ಶ್ರೀಮತಿ ಶಾರದಮ್ಮ, ಪೂಜ್ಯ ಮಹಾಪೌರರು, ಟಿಪ್ಪಣಿ ಬರೆದು ಕಣಗಾಲ್ ನೃತ್ಯಾಲಯ ಟ್ರಸ್ಟ್ (ರಿ), ನಂ. 4043, 21ನೇ ಮುಖ್ಯರಸ್ತೆ, 30ನೇ ಕ್ರಾಸ್, ಬನಶಂಕರಿ 2ನೇ ಹಂತ, ಬೆಂಗಳೂರು – 70 ರವರ ಮನವಿ ಪತ್ರ ಮತ್ತು ದಾಖಲೆಗಳನ್ನು ಲಗತ್ತಿಸುತ್ತಾ, ದಿವಂಗತ ಎಸ್.ಆರ್. ಪುಟ್ಟಣ್ಣ ಕಣಗಾಲ್ ರವರ 78ನೇ ಹುಟ್ಟು ಹಬ್ಬದ ಸವಿನೆನಪಿಗಾಗಿ ಸಂಗೀತ ಮತ್ತು ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಿದ್ದು, ಕಾರ್ಯಕ್ರಮಕ್ಕೆ ದಕ್ಷಿಣ ಭಾರತ ಹೆಸರಾಂತ ಚಲನಚಿತ್ರ ನಿರ್ದೇಶಕರುಗಳು, ಹಿನ್ನೆಲೆ ಗಾಯಕರುಗಳು ಹಾಗೂ ರಾಜಕೀಯ ಗಣ್ಯ ವ್ಯಕ್ತಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಆ ಸಂದರ್ಭದಲ್ಲಿ ನೆನಪಿನ ಸಂಚಿಕೆ ಹೊರ ತರಲಾಗುತ್ತಿದೆ ಎಂದು, ಹೆಸರಾಂತ ಗಾಯಕಿಯರು, ಕಲಾವಿದರು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದು ಸುಮಾರು ರೂ. 12.50 ಲಕ್ಷಗಳ ವೆಚ್ಚವಾಗಲಿದೆ ಎಂದು ತಿಳಿಸುತ್ತಾ, ಪಾಲಿಕೆ ವತಿಯಿಂದ ಅನುದಾನ ಮಂಜೂರು ಮಾಡಿ ಕಾರ್ಯಕ್ರಮವನ್ನು ಪ್ರೋತ್ಸಾಯಿಸುವಂತೆ ಕೋರಿರುತ್ತಾರೆ. ಸದರಿಯವರ ಮನವಿಯನ್ನು ಪರಿಗಣಿಸಿ ಕಾರ್ಯಕ್ರಮಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಪ್ರಸ್ತಾವನೆ ಮಂಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

–ಮುಂದೂಡಿದೆ–

## *53]. ವಿಷಯದ ಸಂಖ್ಯೆ :–ತೆಆಸ್ಥಾಸ/393/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)72/11–12, ದಿನಾಂಕ : 19.11.2011. ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು, ಟಿಪ್ಪಣಿ ಬರೆದು ಶ್ರೀ ಕೆ. ಹೆಚ್. ರಾಮಲಿಂಗಾ ರೆಡ್ಡಿ, ಅಧ್ಯಕ್ಷರು, ಕರ್ನಾಟಕ ಭ್ರಷ್ಠಾಚಾರ ನಿರ್ಮೂಲನಾ ವೇದಿಕೆ (ರಿ), ಕೆ.ಎಸ್. ಹಳ್ಳಿ, ಕನ್ನಮಂಗಲ ಅಂಚೆ, ಬೆಂಗಳೂರು – 560 067. ರವರು ನೀಡಿರುವ ಮನವಿ ಮತ್ತು ದಾಖಲೆಗಳನ್ನು ಲಗತ್ತಿಸುತ್ತಾ ಸದರಿಯವರು ದಿನಾಂಕ 22–09–2011 ರಂದು ನಗರದ ಗಾಂಧಿ ಭವನದಲ್ಲಿ ಚುನಾವಣಾ ಸಮಗ್ರ ಸುಧಾರಣೆಗಳು ಎಂಬ ವಿಷಯದ ಮೇಲೆ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದು, ಈ ವಿಚಾರಣಾ ಸಂಕಿರಣದಲ್ಲಿ ಚರ್ಚಿಸಲು ಕಾನೂನು ತಜ್ಞರು, ನ್ಯಾಯಾಧೀಶರು, ಬುದ್ಧಿ ಜೀವಿಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ಸುಮಾರು ರೂ. 3,33,000/– ಗಳ ವೆಚ್ಚವಾಗಲಿದೆ ಎಂದು ಅಂದಾಜು ವಿವರಗಳನ್ನು ತಿಳಿಸಿ, ಮಹಾನಗರ ಪಾಲಿಕೆಯಿಂದ ಸಹಾಯ ಅನುದಾನ ನೀಡುವಂತೆ ಕೋರಿರುತ್ತಾರೆಂದು ತಿಳಿಸಿ, ಸಾಮಾಜಿಕ ಪರಿವರ್ತನೆಯ ಹಿತದೃಷ್ಠಿಯಿಂದ ಇಂತಹ ವಿಚಾರ ಸಂಕಿರಣಗಳು ಇವತ್ತಿನ ದಿವಸಗಳಲ್ಲಿ ಅವಶ್ಯಕವೆನಿಸುತ್ತದೆ, ಮೇಲ್ಕಂಡ ಕಾರ್ಯಕ್ರಮಕ್ಕೆ ಅತಿಥಿಗಳ ಗೌರವ ಧನಕ್ಕೆ ತಗಲುವ ವೆಚ್ಚ ರೂ. 39,000/– ಗಳನ್ನು ಪಾಲಿಕೆ ವತಿಯಿಂದ ಭರಿಸುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ**, ಸಾಂಸ್ಕೃತಿಕ**

**ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50' ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-**

## *54]. ವಿಷಯದ ಸಂಖ್ಯೆ :-ತೆಆಸ್ಥಾಸ/394/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್ಆರ್(4)53/11-12, 22-11-2011 ರಲ್ಲಿ ವಿವರಿಸಿರುವಂತೆ, ಅಧ್ಯಕ್ಷರು, ವಿಶ್ವಶಾಂತಿ ಸಾರ್ವಜನಿಕ ಸಂಸ್ಥೆ, ನಂ. 471, 16ನೇ ಕ್ರಾಸ್, ಬಾಗಲಗುಂಟೆ, ನಾಗಸಂದ್ರ (ಪೋಸ್ಟ್) ಬೆಂಗಳೂರು – 560 073. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯ ವತಿಯಿಂದ ಕಳೆದ 10 ವರ್ಷಗಳಿಂದ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 30 ಕೊಳೆಗೇರಿ ಪ್ರದೇಶಗಳಲ್ಲಿ ಮಹಿಳೆಯರ, ಮಕ್ಕಳ ಮತ್ತು ವೃದ್ಧರ ಸರ್ವತೋಮುಖ ಏಳಿಗೆಗಾಗಿ ಕಾರ್ಯನಿರ್ವಹಿಸುತ್ತಿದ್ದೇವೆ. ಅಂದರೆ (ಕೌಟುಂಬಿಕ ಸಲಹೆ ಮತ್ತು ಮಾರ್ಗದರ್ಶನ, ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸುವುದು, ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವುದು. ವಿವಿಧ ರೀತಿಯ ವೃತ್ತಿ ತರಬೇತಿಗಳನ್ನು ಏರ್ಪಡಿಸುವುದು. ವೃದ್ಧರ ಪುನರ್ವಸತಿ, ಬಾಲಕಾರ್ಮಿಕರ ನಿಮೂಲನೆ, ಕಾನೂನಿನ ಬಗ್ಗೆ ತಿಳುವಳಿಕೆ, ಹೆಚ್.ಐ.ವಿ./ಏಡ್ಸ್ ರೋಗದ ಬಗ್ಗೆ ಮಾಹಿತಿ ಸ್ವ-ಸಹಾಯ ಸಂಘಗಳ ರಚನೆ ಮತ್ತು ತರಬೇತಿ, ಸಣ್ಣ ಉಳಿತಾಯ ಮತ್ತು ಸಾಲದ ಯೋಜನೆ ಇತ್ಯಾದಿ) ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೊಳಗೇರಿ ನಿವಾಸಿಗಳ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವುದಾಗಿ ತಿಳಿಸಿ, ಇಂತಹ ಕಾರ್ಯಕ್ರಮಗಳ ಅನುಷ್ಠಾನದ ಸಲುವಾಗಿ ಬೆಂಗಳೂರು ಮಹಾನಗರ ಪಾಲಿಕೆಯಿಂದ 5 ವರ್ಷಗಳಿಗೊಮ್ಮೆ ನೀಡುವ ಅನುದಾನವನ್ನು ಬಿಡುಗಡೆ ಮಾಡಿಕೊಡಬೇಕೆಂದು ಮನವಿ ಮಾಡಿರುತ್ತಾರೆ.

ಸದರಿಯವರಿಗೆ 2006-07 ನೇ ಸಾಲಿನಲ್ಲಿ ರೂ. 1.00 ಲಕ್ಷ (ಒಂದು ಲಕ್ಷ) ಸಹಾಯಧನ ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50' ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ** ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-**

## *55]. ವಿಷಯದ ಸಂಖ್ಯೆ :-ತೆಆಸ್ಥಾಸ/395/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಬಿಬಿಎಂಪಿ(ಆಕ)ಸಂಖ್ಯೆ ಃ 734/ಕ.ಅ.ಸೇ/11-12, ದಿನಾಂಕ ಃ 22-11-2011ರಲ್ಲಿ ವಿವರಿಸಿರುವಂತೆ, ಶ್ರೀ. ಟಿ.ಎನ್.ಜಗನ್ನಾಥ್ ರಾವ್ # 164, 16ನೇ ಕ್ರಾಸ್, 5ನೇ ಹಂತ, ಜೆ.ಪಿ.ನಗರ, ಬೆಂ-78. ರವರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಮನವಿ ಸಲ್ಲಿಸಿ, ಸದರಿಯವರು ನನ್ನ ಮಗಳಾದ ಕು॥ ಟಿ.ಜೆ.ನಿವೇದಿತಾ ಹುಟ್ಟಿನಿಂದಲೆ ಅಂಗವಿಕಲತೆ, ಅವಳಿಗೆ ಕಿವಿ ಕೇಳುವುದಿಲ್ಲ, ಮಾತು ಬರುವುದಿಲ್ಲ, ಬುದ್ಧಿ ಮಾಂದ್ಯತೆ ಮತ್ತು ಸ್ಪಾಸ್ಟಿಕ್ (Spastic-Left side) ಎಡ ಭಾಗ. ಈ ಎಲ್ಲಾಅಂಗವಿಕಲತೆ ಇದ್ದರೂ ಸಹ ನಿವೇದಿತ ಭರತನಾಟ್ಯವನ್ನು ಕಲಿತಿದ್ದಾಳೆ. ಅವಳ ವಿದ್ಯಾಭ್ಯಾಸ 4ನೇ ತರಗತಿಯವರೆಗೆ, ಅವಲು ಇನ್ನೊಬ್ಬರ ಸಹಾಯವಿಲ್ಲದೆ ಎಲ್ಲೂ ಹೋಗುವ ಹಾಗಿಲ್ಲ.

ನನ್ನ ಸಹೋದರಿ ಸುಭದ್ರ ಪ್ರಭು, ಭರತನಾಟ್ಯ ಕಲಿಸುವ ಶಾಲೆಯನ್ನು ನಡೆಸುತ್ತಿರುತ್ತಾರೆ. ನನ್ನ ಹೆಂಡತಿ ರಮಾ ಜನಗನ್ನಾಥ್, ಪ್ರಖ್ಯಾತ ಗಾಯಕಿ ಹಾಗೂ ಭರತನಾಟ್ಯ ಕಲಾವಿದೆ. ಇವರು ಕೂಚಿಪುಡಿ, ಆಂಧ್ರ ನಾಟ್ಯ ಹಾಗೂ ಭರತನಾಟ್ಯಗಳಿಗೆ ಹಿನ್ನೆಲೆ ಸಂಗೀತ ಸಹಕಾರ ನೀಡುತ್ತಿರುತ್ತಾರೆ. ಇವರುಗಳ ಮಾರ್ಗದರ್ಶನದಲ್ಲಿ ನಿವೇದಿತಾ ಭರತನಾಟ್ಯ ಅಭ್ಯಾಸ ಮಾಡುತ್ತಿರುತ್ತಾಳೆ.

ನಿವೇದಿತಾಳಿಗೆ ಈ ಎಲ್ಲಾ ಅಂಗವೈಕಲ್ಯತೆಗಳಿದ್ದರೂ, ಭರತನಾಟ್ಯ ಕಲಿತಿದ್ದಾಳೆ. ನಿವೇದಿತಾ ತನ್ನ 8ನೇ ವಯಸ್ಸಿನಿಂದ ನೃತ್ಯ ಕಾರ್ಯಕ್ರಮ ನೀಡುತ್ತಿದ್ದಾಳೆ. ಇಲ್ಲಿಯವರೆಗೆ ಸುಮಾರು 60ಕ್ಕೂ ಹೆಚು ನೃತ್ಯ ಕಾರ್ಯಕ್ರಮವನ್ನು ನೀಡಿದ್ದಾಳೆ. ನಿವೇದಿತಾಳ ಭರತನಾಟ್ಯ ರಂಗ ಪ್ರವೇಶ ದಿನಾಂಕ : 07–04–2007 ರಂದು ಎ.ಡಿ.ಎ.ರಂಗಮಂದಿರದಲ್ಲಿ ನೆರವೇರಿತು.

ಇವಳ ಸಾಧನೆಯನ್ನು ಪರಿಗಣಿಸಿ ಭಾರತ ಸರ್ಕಾರ ಇವಳಿಗೆ ರಾಷ್ಟ್ರೀಯ ಪ್ರಶಸ್ತಿಯನ್ನು ದಿನಾಂಕ : 03–12–2007ರ ವಿಶ್ವ ಅಂಗವಿಕಲ ದಿನದಂದು ನೀಡಿ ಗೌರವಿಸಿದೆ. ಅದೇ ದಿನ ಅಂದರೆ ನಮ್ಮ ಘನ ಕರ್ನಾಟಕ ಸರ್ಕಾರ ಸಹ ನಿವೇದಿತಾಳಿಗೆ ದಿನಾಂಕ : 03–12–2007 ರಂದು ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಕರ್ನಾಟಕ ಸಕಾರವು ನಿವೇದಿತಾಳಿಗೆ 2009ನೇ ಸಲಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಮೇಲಿನ ಪ್ರಶಸ್ತಿಯನ್ನಲ್ಲದೇ ನಿವೇದಿತಾ ಹತ್ತು ಹಲವಾರು ಪ್ರಶಸ್ತಿಗಳನ್ನು ಗಳಿಸಿದ್ದಾರೆ. ನಿವೇದಿತಾಳ ಈ ಎಲ್ಲಾ ಸಾಧನೆಯನ್ನು ಪರಿಗಣಿಸಿ ತಮ್ಮ ಘನ ಇಲಾಖೆಯ ವತಿಯಿಂದ ನೃತ್ಯ ಕಾರ್ಯಕ್ರಮಕ್ಕೆ ಅವಕಾಶ ನೀಡಬೇಕೆಂದು ಹಾಗೂ ಇದಕ್ಕಾಗಿ ರೂ.50,000– ಗಳ ಅನುದಾನವನ್ನು ನೀಡಲು ಕೋರಿರುತ್ತಾರೆ.

ಅಭ್ಯರ್ಥಿಯು ಹುಟ್ಟಿನಿದಲೂ ಅಂಗವಿಕಲತೆಯಾಗಿದ್ದು, ಇವರು ಸಾಧನೆ ಮಾಡಿರುವ ಎಲ್ಲಾ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂದಿಸಿದಂತೆ, ಕಲ್ಯಾನ ಕಾರ್ಯಕ್ರಮದ ಮಾರ್ಗಸೂಚಿಯ ಪ್ರಕಾರ ಅಂಗವಿಕಲರಿಗೆ ಉಪಕರಣಗಳನ್ನು ಒದಗಿಸುವುದು ಹಾಗೂ ಅಂಗವಿಕಲರ ಸೇವಾಕೇಂದ್ರಗಳಿಗೆ ಮತ್ತು ಬುದ್ಧಿಮಾಂಧ್ಯ ಮಕ್ಕಳಿಗೆ ಪ್ರೋತ್ಸಾಹಧನ ಮಾತ್ರ ನೀಡಬಹುದಾಗಿರುತ್ತದೆ, ಆದರೆ ನೃತ್ಯ ಕಾರ್ಯಕ್ರಮ ಹಾಗೂ ನೃತ್ಯ ಕಾರ್ಯಕ್ರಮಕ್ಕೆ ಸಹಾಯಧನದ ಅವಕಾಶ ನೀಡುವ ಕಾರ್ಯಕ್ರಮವಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮುಂದಿನ ಕ್ರಮ ಕೈಗೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಮುಂದೆ ಮಂಡಿಸಲಾದ ಟಿಪ್ಪಣಿ.

<u>**–ಮುಂದೂಡಿದೆ–**</u>

## ***<u>56]. ವಿಷಯದ ಸಂಖ್ಯೆ :–ತೆಆಸ್ಥಾಸ/396/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ ః ಮುಲೆಅ/ಆಯವ್ಯಯ/ಪಿಆರ್/191/2011–12, ದಿನಾಂಕ ః 23–11–2011ರಲ್ಲಿ ವಿವರಿಸಿರುವಂತೆ, ಸರ್ಕಾರದ ಪತ್ರ ಸಂಖ್ಯೆ : ನಇ/424/ಎಂ.ಎನ್.ಯು/2011, ದಿನಾಂಕ : 05–11–2011. ಪತ್ರದಲ್ಲಿ 2011–12ನೇ ಸಾಲಿನ ಆಯವ್ಯಯವನ್ನು ಕೆಳಕಂಡ ಷರತ್ತುಗೊಳಪಟ್ಟು ಸರ್ಕಾರ ಅನುಮೋದನೆ ನೀಡಲಾಗಿದೆ.

- ಯಾವುದೇ ಹೊಸ ಕೆಲಸಗಳನ್ನು ಈಗ ತೆಗೆದುಕೊಳ್ಳಬಾರದು.
- ಡಿಸೆಂಬರ್ 2011ರ ಅಂತ್ಯದಲ್ಲಿ ಅಂದರೆ ಕಾಮಗಾರಿಗಳನ್ನು ನೋಡಿ ಆಗ ಅನಿವಾರ್ಯವಾಗಿ ಹೊಸ ಕೆಲಸಗಳನ್ನು ತೆಗೆದುಕೊಳ್ಳಲೇಬೇಕಾದರೆ ಪಾಲಿಕೆಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ತೆಗೆದುಕೊಳ್ಳುವುದು.
- ಪಾಲಿಕೆಯು ತನ್ನ ಆಯವ್ಯಯದಲ್ಲಿ ಅಂದಾಜು ಮಾಡಿರುವ ತೆರಿಗೆ ಆದಾಯವನ್ನು ಕಟ್ಟುನಿಟ್ಟಾಗಿ ವಸೂಲು ಮಾಡಿ, ಸಂಪನ್ಮೂಲ ಕ್ರೋಢೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡುವುದು.
- ಸದರಿ ಆಯವ್ಯಯ ಅಂದಾಜುಗಳಿಗೆ ಸರ್ಕಾರದಿಂದ ಯಾವುದೇ ಅನುದಾನವನ್ನು ನಿರೀಕ್ಷಿಸದೇ ಇರುವುದು.
- ಪಾವತಿಗಳಾದ ಲೈಬ್ರರಿ ಸೆಸ್, ಭಿಕ್ಷುಕರ ಸೆಸ್, ಶಿಕ್ಷಣ ಇತ್ಯಾಧಿ ಸೆಸ್‌ಗಳನ್ನು ಆಯಾವ್ಯಯ ಲೆಕ್ಕ ಶೀರ್ಷಿಕೆಗಳಿಗೆ ಆಗಿಂದಾಗ್ಗೆ ತಪ್ಪದೇ ಜಮಾ ಮಾಡುವುದು.

ಮೇಲ್ಕಂಡ ಷರತ್ತುಗಳನ್ವಯ 2011–12ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

*<u>ನಿರ್ಣಯ :–</u>* **2011–12ನೇ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಿರುವ ವಾರ್ಡ್ ಅನುದಾನದಲ್ಲಿನ ಕಾಮಗಾರಿಗಳನ್ನು ಹಾಗೂ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು**

**ಕೂಡಲೇ ಅನುಷ್ಠಾನಗೊಳಿಸುವ ಹಾಗೂ ವಿಶೇಷ ಅನುದಾನದಲ್ಲಿನ ಕಾಮಗಾರಿಗಳನ್ನು ಪಾಲಿಕೆ ಸದಸ್ಯರ ಕೋರಿಕೆ ಮೇರೆಗೆ ಕೈಗೊಳ್ಳುವ ಮಾರ್ಪಾಡಿನೊಂದಿಗೆ ದಿನಾಂಕ 23–11–2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

***57]. ವಿಷಯದ ಸಂಖ್ಯೆ :–ತೆಆಸ್ಥಾಸ/397/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/12/10–11, ದಿನಾಂಕ:17–10–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್–170, ಜಯನಗರ ಪೂರ್ವ, 9ನೇ ಮುಖ್ಯರಸ್ತೆ. ಬಿ.ಟಿ.ಎಂ. ಬಡಾವಣೆ, ಉದ್ಯಾನವನದಲ್ಲಿ ಖಾಲಿ ಇರುವ ಸ್ಥಳದಲ್ಲಿ 10x10 ಅಡಿಗಳ ಜಾಗದಲ್ಲಿ ನಂದಿನಿ ಮಿಲ್ಕ್ ಪಾರ್ಲರ್ ತೆರೆಯಲು ಸ್ಥಳವನ್ನು ಮಂಜೂರು ಮಾಡುವಂತೆ ಶ್ರೀಮತಿ.ಡಿ.ಆರ್.ಶಿಲ್ಪಶ್ರೀ ರವರು ಕೋರಿರುತ್ತಾರೆ.

ವಲಯಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ, ನಕ್ಷೆ ತಯಾರಿಸಿ, ಅರ್ಜಿದಾರರು ಕೋರಿರುವ ಸ್ಥಳವು 10x10 ಅಡಿಗಳ ಜಾಗವಾಗಿದ್ದು, ಈ ಸುತ್ತ–ಮುತ್ತ ಯಾವುದೇ ಹಾಲಿನ ಬೂತ್ ಇಲ್ಲದಿರುವುದರಿಂದ, ಅನುಮತಿ ನೀಡಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ರೂ.4,200/–ಗಳಿದ್ದು, ಅರ್ಜಿದಾರರುಗಳು ಕೋರಿರುವ 10x10 ಅಡಿಗಳ ಜಾಗವು 100 ಚದರ ಅಡಿಗಳಾಗುತ್ತದೆ. ಇದರಂತೆ 4200x100 = 4,20,000/– ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ ರೂ.42,000/– ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ ರೂ.3,500/–ಗಳಾಗುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ಕಲಂ–176ರ ಪ್ರಕಾರ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಅಇ/129/ಡಿ.ಎಂ.ಡಿ./2002, ದಿನಾಂಕ:02–06–2003ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಈ ಪ್ರದೇಶವು ಕರ್ನಾಟಕ ಉದ್ಯಾನವನ, ಮೈದಾನ ಮತ್ತು ತೆರೆದ ಪ್ರದೇಶಗಳ (ಪ್ರಿಸರ್ವೇಷನ್ ಆಂಡ್ ರೆಗ್ಯೂಲೇಷನ್) ಕಾಯ್ದೆ–1985ರನ್ವಯ ಕರಡು ಅಧಿಸೂಚಿಸಲು ಪ್ರಸ್ತಾಪಿಸಿರುವುದಾಗಿ ಟಿಪ್ಪಣಿಯಲ್ಲಿ ನಮೂದಿಸಲಾಗಿತ್ತು. ಆದರೆ, ಈ ಪ್ರದೇಶವನ್ನು ಆಸ್ತಿವಹಿಯಲ್ಲಿ ದಾಖಲಿಸಿರುವುದಿಲ್ಲ. ಕರಡು ಅಧಿಸೂಚಿಸಲು ಪ್ರಸ್ತಾಪಿಸಿರುವುದಿಲ್ಲ.

ಪ್ರಸ್ತುತ ಪ್ರಕರಣದಲ್ಲಿ ಶ್ರೀಮತಿ ಡಿ. ಆರ್.ಶಿಲ್ಪಶ್ರೀರವರು ಉದ್ಯಾನವನದಲ್ಲಿ ಹಾಲಿನ ಮಾರಾಟ ಮಳಿಗೆಗಾಗಿ ಸ್ಥಳವನ್ನು ಗುತ್ತಿಗೆ ನೀಡಲು ಕೋರಿದ್ದು, ಮೇಲ್ಕಂಡ ಸರ್ಕಾರಿ ಆದೇಶಗಳನ್ವಯ ಸೂಕ್ತ ನಿರ್ಣಯಕ್ಕಾಗಿ ನಗರಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿ, ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ವಿಷಯ ಸಂಖೆ:ನಯೋಅಸ್ಥಾಸ/84/2010–11, ದಿನಾಂಕ:22–02–2011ರ ನಡವಳಿಯಂತೆ ಸ್ಥಳ ತನಿಖೆ ನಡೆಸಿ ಅರ್ಜಿದಾರರ ಮನವಿ ತಿರಸ್ಕರಿಸಿರುತ್ತದೆ.

ಈ ಬಗ್ಗೆ ಅರ್ಜಿದಾರರು ಮೇಲ್ಮನವಿ ಸಲ್ಲಿಸಿರುವುದರಿಂದ, ವಿಷಯಕ್ಕೆ ಸಂಬಂಧಿಸಿದಂತೆ ವಿವರವಾದ ಟಿಪ್ಪಣಿಯನ್ನು ಅಫೀಲು ಸ್ಥಾಯಿಸಮಿತಿಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಲಾಗಿದ್ದು, ಸಮಿತಿಯು ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ, ಅರ್ಜಿದಾರರು ಕೋರಿರುವ ಸ್ಥಳದ ಪಕ್ಕದಲ್ಲಿ ಬೆಸ್ಕಾಂರವರು ಟ್ರಾನ್ಸ್‌ಫಾರ್ಮರ್ ಅಳವಡಿಸಿದ್ದು, ಉಳಿಕೆ ಜಾಗ ಖಾಲಿ ಇದ್ದು, ಇದನ್ನು ಕೆಲವು ಸಾರ್ವಜನಿಕರು ಗಲೀಜು ಮಾಡುತ್ತಿರುತ್ತಾರೆ. ಈ ಕಾರಣಗಳಿಂದಾಗಿ ಮೇಲ್ಮನವಿದಾರರು ಕೋರಿರುವ ಜಾಗವು ನಗರ ಪಾಲಿಕೆಯ ಉಪಯೋಗಕ್ಕೆ ಅವಶ್ಯಕವಿಲ್ಲದಿರುವುದನ್ನು ಮತ್ತು ಅಲ್ಲಿ ಸ್ವಚ್ಚತೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಹಾಗೂ ನಗರಪಾಲಿಕೆಗೆ ಆರ್ಥಿಕ ಆದಾಯವು ಬರುವುದನ್ನು ಮನಗಂಡು ಮೇಲ್ಮನವಿದಾರರು ಕೋರಿರುವಂತೆ 10*10 ಅಡಿಗಳ ಜಾಗವನ್ನು ಹಾಲಿನ ಮಾರಾಟ ಮಾಡಲು ತಿಂಗಳಿಗೆ ರೂ.

1000/– (ಒಂದು ಸಾವಿರ ರೂ.ಗಳು ಮಾತ್ರ) ಗುತ್ತಿಗೆ ಹಣವನ್ನು ನಿಗಧಿಪಡಿಸಿ ಮಂಜೂರು ಮಾಡುವುದೆಂದು ತೀರ್ಮಾನಿಸಿರುತ್ತದೆ.

ಆದುದರಿಂದ, ಪ್ರಸ್ತುತ ಪ್ರಕರಣದಲ್ಲಿ ಶ್ರೀಮತಿ. ಡಿ. ಆರ್. ಶಿಲ್ಪಶ್ರೀ ರವರಿಗೆ ಹಾಲಿನ ಮಾರಾಟ ಮಳಿಗೆಗಾಗಿ ಸ್ಥಳವನ್ನು ಗುತ್ತಿಗೆಗೆ ನೀಡುವ ಮಾನ್ಯ ಆಯುಕ್ತರ ದಿನಾಂಕ:17–10–2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 08–11–2011 ರ ನಿರ್ಣಯ.

***ನಿರ್ಣಯ :–*** **ದಿನಾಂಕ : 08–11–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.750/– (ಏಳು ನೂರು ಐವತ್ತು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ 3 (ಮೂರು) ವರ್ಷಗಳ ಅವಧಿಗೆ ಗುತ್ತಿಗೆ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.**

## ***58]. ವಿಷಯದ ಸಂಖ್ಯೆ :–ತೆಆಸ್ಥಾಸ/398/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/28/03–04, ದಿನಾಂಕ:07–09–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:146, ಬನ್ನೇರುಘಟ್ಟರಸ್ತೆ, ಲಕ್ಕಸಂದ್ರ 16ನೇ ಕ್ರಾಸ್‌ನಲ್ಲಿರುವ ನಗರಪಾಲಿಕೆಯ 28X35+43/2=1092 ಚ.ಅಡಿಗಳ ಜಾಗವನ್ನು ಮೈಕೋ ಕನ್ನಡ ಬಳಗದವರಿಗೆ ದಿನಾಂಕ:11–06–2001ರಂದು ನಡೆದ ನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:11/337ರ ನಿರ್ಣಯದ ಮೇರೆಗೆ ದಿನಾಂಕ: 21–05–2002 ರಿಂದ ಐದು ವರ್ಷಗಳ ಅವಧಿಗೆ ಮಾಸಿಕ ಗುತ್ತಿಗೆ ಹಣ ರೂ. 2000/–ಗಳಿಗೆ ನಿಗಧಿಪಡಿಸಿ ಗುತ್ತಿಗೆಗೆ ನೀಡಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯ ದಿ:20–05–07ಕ್ಕೆ ಮುಕ್ತಾಯಗೊಂಡಿರುತ್ತದೆ.

ಸದರಿ ಸಂಸ್ಥೆಯವರು ದಿನಾಂಕ 18–05–2006 ರಂದು ಮನವಿ ಸಲ್ಲಿಸಿ ಗುತ್ತಿಗೆಗೆ ನೀಡಿರುವ ಜಾಗವನ್ನು ರಿಯಾಯತಿ ದರದಲ್ಲಿ ಕ್ರಯಕ್ಕೆ ನೀಡುವಂತೆ ಕೋರಿರುತ್ತಾರೆ. ಸ್ಥಳ ಪರಿಶೀಲನೆಯಂತೆ ಅರ್ಜಿದಾರರು ಗುತ್ತಿಗೆ ನೀಡಿರುವ 1092 ಚ.ಅಡಿ ಜಾಗಕ್ಕೆ ಹೆಚ್ಚುವರಿ 126 ಚ. ಅಡಿಗಳ ಜಾಗವನ್ನು ಒತ್ತುವರಿ ಮಾಡಿಕೊಂಡು ಕಾಂಪೌಂಡ್ ಹಾಕಿಕೊಂಡಿರುತ್ತಾರೆ.

ಸದರಿ ಜಾಗವನ್ನು ಮೈಕೋ ಕನ್ನಡ ಬಳಗದವರಿಗೆ ಪ್ರಸಕ್ತ ಮಾರುಕಟ್ಟೆ ದರಕ್ಕೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತಗಾರರ ಸಭೆ ಮುಂದೆ ಟಿಪ್ಪಣಿ ಮಂಡಿಸಲಾಗಿದ್ದು, ಈ ಬಗ್ಗೆ ದಿನಾಂಕ: 24–11–2008ರ ಸಭೆಯ ವಿಷಯ ಸಂಖ್ಯೆ:628/08/09ರಲ್ಲಿ ಆಯುಕ್ತರವರ ದಿ:20–10–2008 ರ ಟಿಪ್ಪಣಿಯನ್ನು ಒಪ್ಪಿರುವುದಾಗಿ ಅನುಮೋದಿಸಿರುತ್ತಾರೆ.

ಸಂಸ್ಥೆಗೆ ಖರೀದಿಗೆ ನೀಡಲು ಉದ್ದೇಶಿಸಿರುವ ಸ್ವತ್ತಿನ ಅಳತೆ 1218 ಚ. ಅಡಿಗಳಿದ್ದು, ದಿನಾಂಕ: 20/10/2008ರ ಟಿಪ್ಪಣಿ ಮಂಡಿಸುವಾಗ ತಪ್ಪಾಗಿ 2310 ಚ.ಅಡಿಗಳೆಂದು ಮಂಡಿಸಲಾಗಿದ್ದು, ಅದಕ್ಕೆ ಆಡಳಿತಾಧಿಕಾರಿಗಳ ಅನುಮೋದನೆ ಸಹ ನೀಡಲಾಗಿತ್ತು. ಈ ತಪ್ಪನ್ನು ತದನಂತರ ಸರಿಪಡಿಸಿ ಸರ್ಕಾರದ ಮಾರ್ಗಸೂಚಿ ಬೆಲೆಯಂತೆ ಪ್ರತಿ ಚದರ ಅಡಿಗೆ ರೂ. 2,800/– ಗಳಿಗೆ ನಿಗಧಿಗೊಳಿಸಿ, ನಂತರ ಸ್ವತ್ತಿನ ಮೌಲ್ಯಕ್ಕೆ ಶೇ.20 ರಷ್ಟು ಹೆಚ್ಚಿಸಿ, ಒಟ್ಟಾರೆ ಮಾರಾಟ ಬೆಲೆಯ ರೂ.40,92,480/– ಗಳು ಎಂದು ಲೆಕ್ಕಾಚಾರ ಮಾಡಲಾದ ಪ್ರಸ್ತಾವನೆಯನ್ನು ವಿಷಯಸಂಖ್ಯೆ: 628/08–09ರಲ್ಲಿ ಅನುಮೋದನೆಯಾದ ವಿಸ್ತೀರ್ಣ 2310 ಚ. ಅಡಿಗಳ ಬದಲಾಗಿ 1218 ಚ. ಅಡಿಗಳ ಜಾಗವನ್ನು ಮಾರಾಟ ಬೆಲೆ ರೂ.77,61,600/– ಗಳಿಗೆ ಬದಲಾಗಿ ರೂ. 4092,480/– ಗಳಿಗೆ ಮಾರಾಟ ಮಾಡಲು ತಿದ್ದುಪಡಿ ಅನುಮೋದನೆ ಕೋರಿ, ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ 14/07/2009 ರ ಟಿಪ್ಪಣಿಯನ್ನು ಒಪ್ಪಿದೆ. ಎಂದು ತೀರ್ಮಾನಿಸಲಾಗಿದೆ.

ಆಡಳಿತಾಧಿಕಾರಿಗಳ ಅನುಮೋದನೆ ಮೇರೆಗೆ ಮೈಕೋ ಕನ್ನಡ ಬಳಗದವರಿಗೆ ಮಾರುಕಟ್ಟೆ ದರದಲ್ಲಿ ಕ್ರಯಕ್ಕೆ ನೀಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸರ್ಕಾರದ ನಿರ್ದೇಶನದಂತೆ ಪ್ರಸ್ತುತ ಪ್ರಕರಣವನ್ನು ದಿನಾಂಕ: 26–10–2010ರಂದು ಮಾನ್ಯ

ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಸಲಹಾಸಮಿತಿ ಮುಂದೆ ಮಂಡಿಸಿದ್ದು, ಸದರಿ ಸಮಿತಿಯು ಗುತ್ತಿಗೆಗೆ ನೀಡಲಾಗಿದ್ದ ಜಾಗದ ಗುತ್ತಿಗೆ ಷರತ್ತನ್ನು ಮೇಲ್ಕಂಡ ಸಂಸ್ಥೆಯ ಸಂಪೂರ್ಣವಾಗಿ ಉಲ್ಲಂಘನೆ ಮಾಡಿರುವುದರಿಂದ, ಸದರಿ ಸ್ವತ್ತನ್ನು ನಗರಪಾಲಿಕೆ ವಶಕ್ಕೆ ಪಡೆಯುವಂತೆ ಸೂಚಿಸಿ ತನ್ನ ನಡುವಳಿಯಲ್ಲಿ ದಾಖಲು ಮಾಡಿರುತ್ತದೆ. ಸದರಿ ಸಂಸ್ಥೆಯು ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದು, ಸದರಿ ಮನವಿಯಲ್ಲಿ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯು ಸರಿಯಿಲ್ಲದ ಕಾರಣ, ಪ್ರಸ್ತುತ ನಿವೇಶನವನ್ನು ರಿಯಾಯತಿ ದರದಲ್ಲಿ ಶುದ್ಧಕ್ರಯಕ್ಕೆ ನೀಡಲು ಕೋರಿರುತ್ತದೆ.

ಈಗ ಸರ್ಕಾರವು ತನ್ನ ಉಲ್ಲೇಖದ ಪತ್ರದಲ್ಲಿ ನಗರಪಾಲಿಕೆಯು ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಕೌನ್ಸಿಲ್ ಸಭೆ ಮುಂದೆ ಮಂಡಿಸಿ ಅನುಮೋದನೆ ನಂತರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶನ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ಪಾಲಿಕೆ ಸ್ವತ್ತನ್ನು ಮೈಕೋ ಕನ್ನಡ ಬಳಗದವರಿಗೆ ಕ್ರಯಕ್ಕೆ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:07–09–2011 ರ ಟಿಪ್ಪಣಿ.

ಮೈಕೊ ಕನ್ನಡ ಬಳಗವು ಸುಮಾರು 30 ವರ್ಷಗಳಿಂದ ನಾಡು–ನುಡಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಂದರೆ ಸಾಧಕರಿಗೊಂದು ಸನ್ಮಾನ, ಆರೋಗ್ಯ ಶೀಬಿರ, ಸಮವಸ್ತ್ರ ವಿತರಣೆ, ಹಸ್ತ ಪ್ರತಿ ಪ್ರದರ್ಶನ ರಸಪ್ರಶ್ನೆ, ಕವಿಗೋಷ್ಠಿ, ಪ್ರಬಂಧ, ರಂಗೋಲಿ, ಕ್ರೀಡಾ ಚಟುವಟಿಕೆ, ಪರೀಕ್ಷಾ ಸಿದ್ದತಾ ಶಿಬಿರ, ಜಾನಪದ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ, ಭಾಷಾ ಕಮ್ಮಟ, ಪುಸ್ತಕ ಮೇಳ ಮತ್ತು ರಾಜ್ಯೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತಿದ್ದು, ಗ್ರಂಥಾಲಯ ನಿರ್ಮಾಣಕ್ಕೂ ಕೂಡ ಗ್ರಂಥಾಲಯ ಇಲಾಖೆಯಿಂದ ಅನುಮತಿ ದೊರೆತಿರುವುದರಿಂದ ಸದರಿ ಸ್ಥಳವನ್ನು ಮೈಕೋ ಕನ್ನಡ ಬಳಗದ ಹೆಸರಿಗೆ ಶುದ್ದ ಕ್ರಯಕ್ಕೆ ನೀಡುವ ಬಗ್ಗೆ ಸರ್ಕಾರದ ಅನುಮೋದನೆ ಕೋರಲು ಮಾನ್ಯ ಆಯುಕ್ತರ ದಿನಾಂಕ 07–09–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 08–11–2011ರ ನಿರ್ಣಯ.

***ನಿರ್ಣಯ :–*** **ದಿನಾಂಕ : 08–11–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಪ್ರಸಕ್ತ ಮಾರುಕಟ್ಟೆ ದರದಲ್ಲಿ ಕ್ರಯಕ್ಕೆ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.**

## ***591. ವಿಷಯದ ಸಂಖ್ಯೆ :–ತೆಆಸ್ಥಾಸ/399/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/128/11–12, ದಿನಾಂಕ:20–10–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವಾರ್ಡ್ ನಂ.139 ಚಾಮರಾಜಪೇಟೆ ವಲಯದ ನಗರದ ಕೆ. ಆರ್ ಮಾರುಕಟ್ಟೆ ಎದುರಿಗೆ ಇರುವ ನಗರ ಪಾಲಿಕೆಗೆ ಸೇರಿದ 13x11 ಚ.ಮಿ (1540 ಚ.ಅ) ವಿಸ್ತೀರ್ಣವುಳ್ಳ ಜಾಗವನ್ನು ಶ್ರೀ ವಿನಾಯಕ ಭಕ್ತ ಮಂಡಳಿ ರವರಿಗೆ ದಿನಾಂಕ:20–01–1984ರಲ್ಲಿ ಮೂರು ವರ್ಷಗಳ ಅವಧಿಗೆ ದೇವಸ್ಥಾನ ಕಟ್ಟುವ ಸಲುವಾಗಿ ವಾರ್ಷಿಕ ಗುತ್ತಿಗೆ ಮೊತ್ತ 64.58/–ರೂ ಗಳಂಗತೆ ಗುತ್ತಿಗೆ ನೀಡಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ: 19–01–1987ರಲ್ಲಿ ಮುಕ್ತಾಯವಾಗಿರುತ್ತದೆ. ಶ್ರೀ ವಿನಾಯಕ ಭಕ್ತ ಮಂಡಳಿಗೆ ನೀಡಿರುವ ಪ್ರಸ್ತುತ ಜಾಗದ ಗುತ್ತಿಗೆ ಅವಧಿಯನ್ನು ನವೀಕರಿಸುವಂತೆ ಕೋರಿರುವ ಬಗ್ಗೆ.

ಪ್ರಸ್ತುತ ಜಾಗದ ವಿಸ್ತೀರ್ಣವು 42.65x33.09=1540 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:17–04–2007ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.4000/– ಗಳಿರುತ್ತದೆ ಇದರಂತೆ ಲೆಕ್ಕಾಚಾರ ಮಾಡಲಾಗಿ, 4000x1540=61,60,000/– ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ:10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ. 6,16,000/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ. 51,333/– ಗಳಾಗುತ್ತದೆ.

ದಿನಾಂಕ:01–03–2002 ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಈ ಹಿನ್ನೆಲೆಯಲ್ಲಿ ಗುತ್ತಿಗೆ ಅವಧಿಯನ್ನು ನವೀಕರಿಸುವ ಮಾನ್ಯ ಆಯುಕ್ತರ ದಿನಾಂಕ 20–10–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 08–11–2011ರ ನಿರ್ಣಯ.

***ನಿರ್ಣಯ :–*** **ದಿನಾಂಕ : 08–11–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.500/– (ಐದು ನೂರು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ 3 (ಮೂರು) ವರ್ಷಗಳ ಅವಧಿಗೆ ಗುತ್ತಿಗೆ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.**

## *60]. ವಿಷಯದ ಸಂಖ್ಯೆ :–ತೆಆಸ್ಥಾಸ/400/2011–12*

ಮಾನ್ಯ ಆಯುಕ್ತರ ಸಂಖ್ಯೆ : ಎ3(2)ಪಿಆರ್/259/11–12, ದಿನಾಂಕ: 14–10–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ. ವಾರ್ಡ್ ಸಂಖ್ಯೆ:22ರ ಎ.ಕೆ.ಕಾಲೋನಿ ಹಾಗೂ ಗುಡ್ಡದಹಳ್ಳಿ ಗ್ರಾಮದ ಸ್ಥಳ ಪರಿಶೀಲನಾ ವರದಿಯಂತೆ ವಿ.ನಾಗೇನಹಳ್ಳಿ ಎ.ಕೆ.ಕಾಲೋನಿಯಲ್ಲಿ 130 ನಿವೇಶನಗಳನ್ನು ಅಳತೆ ಮಾಡಿ ಚಕ್ಕುಬಂದಿಗಳನ್ನು ನಕ್ಷೆಯೊಂದಿಗೆ ತಯಾರಿಸಿ 22.75% SC/ST ಅನುದಾನದ ಅಡಿಯಲ್ಲಿ ಜೆ.ಸಿ.ನಗರ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರವರು ವರದಿ ಮಾಡಿರುವಂತೆ, 72 ಮನೆಗಳನ್ನು ಈಗಾಗಲೇ ನಿರ್ಮಿಸುತ್ತಿದ್ದು, ಮುಗಿಯುವ ಹಂತಕ್ಕೆ ಬಂದಿರುತ್ತದೆ. ಎ.ಕೆ.ಕಾಲೋನಿಯಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ನಿರ್ಮಾಣಗೊಳ್ಳುತ್ತಿರುವ 72 ಮನೆಗಳಿಗೆ ತುರ್ತಾಗಿ ಹಕ್ಕುಪತ್ರಗಳನ್ನು ನೀಡಬೇಕೆಂದು ಕೋರಿರುತ್ತಾರೆ. ಅಲ್ಲದೇ, ಗುಡ್ಡದಹಳ್ಳಿ ಗ್ರಾಮದಲ್ಲಿ 32 ನಿವೇಶನಗಳು ಇದ್ದು ಸದರಿ ನಿವೇಶನಗಳಲ್ಲಿ ಈಗಾಗಲೇ ಮನೆಗಳು ನಿರ್ಮಾಣಗೊಂಡಿದ್ದು, ಮನೆಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಹಕ್ಕುಪತ್ರಗಳನ್ನು ನೀಡಲು ಕೋರಿರುತ್ತಾರೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು–1, ಉತ್ತರ ಉಪವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ತಮ್ಮ ಪತ್ರದ ಸಂಖ್ಯೆ:ಬೆಂ.ಅ.ಪ್ರಾ/ಸ.ಕಾ.ಅ/(ಉ)/ಟಿ–33/2010–11, ದಿ:13–05–2010 ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾರ್ಡ್ ನಂ:22, ಬಿಬಿಎಂಪಿ ರವರಿಗೆ ಪತ್ರ ಬರೆದಿದ್ದು, ಇದರಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ವಿಶ್ವನಾಥ ನಾಗೇಹಳ್ಳಿ ಸರ್ವೆ ನಂ.1/4, 1/6, 1/7 ಮತ್ತು ಗುಡ್ಡದಹಳ್ಳಿ ಸರ್ವೆ ನಂ.13/1ರ 3 ಎಕರೆ 26 ಗುಂಟೆ ಜಮೀನನ್ನು ನಗರಪಾಲಿಕೆಗೆ ಹಸ್ತಾಂತರಿಸಲಾಗಿರುತ್ತದೆ ಎಂಬುದಾಗಿ ತಿಳಿಸಿರುತ್ತಾರೆ

ಆದ್ದರಿಂದ, ಎರಡು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ನೀಡುವಂತೆ ಮಾನ್ಯ ಆಯುಕ್ತರ ಅನುಮೋದನೆ ಕೋರಿ ಜಂಟಿ ಆಯುಕ್ತರು(ಪೂರ್ವ)ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆದರೆ, ಪ್ರಸ್ತುತ ಪ್ರದೇಶಗಳು ಕೊಳಚೆ ಪ್ರದೇಶವೆಂದು ಘೋಷಣೆವಾಗಿರುವುದಿಲ್ಲ ಹಾಗೂ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸುವ ಬಗ್ಗೆ ದಿನಾಂಕ:13–01–2010ರ

ಸರ್ಕಾರದ ಆದೇಶವನ್ನು ಸರ್ಕಾರವು No:UDD/176/CSS/2010, ಬೆಂಗಳೂರು, ದಿ: 24–01–2011 ರಂದು ಹಿಂಪಡೆದಿರುತ್ತದೆ. ಆದ್ದರಿಂದ, ಮೆಲ್ಕಂಡ ಅಂಶಗಳನ್ನು ಕುರಿತು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮೇರಿಗೆ, ಹಕ್ಕು ಪತ್ರ ನೀಡುವ ಮಾನ್ಯ ಆಯುಕ್ತರ ದಿನಾಂಕ 14–10–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 08–11–2011ರ ನಿರ್ಣಯ.

***ನಿರ್ಣಯ :–*** **ದಿನಾಂಕ : 08–11–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಹಕ್ಕು ಪತ್ರ ವಿತರಿಸುವ ಬಗ್ಗೆ ಸರ್ಕಾರದ ಅನುಮೋದನೆ ಕೋರುವುದೆಂದು ಸಮಿತಿಯು ತೀರ್ಮಾನಿಸಿತು.**

## *61]. ವಿಷಯದ ಸಂಖ್ಯೆ :–ತೆಆಸ್ಥಾಸ/401/2011–12*

ದಿನಾಂಕ:02–08–2011ರ ಆಯುಕ್ತ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ ಸದಾನಂದ್ ಬಿನ್ ಎಂ. ಶ್ರೀನಿವಾಸ ರೆಡ್ಡಿ, ನಂ.50, 4ನೇ ಅಡ್ಡರಸ್ತೆ 24ನೇ ಮುಖ್ಯರಸ್ತೆ, ಅಗರ ಗ್ರಾಮ, ಹೆಚ್.ಎಸ್.ಆರ್. ಬಡಾವಣೆ. ಸೆಕ್ಟರ್–1, ಬೆಂಗಳೂರು ರವರು ನಿರುದ್ಯೋಗಿ ಆಗಿದ್ದು, ಅವರಿಗೆ ಇದೇ ಅಗರ ಗ್ರಾಮದ, 24ನೇ ಮುಖ್ಯ ರಸ್ತೆ, ಸರ್ಕಾರಿ ಶಾಲಾ ಪಕ್ಕದಲ್ಲಿ ಇರುವ ನಗರ ಪಾಲಿಕೆ ಜಾಗದಲ್ಲಿ ನಂದಿನಿ ಹಾಲು ಮಾರಾಟ ಕೇಂದ್ರ ಸ್ಥಾಪಿಸಲು 10x10 ಚ.ಅ ಜಾಗವನ್ನು ಮಂಜೂರು ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು, ಸದರಿರವರ ಅರ್ಜಿಯನ್ನು ಪರಿಗಣಿಸಿ, ಅವರು

ಕೋರಿರುವಂತೆ, ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲು ಸ್ಥಳಾವಕಾಶ ಮಾಡಿಕೊಡಲು ಶಿಫಾರಸ್ಸು ಮಾಡಿರುತ್ತಾರೆ.

ಕಂದಾಯ ಇಲಾಖೆ ಮತ್ತು ಕಾಮಗಾರಿ ಇಲಾಖೆಯ ಅಧಿಕಾರಿಗಳು, ಸದರಿ ಜಾಗದ ತಪಾಸಣೆ ನಡೆಸಿ, ಅರ್ಜಿದಾರರು ಕೋರಿರುವ ಜಾಗವನ್ನು ಮಂಜೂರು ಮಾಡುವಲ್ಲಿ ಸಾರ್ವಜನಿಕರಿಗೆ ಯಾವುದೇ ರೀತಿ ತೊಂದರೆ ಆಗುವುದಿಲ್ಲವೆಂದು, ಅಭಿಪ್ರಾಯ ಪಟ್ಟಿರುತ್ತಾರೆ ಮತ್ತು ಸದರಿ 10x10= 100.00 ಚ.ಅ. ಜಾಗಕ್ಕೆ ಮಾಸಿಕ ರೂ. 2045.00 ಗಳಂತೆ ಬಾಡಿಗೆ ನಿಗಧಿಪಡಿಸಿರುತ್ತಾರೆ.

ಅದರಂತೆ, ಅರ್ಜಿದಾರರಾದ ಶ್ರೀ ಸದಾನಂದ್ ಬಿನ್ ಎಂ. ಶ್ರೀನಿವಾಸ ರೆಡ್ಡಿ, ನಂ,50, 4ನೇ ಅಡ್ಡರಸ್ತೆ, 24ನೇ ಮುಖ್ಯರಸ್ತೆ, ಅಗರ ಗ್ರಾಮ, ಹೆಚ್, ಎಸ್,ಆರ್. ಬಡಾವಣೆ, ಸೆಕ್ಟರ್–1, ಬೆಂಗಳೂರು, ರವರು ಕೋರಿರುವಂತೆ ಇದೇ ಅಗರ ಗ್ರಾಮದ, 24ನೇ ಮುಖ್ಯರಸ್ತೆ, ಸರ್ಕಾರಿ ಶಾಲಾ ಪಕ್ಕದಲ್ಲಿ ಇರುವ ನಗರ ಪಾಲಿಕೆ ಜಾಗದಲ್ಲಿ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲು 10x10=100.00 ಚ.ಅ ಜಾಗಕ್ಕೆ ಮಾಸಿಕ ರೂ. 2045.00ಗಳಂತೆ ಬಾಡಿಗೆ ನಿಗಧಿಪಡಿಸಿ ಮಂಜೂರು ಮಾಡುವ ಪ್ರಸ್ತಾವನೆಯ ಕುರಿತು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮೇರೆಗೆ, ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲು 10x10=100 ಚ.ಅ ಜಾಗಕ್ಕೆ ಮಾಸಿಕ ಬಾಡಿಗೆ ನಿಗಧಿಪಡಿಸಿ ಮಂಜೂರು ಮಾಡುವ ಮಾನ್ಯ ಆಯುಕ್ತರ ದಿನಾಂಕ: 02–08–2011 ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 08–11–2011ರ ನಿರ್ಣಯ.

***ನಿರ್ಣಯ :–*** **ದಿನಾಂಕ : 08–11–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ಬಾಡಿಗೆ ರೂ.500/– (ಐದು ನೂರು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ 3 (ಮೂರು) ವರ್ಷಗಳ ಅವಧಿಗೆ ಗುತ್ತಿಗೆ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.**

## *62]. ವಿಷಯದ ಸಂಖ್ಯೆ :–ತೆಆಸ್ಥಾಸ/402/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/117/11–12, ದಿನಾಂಕ:10–10–2011 ರಲ್ಲಿ ವಿವರಿಸಿರುವಂತೆ, ದಿನಾಂಕ:30–03–1977 ರಂದು ಮಾಡಿರುವ ಕರಾರು ಪತ್ರದಂತೆ, ಶಾರದ ಸ್ತ್ರೀ ಸಮಾಜ, ಚಾಮರಾಜಪೇಟೆ, ಇವರಿಗೆ ಪಾಲಿಕೆಗೆ ಸೇರಿದ 120x11 =1320 ಚ.ಅಡಿ ವಿಸ್ತೀರ್ಣದ ಕನ್ಸರ್‌ವೆನ್ಸಿ ಜಾಗವನ್ನು 5–ವರ್ಷಗಳ ಅವಧಿಗೆ ವಾರ್ಷಿಕ ಗುತ್ತಿಗೆ ಮೊತ್ತ ರೂ.294/–ಕ್ಕೆ ಶಾಲೆಯ ಮಕ್ಕಳಿಗಾಗಿ ಶೌಚಾಲಯ ಇತ್ಯಾದಿ ಬಳಸುವ ಉದ್ದೇಶಕ್ಕೆ ನೀಡಲಾಗಿತ್ತು. ಇದರ ಗುತ್ತಿಗೆ ಅವಧಿ ದಿನಾಂಕ:29–03–1982 ಕ್ಕೆ ಮುಕ್ತಾಯಗೊಂಡಿರುತ್ತದೆ.

ಜಂಟಿ ಆಯುಕ್ತರು(ಪಶ್ಚಿಮ)ರವರು ದಿನಾಂಕ:19–07–2010 ರಲ್ಲಿ ಕೆ.ಪಿ.ಪಿ. ಕಾಯ್ದೆನ್ವಯ ನೋಟೀಸು ನೀಡಿದ್ದು, ಸಂಸ್ಥೆಯವರು ಸದರಿ ಜಾಗದ ಗುತ್ತಿಗೆಯನ್ನು ಮುಂದುವರೆಸಲು ಕೋರಿರುತ್ತಾರೆ. ಉಪ ಆಯುಕ್ತರು (ಆಸ್ತಿಗಳು) ಇವರು ದಿನಾಂಕ:06–09–2011 ರಲ್ಲಿ ಸ್ಥಳ ಪರಿಶೀಲಿಸಿದ್ದು, ಈ ಶಾಲೆಯು 90–ವರ್ಷಗಳ ಹಿಂದೆ ಲೇಡಿ.ಪಾರ್ವತಮ್ಮ ಪುಟ್ಟಣ್ಣಚೆಟ್ಟಿ ಇವರಿಂದ ಸ್ಥಾಪಿಸಲ್ಪಟ್ಟಿ, ಶೈಕ್ಷಣಿಕ ಸಂಸ್ಥೆಯಾಗಿದ್ದು, ಕರ್ನಾಟಕ ಸರ್ಕಾರದ ಅನುದಾನಿತ ಶಾಲೆಯಾಗಿರುತ್ತದೆ. ಈ ಶಾಲೆಯಲ್ಲಿ 1500 ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಉಚಿತ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ.

ಗುತ್ತಿಗೆಗೆ ನೀಡಿರುವ ಪ್ರದೇಶ ಮಕ್ಕಳ ಶೌಚಾಲಯ ಇತ್ಯಾದಿಗಾಗಿ ಉಪಯೋಗಿಸುತ್ತಿದ್ದಾರೆ. ಶಾಲೆಗೆ ಇದರ ಅವಶ್ಯಕತೆ ಇದ್ದು, ಯಾವುದೇ ರೀತಿ ದುರುಪಯೋಗಪಡಿಸಿಕೊಂಡಿರುವುದಿಲ್ಲ ಹಾಗೂ ಗುತ್ತಿಗೆ ಮೊತ್ತವನ್ನು ಸಹಾ ಸಂದಾಯ ಮಾಡಿರುವುದಾಗಿ ತಿಳಿಸಿರುತ್ತಾರೆ. ಈ ಪ್ರದೇಶ ಪಾಲಿಕೆಯ ಯಾವುದೇ ಸಾರ್ವಜನಿಕ ಉಪಯೋಗಕ್ಕೆ ಬರದೇ ಇರುವ ಕಾರಣ, ಅನುದಾನಿತ ಶಾಲೆಯಾಗಿರುವುದರಿಂದ, ರಿಯಾಯಿತಿ ದರ ನಿಗಧಿಪಡಿಸಿ ಗುತ್ತಿಗೆ ಅವಧಿಯನ್ನು ಮುಂದಿನ 5–ವರ್ಷಗಳಿಗೆ ನವೀಕರಿಸಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮೇರೆಗೆ, ಗುತ್ತಿಗೆ ನೀಡುವ ಮಾನ್ಯ ಆಯುಕ್ತರ ದಿನಾಂಕ 10–10–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 08–11–2011ರ ನಿರ್ಣಯ.

***ನಿರ್ಣಯ :–*** **ದಿನಾಂಕ : 08–11–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಇಲ್ಲಿಯವರೆವಿಗೂ ಹಳೇ ದರದಲ್ಲಿ ಗುತ್ತಿಗೆ ಮೊತ್ತವನ್ನು ಪಾವತಿಸಿಕೊಂಡು ಮಾಸಿಕ ರೂ.600/– (ಆರು ನೂರು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ 5 (ಐದು) ವರ್ಷಗಳ ಅವಧಿಗೆ ಗುತ್ತಿಗೆ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.**

## *63]. ವಿಷಯದ ಸಂಖ್ಯೆ :–ತೆಆಸ್ಥಾಸ/403/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ವಿದ್ಯಾ(2)ಪಿಆರ್/115/11–12, ದಿನಾಂಕ : 23–11–2011 ರಲ್ಲಿ ವಿವರಿಸಿರುವಂತೆ, ಶ್ರೀ ಕೆ.ರಮೇಶ್‌ರಾಜು, ಅಧ್ಯಕ್ಷರು, ಶಿಕ್ಷಣ ಸ್ಥಾಯಿ ಸಮಿತಿ ರವರು ಪತ್ರ ಬರೆದು ದಿನಾಂಕ 14.09.2011 ರಂದು ನಡೆದ ಶಿಕ್ಷಣ ಸ್ಥಾಯಿ ಸಮಿತಿ ಸಭೆಯಲ್ಲಿ ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳ 10 ದಿನಗಳ ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ಕುರಿತು ತೀರ್ಮಾನಿಸಲಾಗಿರುವುದಾಗಿ ತಿಳಿಸಿ ಸಭೆಯ ನಡವಳಿಗಳನ್ನು ಲಗತ್ತಿಸಿ ಕಳುಹಿಸಿರುತ್ತಾರೆ.

ಸದರಿ ಸಭೆಯಲ್ಲಿ, ಇತರೇ ಮಹಾನಗರಗಳಲ್ಲಿನ ಶೈಕ್ಷಣಿಕ ಗುಣಮಟ್ಟ ಅಧ್ಯಯನ ಮಾಡಿ ಅದನ್ನು ಬಿ.ಬಿ.ಎಂ.ಪಿ. ಶಾಲಾ/ಕಾಲೇಜುಗಳಲ್ಲಿ ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ, 10 ದಿನಗಳ ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳಲು ತೀರ್ಮಾನಿಸಲಾಗಿದ್ದು, ಅದರಂತೆ, ಮುಂಬೈ, ಅಹಮದಾಬಾದ್, ಸುರತ್, ಚಂಡಿಘಡ್, ಜೈಪುರ್ ಹಾಗೂ ದಹಲಿ ನಗರಗಳಿಗೆ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ, ಸಮಿತಿಯ ಅಧ್ಯಕ್ಷರು, ಸದಸ್ಯರು, ಅಧಿಕಾರಿ ಮತ್ತು ಸಿಬ್ಬಂಧಿ ವರ್ಗದವರನ್ನು ಒಳಗೊಂಡ ಒಟ್ಟು 15 ಮಂದಿ ವಿಮಾನದಲ್ಲಿ ಪ್ರಯಾಣಿಸಿ ಭೇಟಿ ನೀಡಲು ತೀರ್ಮಾನಿಸಿರುವುದಾಗಿ, ಇದಕ್ಕೆ ಸಂಬಂಧಪಟ್ಟಂತೆ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಲು ಹಾಗೂ ಮಹಾನಗರ ಪಲಿಕೆಯ ಅನುಮೋದನೆ ಪಡೆಯಲು ಟಿಪ್ಪಣಿ ಮಂಡಿಸಲು ಕೋರಿರುತ್ತಾರೆ.

| ಕ್ರ.ಸಂ | ಅಧಿಕಾರಿಗಳು | |
|---|---|---|
| 1 | ಅಧ್ಯಕ್ಷರು, ಶಿಕ್ಷಣ ಸ್ಥಾಯಿ ಸಮಿತಿ | 1 |
| 2 | ಸಮಿತಿ ಸದಸ್ಯರು | 10 |
| 3 | ಅಧಿಕ ಕೌನ್ಸಿಲ್ ಕಾರ್ಯದರ್ಶಿ | 1 |
| 4 | ಶಿಕ್ಷಣಾಧಿಕಾರಿ | 1 |
| 5 | ಸಾರ್ವಜನಿಕ ಸಂಪರ್ಕಾಧಿಕಾರಿ | 1 |
| 6 | ಸಮಿತಿಯ ಆಪ್ತ ಸಹಾಯಕರು | 1 |
| | **ಒಟ್ಟು** | **15** |

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಸಿಡಿರುವ ಟಿಪ್ಪಣಿ.

***ನಿರ್ಣಯ :–*** **ದಿನಾಂಕ : 23–11–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.**

## *64]. ವಿಷಯದ ಸಂಖ್ಯೆ :–ತೆಆಸ್ಥಾಸ/404/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್‌ಆರ್(4)115/11–12, ದಿನಾಂಕ : 26–11–2011 ರಲ್ಲಿ ವಿವರಿಸಿರುವಂತೆ, ಶ್ರೀ ಆರ್. ಎಸ್. ಸತ್ಯ ನಾರಾಯಣ, ಮಾನ್ಯ ಸದಸ್ಯರು, ವಾರ್ಡ್ –77 (ದತ್ತಾತ್ರೇಯ ದೇವಸ್ಥಾನ) ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಕನ್ನಡ ಕಲಾ ಜ್ಯೋತಿ ಯುವಕರ ಸಂಘ (ರಿ), ನಂ. 60, 2ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು– 20 ರವರು ಬಿಬಿಎಂಪಿ ಯಿಂದ ಧನ ಸಹಾಯ ನೀಡಲು ಕೋರಿ ಮನವಿ ಪತ್ರ ಸಲ್ಲಿಸಿದ್ದು, ಸದರಿ ಪತ್ರವನ್ನು ತಮ್ಮ ಪರಿಶೀಲನೆಗೆ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸ್ಮತ್ತಾ, ಸದರಿಯವರ ಕೋರಿಕೆಯ ಬಗ್ಗೆ ತಮ್ಮಗಳ ಗಮನಕ್ಕೆ ತಂದು ಕೋರುವುದೇನೆಂದರೆ, ಸಂಘದ ಆಶ್ರಯದಲ್ಲಿ ರಾಜ್ಯ ಮಟ್ಟದ ಶ್ರೀ ಕೆಂಪೇಗೌಡ ಪ್ರಶಸ್ತಿ ಹೊನಲು ಬೆಳಕಿನ ಕುಸ್ತಿ ಪಂದ್ಯಗಳನ್ನು ನಡೆಸಿ, ಯುವಶಕ್ತಿಗೆ ಚೈತನ್ಯ ನೀಡುವುದು, ನಾಗರೀಕರಿಗೆ ಮನೋಲ್ಲಾಸ ಪಡಿಸುವುದು ಹಾಗೂ ಈ ಕ್ರೀಡೆಯ ಉನ್ನತಿಗಾಗಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿರುತ್ತಾರೆಂದು, ಮೈಸೂರು ಮಹಾರಾಜರ ಕಾಲಾವಧಿಯಲ್ಲಿ ಕುಸ್ತಿ ಪಂದ್ಯಾವಳಿಗಳಿಗೆ ಹೆಚ್ಚಿನ ಆದ್ಯತೆ ನೀಡಿ, ಈ ಕ್ರೀಡೆಯನ್ನು ಪ್ರೋತ್ಸಾಯಿಸುತ್ತಿದ್ದುದನ್ನು ನಾವುಗಳು ಕಂಡು ಕೇಳಿರುತ್ತೇವೆ. ಪ್ರಸ್ತುತ ದಸರಾ ಸಂದರ್ಭದಲ್ಲಿ ಮಾತ್ರ ಆದ್ಯತೆ ನೀಡುತ್ತಿದ್ದು, ಉಳಿದ ಸಂದರ್ಭಗಳಲ್ಲಿ ಆದ್ಯತೆ ನೀಡದಿರುವುದರಿಂದ, ಈ ಕ್ರೀಡೆಯೇ ನಶಿಸಿ ಹೋಗುತ್ತಿರುವುದನ್ನು ಗುರುತಿಸಬಹುದಾಗಿದೆ. ಆದರೆ ಸದರಿ ಸಂಘದ ಆಶ್ರಯದಲ್ಲಿ ರಾಜ್ಯ ಮಟ್ಟದ ಶ್ರೀ ಕೆಂಪೇಗೌಡ ಪ್ರಶಸ್ತಿ ಹೊನಲು ಬೆಳಕಿನ ಕುಸ್ತಿ ಪಂದ್ಯಗಳನ್ನು ನಡೆಸಿ ಕೊಡುತ್ತಿರುವುದನ್ನು ಗಮನಿಸಿ ಹೆಚ್ಚಿನ ಪ್ರೋತ್ಸಾಹ ನೀಡುವುದು ಸಮಂಜಸವೆಂದು ಭಾವಿಸುತ್ತೇನೆಂದು ತಿಳಿಸಿರುತ್ತಾರೆ. ಆದುದರಿಂದ ಕನ್ನಡ ಕಲಾ ಜ್ಯೋತಿ ಯುವಕರ ಸಂಘ (ರಿ) ರವರ ಕೋರಿಕೆಯನ್ನು ಪರಿಗಣಿಸಿ, ಪ್ರಸ್ತುತ ಸದರಿ ಸಂಸ್ಥೆಯವರು ನಡೆಸಿಕೊಡುತ್ತಿರುವ ಕಾರ್ಯಕ್ರಮಕ್ಕೆ ಹಣಕಾಸಿನ ನೆರವು ಅಗತ್ಯವಾಗಿದ್ದು,

ಅವರ ಕಾರ್ಯವನ್ನು ಪ್ರೋತ್ಸಾಹಿಸಲು ಬಿಬಿಎಂಪಿಯಿಂದ ಧನ ಸಹಾಯದ ಅವಶ್ಯಕತೆ ಇರುವುದರಿಂದ 2011-12 ನೇ ಸಾಲಿನಲ್ಲಿ ಸೂಕ್ತ ಧನ ಸಹಾಯ ಮಾಡಲು ಕೋರುತ್ತೇನೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು **ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ,** ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-**

## *65]. ವಿಷಯದ ಸಂಖ್ಯೆ :-ತೆಆಸ್ಥಾಸ/405/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್ಆರ್(4) 122/11-12, ದಿನಾಂಕ : 26-11-2011 ರಲ್ಲಿ ವಿವರಿಸಿರುವಂತೆ, ಶ್ರೀ ಹೆಚ್. ಎಸ್. ಶಾಂತಿ, ನಂ. 199, 1ನೇ ಮುಖ್ಯರಸ್ತೆ, 9ನೇ ಕ್ರಾಸ್, ಬಾಪೂಜಿನಗರ, ಬೆಂಗಳೂರು- 560 026 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಾನು 1992 ರಲ್ಲಿ ಕರಾಟೆಯಲ್ಲಿ ಬ್ಲಾಕ್ ಬೆಲ್ಟ್ ಪಡೆದಿದ್ದು Taekwon-Do ಅಭ್ಯಾಸ ಮಾಡುತ್ತಿದ್ದು, ಇದರಲ್ಲಿ ರೆಡ್ ಬೆಲ್ಟ್ ಪಡೆದಿದ್ದು ಹರಿಯಾಣದಲ್ಲಿ Taekwon-Do ಬ್ಲಾಕ್ ಬೆಲ್ಟ್ ಪರೀಕ್ಷೆ ಹಾಗೂ 26ನೇ ರಾಷ್ಟ್ರೀಯ Taekwon-Do ಚಾಂಪಿಯನ್ ಷಿಪ್ ನಲ್ಲಿ ಭಾಗವಹಿಸುತ್ತಿರುವುದಾಗಿ ತಿಳಿಸಿ ಹಿಂದಿನ ಸಾಧನೆಗಳ ವಿವರಗಳನ್ನು ಸಲ್ಲಿಸಿ ಆರ್ಥಿಕವಾಗಿ ಹಿಂದುಳಿದಿರುವ ತಮಗೆ ಪಾಲಿಕೆ ವತಿಯಿಂದ ಸಹಾಯಧನ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ 2010-11 ನೇ ಸಾಲಿನಲ್ಲಿ ರೂ. 10,000/-(ಹತ್ತು ಸಾವಿರಗಳು)ಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳಿಗೆ ಐದು ವರ್ಷಗಳಿಗೊಮ್ಮೆ ಅನುದಾನ ಮಂಜೂರು ಮಾಡುವ ಹಾಗೂ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/- ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ. ಆದರೆ ವೈಯ್ಯಕ್ತಿಕ ಮಂಜೂರಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವಿರುವುದಿಲ್ಲ. ಆದಾಗ್ಯೂ, ವಿವೇಚನಾತ್ಮಕ ಅಧಿಕಾರದಿಂದ ಕ್ರೀಡಾಪಟುಗಳಿಗೆ ಹಲವು ಪ್ರಕರಣಗಳಲ್ಲಿ ಕನಿಷ್ಠ ರೂ. 10,000/- ದಿಂದ ಗರಿಷ್ಠ ರೂ. 1.00 ಲಕ್ಷಗಳ ವರೆಗೆ ಧನ ಸಹಾಯವನ್ನು ಮಂಜೂರು ಮಾಡಿರುವ ಉದಾಹರಣೆಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :-*** **ದಿನಾಂಕ : 26-11-2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕ್ರೀಡಾಪಟುವಿಗೆ ರೂ.10,000/- (ಹತ್ತು ಸಾವಿರ) ಗಳ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು**

## *66]. ವಿಷಯದ ಸಂಖ್ಯೆ :-ತೆಆಸ್ಥಾಸ/406/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್ಆರ್(4)81/2011-12, ದಿನಾಂಕ : 26-11-2011 ರಲ್ಲಿ ವಿವರಿಸಿರುವಂತೆ, ಶ್ರೀ ಡಿ.ಬಿ. ಚಂದ್ರೇಗೌಡ, ಮಾನ್ಯ ಲೋಕಸಭಾ ಸದಸ್ಯರು, ಬೆಂಗಳೂರು ಉತ್ತರ ರವರು ಮನವಿ ಸಲ್ಲಿಸಿ, ತನ್ನ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಜೆ.ಸಿ. ನಗರ, ಸರ್ಕಾರಿ ಆಟದ ಮೈದಾನ (ಮುನಿರೆಡ್ಡಿಪಾಳ್ಯ) ಇಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ದಸರಾ ಉತ್ಸವ

ಸಮಿತಿ, ಜೆ.ಸಿ. ನಗರ, ಬೆಂಗಳೂರು ಇವರ ವತಿಯಿಂದ ದಿನಾಂಕ 28–09–2011 ರಿಂದ 06–10–2011 ರವರೆಗೆ ಸಾರ್ವಜನಿಕರ ಆಶಯದಂತೆ ವಿಜೃಂಭಣೆಯಿಂದ ನಾಡಹಬ್ಬ ದಸರಾವನ್ನು ನಡೆಸಲಾಗುತ್ತಿದೆ ಎಂದು ತಿಳಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪ್ರತಿ ವರ್ಷದಂತೆ ಪ್ರಸಕ್ತ ವರ್ಷವೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲು ಅಗತ್ಯ ಅನುದಾನ ನೀಡಿ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

2010–11ನೇ ಸಾಲಿನಲ್ಲಿ ಸದರಿ ಸಮಿತಿಗೆ **ಒಟ್ಟು 15.00 ಲಕ್ಷ ರೂ.ಗಳನ್ನು** ಬಿಡುಗಡೆ ಮಾಡಲಾಗಿರುತ್ತದೆ. **ರೂ. 10.00 ಲಕ್ಷಗಳನ್ನು P0010** ಲೆಕ್ಕ ಶೀರ್ಷಿಕೆಡಿಯಲ್ಲಿ ಮತ್ತು ರೂ. **05.00 ಲಕ್ಷಗಳನ್ನು P0048** ಕೊಡುಗೆ ಮತ್ತು ಸಹಾಯಧನ ಲೆಕ್ಕ ಶೀರ್ಷಿಕೆಯಡಿ ಮಂಜೂರು ಮಾಡಲಾಗಿರುತ್ತದೆ.

ಪ್ರಸಕ್ತ **2011–12ನೇ ಸಾಲಿನ ಆಯವ್ಯಯದಲ್ಲಿ** 24. ಸಂಸ್ಕೃತಿ ಮತ್ತು ಕ್ರೀಡೆ–ಸಭೆ ಸಮಾರಂಭಗಳು, ದಸರಾ ಮಹೋತ್ಸವ **(ಮುನಿರೆಡ್ಡಿಪಾಳ್ಯ ರಾಜಮಹಲ್ ಗುಟ್ಟಳ್ಳಿ)** ಲೆಕ್ಕಶೀರ್ಷಿಕೆಯಡಿಯಲ್ಲಿ **(P0010) ರೂ. 15.00 ಲಕ್ಷಗಳನ್ನು** ಮೀಸಲಿರಿಸಲಾಗಿರುತ್ತದೆ.

ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರ ಸೂಚನೆಯಂತೆ ಸದರಿಯವರಿಗೆ ರೂ. 10.00 ಲಕ್ಷಗಳನ್ನು ಸಮಿತಿಯ **ಘಟನೋತ್ತರ ಅನುಮೋದನೆಗೆ ಕಾಯ್ದಿರಿಸಿ** ಬಿಡುಗಡೆ ಮಾಡಲಾಗಿರುತ್ತದೆ.

ಮುಂದುವರೆದಂತೆ, ಶ್ರೀ ಡಿ.ಬಿ. ಚಂದ್ರೇಗೌಡ, ಮಾನ್ಯ ಲೋಕಸಭಾ ಸದಸ್ಯರು, ಬೆಂಗಳೂರು ಉತ್ತರ ರವರು ದಿನಾಂಕ 15.10.2011 ರಂದು ಮತ್ತೊಮ್ಮೆ ಮನವಿ ಸಲ್ಲಿಸಿ, ಮುನಿರೆಡ್ಡಿ ಪಾಳ್ಯದಲ್ಲಿ ದಸರಾ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗಿದ್ದು, ಸದರಿ ಮಹೋತ್ಸವಕ್ಕೆ ರೂ. 25.00 ಲಕ್ಷಕ್ಕೆ ಮನವಿ ಸಲ್ಲಿಸಿದ್ದು, ಕೇವಲ ರೂ. 10.00 ಲಕ್ಷ ಬಿಡುಗಡೆ ಮಾಡಿರುವುದರಿಂದ ಬಾಕಿ ಮೊತ್ತ ರೂ. 15.00 ಲಕ್ಷಗಳನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಘಟನೋತ್ತರ  ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :–*** **ದಿನಾಂಕ : 26–11–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ದಸರಾ ಉತ್ಸವ ಸಮಿತಿಗೆ ಈಗಾಗಲೇ ಬಿಡುಗಡೆ ಮಾಡಿರುವ ರೂ.10.00 ಲಕ್ಷಗಳ ಅನುದಾನದ ಜೊತೆಗೆ ಹೆಚ್ಚುವರಿಯಾಗಿ ರೂ.7.00 (ಏಳು ಲಕ್ಷ) ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

**ಜಿ. ಮಂಜುನಾಥ್‌ರಾಜು**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**